ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ - 172
ಉತ್ತರಿಸಬೇಕಾದ ದಿನಾಂಕ - 11.07.2018
ಸದಸ್ಯರ ಹೆಸರು - ಶ್ರೀ ಅರಗ ಜ್ಞಾನೇಂದ್ರ(ತೀರ್ಥಹಳ್ಳಿ)

ಕ್ರ ಸಂ.	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಕಳೆದ 3 ವರ್ಷಗಳಿಂದ ವಿವಿಧ ವಸತಿ ಯೋಜನೆಗಳಲ್ಲಿ ಮಂಜೂರು ಮಾಡಿರುವ ಫಲಾನುಭವಿಗಳ ಸಂಖ್ಯೆ ಎಷ್ಟು;	ರಾಜ್ಯದಲ್ಲಿ ವಿವಿಧ ವಸತಿ ಯೋಜನೆಗಳಡಿ ಕಳೆದ ಮೂರು ವರ್ಷಗಳಿಂದ **1735221** ಮನೆಗಳನ್ನು ಮಂಜೂರು ಮಾಡಲಾಗಿದೆ.
ಆ)	ಇವುಗಳಲ್ಲಿ ಇದುವರೆಗೆ ಆರಂಭವಾಗದಿರುವ ಮನೆಗಳ ಸಂಖ್ಯೆ ಎಷ್ಟು; ಇವುಗಳನ್ನು ರದ್ದು ಮಾಡಲಾಗಿದೆಯೇ; ರದ್ದುಪಡಿಸಿದ್ದಲ್ಲಿ, ಅದಕ್ಕೆ ಕಾರಣವೇನು;	ರಾಜ್ಯದಲ್ಲಿ ವಿವಿಧ ವಸತಿ ಯೋಜನೆಗಳಡಿ ಕಳೆದ ಮೂರು ವರ್ಷಗಳಿಂದ ಮಂಜೂರು ಮಾಡಲಾದ 1735221 ಮನೆಗಳಲ್ಲಿ 321607 ಮನೆಗಳು ಇನ್ನೂ ಪ್ರಾರಂಭವಾಗಬೇಕಿರುತ್ತದೆ. ವಸತಿ ಯೋಜನೆಯ ಮಾರ್ಗಸೂಚಿಗಳ ಪ್ರಕಾರ ವಸತಿ ಯೋಜನೆಗಳಡಿ ಆಯ್ಕೆಯಾದ ಫಲಾನುಭವಿಗಳು ಅನುಮೋದನೆ ಪಡೆದ ದಿನಾಂಕದ ನಂತರ 90 ದಿನಗಳೊಳಗೆ ತನ್ನ ಮನೆಯ ಕಾಮಗಾರಿಯನ್ನು ಪ್ರಾರಂಭಿಸಿಕೊಳ್ಳಬೇಕಿರುತ್ತದೆ. ಒಂದು ವೇಳೆ ಈ ಅವಧಿಯೊಳಗೆ ಫಲಾನುಭವಿಯು ಮನೆಯನ್ನು ಪ್ರಾರಂಭ ಮಾಡಿಕೊಳ್ಳದಿದ್ದಲ್ಲಿ ಆಯ್ಕೆಯನ್ನು ರದ್ದುಪಡಿಸಲು ಅವಕಾಶ ಕಲ್ಪಿಸಲಾಗಿದೆ. ಆದಾಗ್ಯೂ ಸಹ ಮನೆ ನಿರ್ಮಾಣದಲ್ಲಿ ಫಲಾನುಭವಿಗೆ ಇರುವ ವೈಯುಕ್ತಿಕ ಸಮಸ್ಯೆಗಳು, ಮಳೆಗಾಲ, ಆರ್ಥಿಕ ಸಮಸ್ಯೆಗಳು, ಬಡತನ ಮುಂತಾದ ಹಿನ್ನೆಲೆಯನ್ನು ಗಮನದಲ್ಲಿಟ್ಟುಕೊಂಡು ಫಲಾನುಭವಿಗೆ ತಿಳುವಳಿಕೆ ಪತ್ರಗಳನ್ನು ಜಾರಿ ಮಾಡುವ ಮೂಲಕ ಅವರ ಮನವೊಲಿಸಿ ಮನೆ ನಿರ್ಮಾಣಕ್ಕೆ ಒತ್ತು ನೀಡಲಾಗಿದೆ. ಅನೇಕ ವಿಡಿಯೋ ಕಾನ್ಫರೆನ್ಸ್ ಮತ್ತು ಪ್ರಗತಿ ಪರಿಶೀಲನಾ ಸಭೆಗಳಲ್ಲಿ ಪ್ರಾರಂಭವಾಗದ ಮನೆಗಳನ್ನು ಕೂಡಲೇ ಪ್ರಾರಂಭಿಸಲು ಬೇಕಾದ ಕ್ರಮಗಳನ್ನು ತೆಗೆದುಕೊಳ್ಳಲು ತಿಳಿಸಲಾಗಿದೆ. ಅಲ್ಲದೇ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ಮೂಲಕ ಸಾಕಷ್ಟು ತಿಳುವಳಿಕೆ ಪತ್ರಗಳನ್ನು ನೀಡಿದ್ದಾಗ್ಯೂ ಸುಮಾರು ಮನೆಗಳು ಪ್ರಾರಂಭವಾಗಿರುವುದಿಲ್ಲ. ತದನಂತರ ಪ್ರಾರಂಭವಾಗದ ಮನೆಗಳನ್ನು ರದ್ದುಪಡಿಸಿ, ಅವಶ್ಯಕತೆ ಇರುವ ಕ್ಷೇತ್ರಗಳಿಗೆ 2017-18ನೇ ಶ್ರೇಣಿಯಡಿಯಲ್ಲಿ ಹೊಸದಾಗಿ ಅರ್ಹ ಫಲಾನುಭವಿಗಳನ್ನು ಆಯ್ಕೆ ಮಾಡಲು ಹೆಚ್ಚುವರಿಯಾಗಿ ಗುರಿ ನಿಗದಿಪಡಿಸಿ ಆಯ್ಕೆ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ.
ಇ)	ಇತ್ತೀಚಿನ ಮರುಳು ಮತ್ತು ಕಲ್ಲಿನ ಅಭಾವದಿಂದ ಮನೆ ಕಟ್ಟಲು ಸಾಧ್ಯವಾಗದಿರುವ ಬಡ ಫಲಾನುಭವಿಗಳಿಗೆ ಪುನರ್ ಮಂಜೂರು ಮಾಡಲು ಆದೇಶ ನೀಡಲಾಗುವುದೆ?	ರದ್ದಾದ ಮನೆಗಳನ್ನು ಪುನರ್ ಮಂಜೂರು ಮಾಡಲು ಅವಕಾಶವಿಲ್ಲ.

ಸಂಖ್ಯೆ: ವಇ 151 ಹೆಚ್‌ಎಎಂ 2018

(ಯು.ಟಿ.ಅಬ್ದುಲ್ ಖಾದರ್)
ವಸತಿ ಸಚಿವರು.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ - 202
ಉತ್ತರಿಸಬೇಕಾದ ದಿನಾಂಕ - 11.07.2018
ಸದಸ್ಯರ ಹೆಸರು - ಶ್ರೀ ಆರ್.ನರೇಂದ್ರ (ಹನೂರು)

ಕ್ರ ಸಂ.	ಪ್ರಶ್ನೆ	ಉತ್ತರ
(ಅ)	ಚಾಮರಾಜನಗರ ಜಿಲ್ಲೆಯ ಕೊಳ್ಳೆಗಾಲ ತಾಲ್ಲೂಕಿಗೆ 2016-17ನೇ ಸಾಲಿನಲ್ಲಿ ಬಸವ ವಸತಿ ಯೋಜನೆಯಲ್ಲಿ ಮನೆಗಳು ಮಂಜೂರಾಗಿದ್ದು, ಇವುಗಳಲ್ಲಿ ಅರ್ಧದಷ್ಟು ಮನೆಗಳನ್ನು ನಿಗಮವು ಬ್ಲಾಕ್ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು
(ಆ)	ಹಾಗಿದ್ದಲ್ಲಿ, ಈ ಮನೆಗಳನ್ನು ಅನ್ ಬ್ಲಾಕ್ ಮಾಡಿ ಬಡಜನರಿಗೆ ಒದಗಿಸಲು ಸರ್ಕಾರ ತೆಗೆದುಕೊಳ್ಳುವ ಕ್ರಮವೇನು? (ವಿವರ ನೀಡುವುದು)	ವಸತಿ ಯೋಜನೆಯ ಮಾರ್ಗಸೂಚಿಗಳ ಪ್ರಕಾರ ವಸತಿ ಯೋಜನೆಗಳಡಿ ಆಯ್ಕೆಯಾದ ಫಲಾನುಭವಿಗಳು, ಅನುಮೋದನೆ ಪಡೆದ ದಿನಾಂಕದ ನಂತರ 90 ದಿನಗಳೊಳಗೆ ತನ್ನ ಮನೆಯ ಕಾಮಗಾರಿಯನ್ನು ಪ್ರಾರಂಭಿಸಿಕೊಳ್ಳಬೇಕಿರುತ್ತದೆ. ಒಂದು ವೇಳೆ ಈ ಅವಧಿಯೊಳಗೆ ಫಲಾನುಭವಿಯು ಮನೆಯನ್ನು ಪ್ರಾರಂಭ ಮಾಡಿಕೊಳ್ಳದಿದ್ದಲ್ಲಿ ಆಯ್ಕೆಯನ್ನು ರದ್ದುಪಡಿಸಲು ಅವಕಾಶ ಕಲ್ಪಿಸಲಾಗಿದೆ. ಆದಾಗ್ಯೂ ಸಹ ಮನೆ ನಿರ್ಮಾಣದಲ್ಲಿ ಫಲಾನುಭವಿಗೆ ಇರುವ ವೈಯುಕ್ತಿಕ ಸಮಸ್ಯೆಗಳು, ಮಳೆಗಾಲ, ಆರ್ಥಿಕ ಸಮಸ್ಯೆಗಳು, ಬಡತನ ಮುಂತಾದ ಹಿನ್ನೆಲೆಯನ್ನು ಗಮನದಲ್ಲಿಟ್ಟುಕೊಂಡು ಫಲಾನುಭವಿಗೆ ತಿಳುವಳಿಕೆ ಪತ್ರಗಳನ್ನು ಜಾರಿ ಮಾಡುವ ಮೂಲಕ ಅವರ ಮನವೊಲಿಸಿ ಮನೆ ನಿರ್ಮಾಣಕ್ಕೆ ಒತ್ತು ನೀಡಲಾಗಿದೆ. ಅನೇಕ ವಿಡಿಯೋ ಕಾನ್ಫರೆನ್ಸ್ ಮತ್ತು ಪ್ರಗತಿ ಪರಿಶೀಲನಾ ಸಭೆಗಳಲ್ಲಿ ಪ್ರಾರಂಭವಾಗದ ಮನೆಗಳನ್ನು ಕೂಡಲೇ ಪ್ರಾರಂಭಿಸಲು ಬೇಕಾದ ಕ್ರಮಗಳನ್ನು ತೆಗೆದುಕೊಳ್ಳಲು ತಿಳಿಸಲಾಗಿದೆ. ಅಲ್ಲದೇ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ಮೂಲಕ ಸಾಕಷ್ಟು ತಿಳುವಳಿಕೆ ಪತ್ರಗಳನ್ನು ನೀಡಿದ್ದಾಗ್ಯೂ ಸುಮಾರು ಮನೆಗಳು ಪ್ರಾರಂಭವಾಗಿರುವುದಿಲ್ಲ. ತದನಂತರ, ಪ್ರಾರಂಭವಾಗದ ಮನೆಗಳನ್ನು ರದ್ದುಪಡಿಸಿ, ಅವಶ್ಯಕತೆ ಇರುವ ಕ್ಷೇತ್ರಗಳಿಗೆ 2017-18ನೇ ಶ್ರೇಣಿಯಡಿಯಲ್ಲಿ ಹೊಸದಾಗಿ ಅರ್ಹ ಫಲಾನುಭವಿಗಳನ್ನು ಆಯ್ಕೆ ಮಾಡಲು ಹೆಚ್ಚುವರಿಯಾಗಿ ಗುರಿ ನಿಗದಿಪಡಿಸಿ ಆಯ್ಕೆ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ. ಅದರಂತೆ, 2016-17ನೇ ಸಾಲಿನ ಬಸವ ವಸತಿ ಯೋಜನೆಯಡಿ ಕೊಳ್ಳೇಗಾಲ ತಾಲ್ಲೂಕಿನಲ್ಲಿ 93 ಮನೆಗಳನ್ನು ರದ್ದುಪಡಿಸಲಾಗಿರುತ್ತದೆ. ಬ್ಲಾಕ್ ಆದ ಫಲಾನುಭವಿಗಳನ್ನು ಮತ್ತೆ ಪರಿಗಣಿಸಲು ಅವಕಾಶವಿಲ್ಲ.

ಸಂಖ್ಯೆ: ವಇ 154 ಹೆಚ್‌ಎಎಂ 2018

(ಯು.ಟಿ.ಅಬ್ದುಲ್ ಖಾದರ್)
ವಸತಿ ಸಚಿವರು.

ಕರ್ನಾಟಕ ವಿಧಾನ ಸಭೆ

1.	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	348
2.	ಸದಸ್ಯರ ಹೆಸರು	:	ಶ್ರೀ ಉಮೇಶ್ ವಿಶ್ವನಾಥ್ ಕತ್ತಿ (ಹುಕ್ಕೇರಿ)
3.	ಉತ್ತರಿಸಬೇಕಾದ ದಿನಾಂಕ	:	11-07-2018
4.	ಉತ್ತರಿಸುವ ಸಚಿವರು	:	ಮಾನ್ಯ ನಗರಾಭಿವೃದ್ಧಿ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಕೇಂದ್ರ ಸರಕಾರ ಪ್ರಾಯೋಜಿತ UIDSSMT ಅಡಿಯಲ್ಲಿ ಹುಕ್ಕೇರಿ ಪಟ್ಟಣದಲ್ಲಿ ಸಮಗ್ರ ಕುಡಿಯುವ ನೀರಿನ ಯೋಜನೆ ಕಾಮಗಾರಿಯನ್ನು ಅನುಷ್ಟಾನ ಮಾಡಲಾಗುತ್ತಿದೆಯೇ;	ಕೇಂದ್ರ ಸರ್ಕಾರ ಪ್ರಾಯೋಜಿತ UIDSSMT ಅಡಿಯಲ್ಲಿ, ರೂ.2617.00 ಲಕ್ಷಗಳ ವೆಚ್ಚದಲ್ಲಿ ಹುಕ್ಕೇರಿ ಪಟ್ಟಣದಲ್ಲಿ ಸಮಗ್ರ ಕುಡಿಯುವ ನೀರಿನ ಯೋಜನೆ ಕಾಮಗಾರಿಯನ್ನು ಅನುಷ್ಠಾನಗೊಳಿಸಲಾಗಿದೆ.
ಆ)	ಈ ಯೋಜನೆಯಡಿ ನಿರ್ಮಿಸಿರುವ 3.50 ಲಕ್ಷ ಲೀ. ಸಾಮರ್ಥ್ಯದ ಜಲ ಸಂಗ್ರಹಗಾರವು ಕಳಪೆ ಕಾಮಗಾರಿಯ ಪರಿಣಾಮವಾಗಿ ಸೋರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಯೋಜನೆಯಡಿ ಒಳಗೊಂಡ ಎಲ್ಲಾ ಕಾಮಗಾರಿಗಳನ್ನು 3ನೇ ವ್ಯಕ್ತಿ ತಪಾಸಣಾ ಸಂಸ್ಥೆ, M/s SGS, ಬೆಂಗಳೂರು ಇವರ ಮೂಲಕ ತಪಾಸಣೆಗೆ ಒಳಪಡಿಸಲಾಗಿದ್ದು, ಕಾಮಗಾರಿಯ ಗುಣಮಟ್ಟದ ಬಗ್ಗೆ ದೃಢೀಕರಿಸಲಾಗಿರುತ್ತದೆ ಹಾಗೂ ಯಾವುದೇ ಕಳಪೆ ಕಾಮಗಾರಿ ಕಂಡು ಬಂದಿರುವುದಿಲ್ಲ. ಯೋಜನೆಯಡಿ ನಿರ್ಮಿಸಲಾದ 3.5 ಲಕ್ಷ ಲೀಟರ್ ಸಾಮರ್ಥ್ಯದ ಜಲಸಂಗ್ರಹಾಗಾರವನ್ನು ತಾಂತ್ರಿಕ ವಿಶ್ಲೇಷಣೆ ಅನುಸಾರ ಹೈಡ್ರಾಲಿಕ್ ಪರೀಕ್ಷೆಗೆ ಒಳಪಡಿಸಲಾಗಿದ್ದ ಸಮಯದಲ್ಲಿ ಸಾಮಾನ್ಯವಾಗಿ ಕಂಡು ಬಂದಿರುವ ಸೋರಿಕೆಯನ್ನು ಪ್ರೆಷರ್ ಗ್ರೌಟಿಂಗ್ ಮೂಲಕ ಸರಿಪಡಿಸಿ ಸೋರಿಕೆಯನ್ನು ತಡೆಗಟ್ಟಲಾಗಿದೆ.
ಇ)	ಬಂದಿದ್ದಲ್ಲಿ, ಕಳಪೆ ಗುಣಮಟ್ಟದ ಈ ಜಲ ಸಂಗ್ರಹಗಾರವನ್ನು ಸರಿಪಡಿಸಲು ಸರ್ಕಾರ ಕೈಗೊಂಡ ಕ್ರಮಗಳೇನು; ಮತ್ತು ಅದನ್ನು ಸರಿಪಡಿಸಲು ಹಾಕಿಕೊಂಡ ಕಾಲಮಿತಿಯೇನು?	ತಪಾಸಣಾ ಸಂಸ್ಥೆ, ಮೂಲಕ ತಪಾಸಣೆಗೆ ಒಳಪಡಿಸಲಾಗಿದ್ದು, ಕಾಮಗಾರಿಯ ಗುಣಮಟ್ಟದ ಬಗ್ಗೆ ದೃಢೀಕರಿಸಲಾಗಿರುತ್ತದೆ ಹಾಗೂ ಕಳಪೆ ಕಾಮಗಾರಿ ಕಂಡು ಬಂದಿರುವುದಿಲ್ಲ. ಜಲಸಂಗ್ರಹಾಗಾರದ ಹೈಡ್ರಾಲಿಕ್ ಪರೀಕ್ಷೆ ಸಮಯದಲ್ಲಿ ಕಂಡು ಬಂದ ಸೋರುವಿಕೆಯನ್ನು ಪ್ರೆಷರ್ ಗ್ರೌಟಿಂಗ್ ಮೂಲಕ ತಡೆಗಟ್ಟಲು ಈಗಾಗಲೇ ಕ್ರಮವಹಿಸಲಾಗಿದೆ.

ನಅಇ 128 ಸಿಎಸ್‌ಎಸ್ 2018

(ಯು.ಟಿ ಖಾದರ್)
ನಗರಾಭಿವೃದ್ಧಿ ಸಚಿವರು.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ - 688
ಉತ್ತರಿಸಬೇಕಾದ ದಿನಾಂಕ - 11.07.2018
ಸದಸ್ಯರ ಹೆಸರು - ಶ್ರೀ ಅರವಿಂದ ಚಂದ್ರಕಾಂತ ಬೆಲ್ಲದ (ಹುಬ್ಬಳ್ಳಿ-ಧಾರವಾಡ ಪಶ್ಚಿಮ)

ಕ್ರ ಸಂ.	ಪ್ರಶ್ನೆ	ಉತ್ತರ
ಅ)	ಹುಬ್ಬಳ್ಳಿ-ಧಾರವಾಡ ಪಶ್ಚಿಮ ಕ್ಷೇತ್ರದಲ್ಲಿ ಇರುವ ಕೊಳಚೆ ಪ್ರದೇಶಗಳನ್ನು ಅಧಿಕೃತವಾಗಿ ಘೋಷಣೆ ಮಾಡಲಾಗಿದೆಯೇ; ಇಲ್ಲದಿದ್ದಲ್ಲಿ ಕಾರಣಗಳೇನು;	ಹುಬ್ಬಳ್ಳಿ-ಧಾರವಾಡ ಪಶ್ಚಿಮ ಕ್ಷೇತ್ರದಲ್ಲಿ ಒಟ್ಟಾರೆ 37 ಕೊಳೆಗೇರಿ ಪ್ರದೇಶಗಳನ್ನು ಅಧಿಕೃತವಾಗಿ ಕರ್ನಾಟಕ ಕೊಳಚೆ ಪ್ರದೇಶಗಳು (ಅಭಿವೃದ್ಧಿ ಮತ್ತು ನಿರ್ಮೂಲನೆ) ಕಾಯ್ದೆ, 1973 ರಡಿ ಘೋಷಣೆ ಮಾಡಲಾಗಿದೆ.
ಆ)	ಯಾವುದೇ ಒಂದು ಪ್ರದೇಶವನ್ನು ಕೊಳಚೆ ಪ್ರದೇಶವೆಂದು ಅಧಿಕೃತವಾಗಿ ಘೋಷಣೆ ಮಾಡಲು ಇರುವ ಸರ್ಕಾರದ ನಿಯಮಗಳೇನು; ಘೋಷಣೆ ಮಾಡಲು ಬೇಕಾಗುವ ಸಮಯ ಎಷ್ಟು;	ಕರ್ನಾಟಕ ಕೊಳಚೆ ಪ್ರದೇಶಗಳ(ಅಭಿವೃದ್ಧಿ ಮತ್ತು ನಿರ್ಮೂಲನೆ)ಕಾಯಿದೆ, 1973ರ ಸೆಕ್ಷನ್ 3(1)ರನ್ವಯ ಯಾವುದೇ ಪ್ರದೇಶವು ಅನೈರ್ಮಲ್ಯಕರ ವಾತಾವರಣ, ಮಿತಿಮೀರಿದ ಸಂದಣಿ, ಸಾರ್ವಜನಿಕ ಆರೋಗ್ಯಕ್ಕೆ ಸುರಕ್ಷಿತವಲ್ಲದ ಹಾಗೂ ಮನುಷ್ಯವಾಸಕ್ಕೆ ಯೋಗ್ಯವಲ್ಲವೆಂದು ಕಂಡುಬಂದು ಮೂಲಭೂತ ಸೌಲಭ್ಯಗಳ ಅಭಾವವಿದೆಯೆಂದು ಕಂಡು ಬಂದಲ್ಲಿ ಅಂತಹ ಪ್ರದೇಶಗಳನ್ನು ಸಂಬಂಧಪಟ್ಟ ಜಿಲ್ಲಾಧಿಕಾರಿಯು ಕೊಳಚೆ ಪ್ರದೇಶಗಳೆಂದು ಅಧಿಕೃತವಾಗಿ ಘೋಷಿಸುತ್ತಾರೆ. ರಾಜ್ಯದಲ್ಲಿ ಕೊಳೆಗೇರಿ ಗುಣಲಕ್ಷಣಗಳನ್ನು ಹೊಂದಿರುವ ಪ್ರದೇಶಗಳನ್ನು ಗುರುತಿಸಿ, ಅವುಗಳು ಕರ್ನಾಟಕ ಕೊಳಚೆ ಪ್ರದೇಶಗಳು(ಅಭಿವೃದ್ಧಿ ಮತ್ತು ನಿರ್ಮೂಲನೆ) ಕಾಯ್ದೆ 1973 ರ ಕಲಂ-03 ಮತ್ತು 11 ರಡಿ ಘೋಷಣೆಗೆ ಅರ್ಹವೆಂದು ಕಂಡು ಬಂದಲ್ಲಿ ಅಧಿಕೃತವಾಗಿ ಘೋಷಿಸಲು ಕರ್ನಾಟಕ ಕೊಳೆಗೇರಿ ಅಭಿವೃದ್ಧಿ ಮಂಡಳಿ ವತಿಯಿಂದ ಸೂಕ್ತ ಪ್ರಸ್ತಾವನೆಯನ್ನು ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ ಕಳುಹಿಸಿಕೊಡಲಾಗುವುದು. ಸಂಬಂಧಪಟ್ಟ ಜಿಲ್ಲಾಧಿಕಾರಿಯು ಆದ್ಯತೆಯ ಮೇರೆಗೆ ಕೊಳಚೆ ಪ್ರದೇಶಗಳೆಂದು ಅಧಿಕೃತವಾಗಿ ಘೋಷಿಸುತ್ತಾರೆ.
ಇ)	ಈ ಕೊಳಚೆ ಪ್ರದೇಶಗಳಲ್ಲಿ ವಾಸಿಸುತ್ತಿರುವವರಿಗೆ ಇದುವರೆಗೂ ಅಧಿಕೃತ ಹಕ್ಕುಪತ್ರ ನೀಡದಿರಲು ಕಾರಣವೇನು;	ಕರ್ನಾಟಕ ಕೊಳಚೆ ಪ್ರದೇಶಗಳು (ಅಭಿವೃದ್ಧಿ ಮತ್ತು ನಿರ್ಮೂಲನೆ) ಕಾಯ್ದೆ 1973ರ ಕಲಂ 3 ಮತ್ತು 11 ರಡಿಯಲ್ಲಿ ಘೋಷಿತ ಕೊಳಚೆ ಪ್ರದೇಶಗಳು ಕ್ರಮಬದ್ಧವಾಗಿಲ್ಲದ ಹಾಗೂ ಹೆಚ್ಚು ಜನಸಾಂದ್ರತೆಯನ್ನು ಹೊಂದಿರುವ ಕಾರಣ ಸದರಿ ಕೊಳಚೆ ಪ್ರದೇಶಗಳನ್ನು ಸಮಗ್ರವಾಗಿ ಅಭಿವೃದ್ಧಿ ಪಡೆಸಲು ಕಷ್ಟಸಾಧ್ಯವಾಗಿರುವುದರಿಂದ ಸರ್ವರಿಗೂ ಸಮನಾದ ವ್ಯವಸ್ಥೆಯನ್ನು ಕಲ್ಪಿಸಲು ಸರ್ಕಾರದ ಆದೇಶ ಸಂಖ್ಯೆ: UDD/ 176/CSS/2010, Dated:24.01.2011ರಲ್ಲಿ ಕೊಳಚೆ ಪ್ರದೇಶಗಳ ನಿವಾಸಿಗಳಿಗೆ ಹಕ್ಕುಪತ್ರಗಳನ್ನು (ಪಟ್ಟಾ) ನೀಡುವ ಬಗ್ಗೆ ತಡೆಹಿಡಿದು Vertical Re-Development of Slums (ಲಂಭಿಕೃತ) ಮಾದರಿಯಲ್ಲಿ ಮನೆಗಳನ್ನು ನಿರ್ಮಿಸಿ ಕೊಳಚೆ ನಿವಾಸಿಗಳಿಗೆ 15 ವರ್ಷಗಳ ಪರಭಾರೆ ಮಾಡಬಾರದಾಗಿ ಷರತ್ತು ವಿಧಿಸಿ ಹಂಚಿಕೆಮಾಡಿ 15 ವರ್ಷಗಳ ನಂತರ ಶುದ್ಧ ಕ್ರಯಪತ್ರವನ್ನು ಮಾಡಿಕೊಡಲು ಆದೇಶಿಸಲಾಗಿರುತ್ತದೆ. ರಾಜ್ಯದಲ್ಲಿರುವ ಕೊಳೆಗೇರಿ ನಿವಾಸಿಗಳಿಗೆ ಹಕ್ಕುಪತ್ರ ನೀಡುವ ಸಂಬಂಧ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಉನ್ನತ ಸಮಿತಿ ರಚಿಸಲಾಗಿರುತ್ತದೆ. ಸದರಿ ಸಮಿತಿಯು ನೀಡುವ ವರದಿಯನ್ನು ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು.
ಈ)	ಹಕ್ಕುಪತ್ರ ನೀಡಲು ಸರ್ಕಾರದ ನೀತಿ-ನಿಯಮಗಳೇನು? (ವಿವರ ಒದಗಿಸುವುದು)	

ಸಂಖ್ಯೆ: ವಇ 09 ಕೊಮಂವಿ 2018

(ಯು.ಟಿ.ಅಬ್ದುಲ್ ಖಾದರ್)
ವಸತಿ ಸಚಿವರು.

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 35
ಉತ್ತರಿಸಬೇಕಾದ ದಿನಾಂಕ : 11.7.2018
ಸದಸ್ಯರ ಹೆಸರು : ಶ್ರೀ ಎಂ.ಪಿ.ರೇಣುಕಾಚಾರ್ಯ
ಉತ್ತರಿಸುವ ಸಚಿವರು : ವಸತಿ ಸಚಿವರು.

ಕ್ರ ಸಂ.	ಪ್ರಶ್ನೆ	ಉತ್ತರ
ಅ)	ಕಳೆದ 3 ವರ್ಷಗಳಲ್ಲಿ ಹೊನ್ನಾಳಿ ವಿಧಾನಸಭಾ ಕ್ಷೇತ್ರಕ್ಕೆ ಯಾವ ಯಾವ ಯೋಜನೆಗಳಡಿ ಎಷ್ಟು ಮನೆಗಳನ್ನು ಹಂಚಿಕೆ ಮಾಡಲಾಗಿದೆ?	ಕಳೆದ 3 ವರ್ಷಗಳಿಂದ ಅಂದರೆ 2015–16 ರಿಂದ 2017–18 ರವರೆಗೆ ಹೊನ್ನಾಳ್ಳಿ ವಿಧಾನಸಭಾ ಕ್ಷೇತ್ರಕ್ಕೆ ವಿವಿಧ ವಸತಿ ಯೋಜನೆಯಡಿ 7483 ಮನೆಗಳನ್ನು ಹಂಚಿಕೆ ಮಾಡಲಾಗಿದ್ದು, ವಿವರ ಈ ಕೆಳಗಿನಂತಿದೆ.

ಯೋಜನೆ	2015–16	2016–17	2017–18	ಒಟ್ಟು
ಪ್ರಧಾನ ಮಂತ್ರಿ ಆವಾಸ್ ಯೋಜನೆ (ಗ್ರಾ) / ಇಂದಿರಾ ಆವಾಸ್ ಯೋಜನೆ	645	188	43	876
ಬಸವ ವಸತಿ ಯೋಜನೆ	1100	1526	1073	3699
ಡಾ. ಬಿ.ಆರ್. ಅಂಬೇಡ್ಕರ್ ಯೋಜನೆ	732	1171	775	2678
ದೇವರಾಜ ಅರಸು ಯೋಜನೆ	5	225	0	230
ಒಟ್ಟು	**2482**	**3110**	**1891**	**7483**

ಕ್ರ ಸಂ.	ಪ್ರಶ್ನೆ	ಉತ್ತರ
ಆ)	ಹಂಚಿಕೆ ಮಾಡಿರುವ ಮನೆಗಳ ನಿರ್ಮಾಣವು ಪ್ರಸ್ತುತ ಯಾವ ಹಂತದಲ್ಲಿವೆ?	ಹಂಚಿಕೆ ಮಾಡಲಾದ 7483 ಮನೆಗಳಲ್ಲಿ 2591 ಮನೆಗಳು ಪೂರ್ಣಗೊಂಡಿದ್ದು, 2224 ಮನೆಗಳು ವಿವಿಧ ಹಂತದ ಪ್ರಗತಿಯಲ್ಲಿದ್ದು, 1841 ಮನೆಗಳು ಪ್ರಾರಂಭವಾಗಬೇಕಿರುತ್ತವೆ. 827 ಮನೆಗಳು ಬ್ಲಾಕ್ ಆಗಿರುತ್ತವೆ. ವಿವರ ಈ ಕೆಳಗಿನಂತೆ ಇದೆ.

ಪೂರ್ಣ ಗೊಂಡ ಮನೆಗಳು	ಪ್ರಗತಿಯಲ್ಲಿರುವ ಮನೆಗಳು				ಪ್ರಾರಂಭ–ವಾಗಬೇಕಾದ ಮನೆಗಳು	ಬ್ಲಾಕ್ ಆದ ಮನೆಗಳು
	ತಳಪಾಯ	ಗೋಡೆ	ಛಾವಣಿ	ಒಟ್ಟು		
2591	1027	567	630	2224	1841	827

ಸಂಖ್ಯೆ: ವಇ 149 ಹೆಚ್‌ಎಎಂ 2018

(ಯು.ಟಿ.ಅಬ್ದುಲ್ ಖಾದರ್)
ವಸತಿ ಸಚಿವರು.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ – 484
ಉತ್ತರಿಸಬೇಕಾದ ದಿನಾಂಕ – 11.07.2018
ಸದಸ್ಯರ ಹೆಸರು – ಶ್ರೀ ಬಸವರಾಜ್ ಮತ್ತಿಮುಡ (ಗುಲ್ಬರ್ಗಾ ಗ್ರಾಮಾಂತರ)

ಕ್ರ ಸಂ.	ಪ್ರಶ್ನೆ	ಉತ್ತರ
(ಅ)	ಕಳೆದ ಮೂರು ವರ್ಷಗಳಿಂದ ಕಲಬುರಗಿ ಗ್ರಾಮಾಂತರ ಮತಕ್ಷೇತ್ರಕ್ಕೆ ವಿವಿಧ ಯೋಜನೆಗಳಲ್ಲಿ ಮಂಜೂರಾದ ಮನೆಗಳ ಸಂಖ್ಯೆ ಎಷ್ಟು? (ಯೋಜನಾವಾರು ಮಾಹಿತಿ ಒದಗಿಸುವುದು)	ಕಳೆದ ಮೂರು ವರ್ಷಗಳಿಂದ ಅಂದರೆ 2015–16 ರಿಂದ 2017–18 ರವರೆಗೆ ಕಲಬುರಗಿ ಗ್ರಾಮಾಂತರ ಮತಕ್ಷೇತ್ರಕ್ಕೆ ವಿವಿಧ ವಸತಿ ಯೋಜನೆಗಳಲ್ಲಿ 6,837 ಮನೆಗಳನ್ನು ಮಂಜೂರು ಮಾಡಲಾಗಿದ್ದು, ವಿವರ ಈ ಕೆಳಗಿನಂತೆ ಇದೆ.

ಶ್ರೇಣಿ	ಮಂಜೂರಾದ ಮನೆಗಳು
2015–2016	1858
2016–2017	2459
2017–2018	2520
ಒಟ್ಟು	**6837**

ಯೋಜನಾವಾರು ವಿವರಗಳನ್ನು **ಅನುಬಂಧ–1** ರಲ್ಲಿ ಒದಗಿಸಲಾಗಿದೆ.

ಕ್ರ ಸಂ.	ಪ್ರಶ್ನೆ	ಉತ್ತರ
(ಆ)	ಸದರಿ ಮನೆಗಳಲ್ಲಿ ಹಂಚಿಕೆಯಾಗಿರುವ ಮನೆಗಳ ಸಂಖ್ಯೆಗಳೆಷ್ಟು? ಹಂಚಿಕೆಯಾಗದೆ ಇರುವ ಮನೆಗಳ ಸಂಖ್ಯೆ ಎಷ್ಟು? (ಗ್ರಾಮವಾರು ಮಾಹಿತಿ ಒದಗಿಸುವುದು)	ಮೇಲೆ ತಿಳಿಸಲಾದ ಮಂಜೂರು ಮಾಡಲಾದ 6,837 ಮನೆಗಳ ಪೈಕಿ 5829 ಮನೆಗಳನ್ನು ಹಂಚಿಕೆ ಮಾಡಲಾಗಿದ್ದು, 1,008 ಮನೆಗಳು ಹಂಚಿಕೆಗೆ ಬಾಕಿ ಇದ್ದು, ವಿವರ ಈ ಕೆಳಗಿನಂತಿದೆ.

ಶ್ರೇಣಿ	ಮಂಜೂರಾದ ಮನೆಗಳು	ಹಂಚಿಕೆಯಾದ ಮನೆಗಳು	ಹಂಚಿಕೆಗೆ ಬಾಕಿ
2015–2016	1858	1858	0
2016–2017	2459	1988	471
2017–2018	2520	1983	537
ಒಟ್ಟು	**6837**	**5829**	**1008**

ಗ್ರಾಮ ಪಂಚಾಯಿತಿವಾರು ವಿವರಗಳು ಲಭ್ಯವಿದ್ದು, ವಿವರಗಳನ್ನು **ಅನುಬಂಧ–2** ರಲ್ಲಿ ಒದಗಿಸಲಾಗಿದೆ.

ಸಂಖ್ಯೆ: ವಇ 172 ಹೆಚ್‌ಎಎಂ 2018

(ಯು.ಟಿ.ಅಬ್ದುಲ್ ಖಾದರ್)
ವಸತಿ ಸಚಿವರು.

Annexure 1

ಯೋಜನೆ	ಉಪಯೋಜನೆ	ಶ್ರೇಣಿ	ಮಂಜೂರು ಮಾಡಲಾದ ಮನೆಗಳು
Basava Housing Scheme		2015-2016	776
Dr.B.R Ambedkar Nivas Yojana Rural		2015-2016	421
IAY	IAY-Construction-Physical	2015-2016	639
Rural Special Housing Schemes	Leather Artisans-(LIDKAR)	2015-2016	8
Rural Special Housing Schemes	Physically Handicaps	2015-2016	14
		2015-2016 Total	**1858**
Basava Housing Scheme		2016-2017	870
Basava Housing Scheme_Additional		2016-2017	350
Devraj Urs Housing Scheme-Rural	Artisans-I&C Dept Individual	2016-2017	1
Devraj Urs Housing Scheme-Rural	Devadasi-KSWDC	2016-2017	4
Devraj Urs Housing Scheme-Rural	Leather Artisans-(LIDKAR)	2016-2017	4
Devraj Urs Housing Scheme-Rural	Physically Handicaps	2016-2017	50
Devraj Urs Housing Scheme-Rural	Weavers(Textile Dept)	2016-2017	2
Devraj Urs Housing Scheme-Rural	Widows	2016-2017	61
Dr.B.R Ambedkar Nivas Yojana Rural		2016-2017	719
PMAY(G)		2016-2017	235
PMAY(G)-Additional		2016-2017	163
		2016-2017 Total	**2459**
Basava Housing Scheme		2017-2018	492
Basava Housing Scheme_Additional		2017-2018	65
Devraj Urs Housing Scheme-Rural	Physically Handicaps	2017-2018	9
Devraj Urs Housing Scheme-Rural	Widows	2017-2018	143
Dr.B.R Ambedkar Nivas Yojana Rural		2017-2018	1592
PMAY(G)		2017-2018	219
		2017-2018 Total	**2520**
		Grand Total	**6837**

Magr-(PMAY-G)

LAQ 484 Annexure 2

ತಾಲ್ಲೂಕು	ಗ್ರಾಮ ಪಂಚಾಯಿತಿ	ಮಂಜೂರು ಮಾಡಲಾದ ಮನೆಗಳು	ಹಂಚಿಕೆ ಮಾಡಲಾದ ಮನೆಗಳು	ಬಾಕಿ
Aland	Ambalga	77	2	75
Aland	Belamagi	87	81	6
Aland	Bhodhan	144	123	21
Aland	Chnchansoor	78	26	52
Aland	Kamalanagar	130	105	25
Aland	Keriambalga	118	90	28
Aland	Madki	69	68	1
Aland	Narona	47	22	25
Aland	Sirachand	145	104	41
Chittapur	Martor	375	368	7
Chittapur	Tosanhalli [s]	367	366	1
Kalaburagi	Algud	241	231	10
Kalaburagi	Avarad B	371	365	6
Kalaburagi	Babalad I K	157	140	17
Kalaburagi	Bhopal Tegnur	234	164	70
Kalaburagi	Dongargaon	180	173	7
Kalaburagi	Hagargi	54	39	15
Kalaburagi	Harasoor	208	178	30
Kalaburagi	Holkunda	203	172	31
Kalaburagi	Jeevanagi	266	224	42
Kalaburagi	Kalahangarga	71	42	29
Kalaburagi	Kalamood	291	291	0
Kalaburagi	Kamalapur	344	323	21
Kalaburagi	Kinni Sadak	159	137	22
Kalaburagi	Kurikota	176	160	16
Kalaburagi	Kusnoor	168	98	70
Kalaburagi	Mahagaon	407	287	120
Kalaburagi	Margutti	287	250	37
Kalaburagi	Nagoor	179	171	8
Kalaburagi	Nandoor K	217	204	13
Kalaburagi	Okali	293	263	30
Kalaburagi	Sonth	481	461	20
Kalaburagi	Srinivas Saradgi	213	101	112
	Total	**6837**	**5829**	**1008**

(P MAY -4)

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ – 197
ಉತ್ತರಿಸಬೇಕಾದ ದಿನಾಂಕ – 11.07.2018
ಸದಸ್ಯರ ಹೆಸರು – ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ(ಶಿರಸಿ)

ಕ್ರ. ಸಂ.	ಪ್ರಶ್ನೆ	ಉತ್ತರ
(ಅ)	ಉತ್ತರ ಕನ್ನಡ ಜಿಲ್ಲೆಯ ಶಿರಸಿ ಮತ್ತು ಸಿದ್ಧಾಪುರ ತಾಲ್ಲೂಕುಗಳಲ್ಲಿ 2016-17 ಹಾಗು 2017-18ನೇ ಸಾಲಿನಲ್ಲಿ ಬಸವ ವಸತಿ ಯೋಜನೆಯಡಿಯಲ್ಲಿ ಮಂಜೂರಾದ ಮನೆಗಳೆಷ್ಟು; ಮನೆ ಪಡೆದುಕೊಂಡ ಫಲಾನುಭವಿಗಳ ಸಂಖ್ಯೆ ಎಷ್ಟು; (ವಿವರ ಒದಗಿಸುವುದು)	ಉತ್ತರ ಕನ್ನಡ ಜಿಲ್ಲೆಯ ಶಿರಸಿ ಮತ್ತು ಸಿದ್ಧಾಪುರ ತಾಲ್ಲೂಕುಗಳಲ್ಲಿ 2016– ಹಾಗೂ 2017–18ನೇ ಸಾಲಿನಲ್ಲಿ ಬಸವ ವಸತಿ ಯೋಜನೆಯಡಿಯಲ್ಲಿ ಒಟ್ಟು 307 ಮಂಜೂರು ಮಾಡಲಾಗಿದ್ದು, ಈ ಗುರಿಗೆ ಎದುರಾಗಿ 2814 ಫಲಾನುಭವಿಗ ಆಯ್ಕೆಯಾಗಿರುತ್ತಾರೆ. ವಿವರ ಈ ಕೆಳಗಿನಂತಿದೆ;

ತಾಲ್ಲೂಕು	ಶ್ರೇಣಿ	ಮಂಜೂರು ಮಾಡಲಾದ ಮನೆಗಳು	ಮನೆ ಪಡೆದುಕೊಂಡ/ ಆಯ್ಕೆಯಾದ ಮನೆಗಳು
ಸಿದ್ಧಾಪುರ	2016–17	622	611
	2017–18	460	400
	2017–18 Addl	345	281
ಸಿದ್ಧಾಪುರ ಒಟ್ಟು		**1427**	**1292**
ಶಿರಸಿ	2016–17	709	706
	2017–18	705	667
	2017–18 Addl	234	149
ಶಿರಸಿ ಒಟ್ಟು		1648	**1522**
ಒಟ್ಟು		**3075**	**2814**

ಕ್ರ. ಸಂ.	ಪ್ರಶ್ನೆ	ಉತ್ತರ
(ಆ)	ಈ ಯೋಜನೆಯಡಿಯಲ್ಲಿ ಶಿರಸಿ ಮತ್ತು ಸಿದ್ಧಾಪುರ ತಾಲ್ಲೂಕುಗಳಲ್ಲಿ ಮನೆ ನಿರ್ಮಾಣ ಕಾರ್ಯ ಯಾವ ಹಂತದಲ್ಲಿದೆ; ಕಾಮಗಾರಿ ವಿಳಂಬವಾಗಲು ಕಾರಣಗಳೇನು; ತ್ವರಿತಗತಿಯಲ್ಲಿ ಮನೆ ನಿರ್ಮಿಸಲು ಸರ್ಕಾರ ಯಾವ ಕ್ರಮಕೈಗೊಂಡಿದೆ? (ವಿವರ ಒದಗಿಸುವುದು)	ಬಸವ ವಸತಿ ಯೋಜನೆಯಡಿಯಲ್ಲಿ ಶಿರಸಿ ಮತ್ತು ಸಿದ್ಧಾಪುರ ತಾಲ್ಲೂಕುಗಳ ಮನೆ ನಿರ್ಮಾಣ ಕಾರ್ಯದ ವಿವರವನ್ನು ಅನುಬಂಧ ದಲ್ಲಿ ಒದಗಿಸಲಾಗಿದೆ. ವಿವಿಧ ವಸತಿ ಯೋಜನೆಗಳಡಿಯಲ್ಲಿ ಫಲಾನುಭವಿಗಳು ತಮ್ಮ ಮನೆಗಳನ್ನು ತಾವೆ ನಿರ್ಮಿಸಿಕೊಳ್ಳಬೇಕಿರುತ್ತದೆ. ಕೆಲವು ಫಲಾನುಭವಿಗಳಿಗೆ ಸಾಕಷ್ಟು ಕಾಲಾವಾಕಾಶ ನೀಡಿದರೂ ಹಾಗೂ ಸ್ಥಳೀಯ ಅಧಿಕಾರಿಗಳು ಪೂರ್ಣ ಸಹಕಾರ ಹಾಗೂ ಪ್ರೋತ್ಸಾಹ ನೀಡಿದರೂ ಸಹಾ ತಮ್ಮ ವೈಯಕ್ತಿಕ ಕಾರಣಗಳಿಂದ ಮನೆಗಳನ್ನು ನಿಗದಿತ ಸಮಯದಲ್ಲಿ ನಿರ್ಮಿಸಿಕೊಳ್ಳಲು ಆಸಕ್ತಿ ತೋರುತ್ತಿಲ್ಲ. ಆದಕಾರಣ ಮಂಜೂರಾದ ಮನೆಗಳನ್ನು ನಿಗದಿ ಸಮಯದಲ್ಲಿ ಪೂರ್ಣಗೊಳಿಸಲು ಸಾಧ್ಯವಾಗುತ್ತಿಲ್ಲ. ಆದರೂ ಸಹ ಅಂತಹ ಫಲಾನುಭವಿಗಳ ಮನವೊಲಿಸಿ ಮನೆಗಳನ್ನು ಪೂರ್ಣಗೊಳಿಸಲು ಕ್ರಮವಹಿಸಲಾಗುತ್ತಿದೆ. ಆದಾಗ್ಯೂ, ಸಹ ಮನೆ ನಿರ್ಮಾಣದಲ್ಲಿ ಫಲಾನುಭವಿಗೆ ಇರುವ ವೈಯುಕ್ತಿಕ ಸಮಸ್ಯೆಗಳು ಮಳೆಗಾಲ, ಆರ್ಥಿಕ ಸಮಸ್ಯೆಗಳು, ಬಡತನ ಮುಂತಾದ ಹಿನ್ನೆಲೆಯನ್ನು ಗಮನದಲ್ಲಿಟ್ಟುಕೊಂಡು ಫಲಾನುಭವಿಗೆ ತಿಳುವಳಿಕೆ ಪತ್ರಗಳನ್ನು ಜಾರಿ ಮಾಡುವ ಮೂಲಕ ಅವರ ಮನವೊಲಿಸಿ ಮನೆ ನಿರ್ಮಾಣಕ್ಕೆ ಒತ್ತು ನೀಡಲಾಗಿದೆ ಹಾಗೂ ಅನೇಕ ವಿಡಿಯೋ ಕಾನ್ಫರೆನ್ಸ್ ಮತ್ತು ಪ್ರಗತಿ ಪರಿಶೀಲನಾ ಸಭೆಗಳಲ್ಲಿ ಪ್ರಾರಂಭವಾಗದ ಮನೆಗಳನ್ನು ಕೂಡಲೇ ಪ್ರಾರಂಭಿಸಲು ಬೇಕಾದ ಕ್ರಮಗಳನ್ನು ತೆಗೆದುಕೊಳ್ಳಲು ತಿಳಿಸಲಾಗಿದೆ.

ಸಂಖ್ಯೆ: ವಇ 153 ಹೆಚ್ಎಎಂ 2018

(ಯು.ಟಿ.ಅಬ್ದುಲ್ ಖಾದರ್)
ವಸತಿ ಸಚಿವರು.

ಅನುಬಂಧ-1

ಶಿರಸಿ ಮತ್ತು ಸಿದ್ದಾಪುರ ತಾಲ್ಲೂಕುಗಳಲ್ಲಿ ಮನೆ ನಿರ್ಮಾಣಕಾರ್ಯ ವಿವರ

District	Taluk	Scheme	Series	Target	Approved	Completed	Fondation	Lintel	Roof	Unstarted	Blocked
UttaraKannada	Siddapura	Basava Housing Scheme	2016-17	622	611	316	58	96	66	1	74
UttaraKannada	Siddapura	Basava Housing Scheme	2017-18	460	400	5	86	43	23	236	7
UttaraKannada	Siddapura	Basava Housing Scheme_Additional	2017-18	345	281	2	66	20	14	178	1
	Siddapura Total			**1427**	**1292**	**323**	**210**	**159**	**103**	**415**	**82**
UttaraKannada	Sirsi	Basava Housing Scheme	2016-17	709	706	255	84	135	120	1	111
UttaraKannada	Sirsi	Basava Housing Scheme	2017-18	705	667	7	155	53	27	420	5
UttaraKannada	Sirsi	Basava Housing Scheme_Additional	2017-18	234	149	0	16	1	2	130	0
	Sirsi Total			1648	**1522**	**262**	**255**	**189**	**149**	**551**	**116**
Grand Total				**3075**	**2814**	**585**	**465**	**348**	**252**	966	**198**

D. Raikar

ಕರ್ನಾಟಕ ವಿಧಾನ ಸಭೆ

01.	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	440
02.	ಮಾನ್ಯ ವಿಧಾನ ಸಭೆ ಸದಸ್ಯರ ಹೆಸರು	:	ಶ್ರೀ ಕೆ.ಎಸ್. ಈಶ್ವರಪ್ಪ
03.	ಉತ್ತರಿಸುವ ದಿನಾಂಕ	:	11.07.2018
04.	ಉತ್ತರಿಸುವ ಸಚಿವರು	:	ಉಪ ಮುಖ್ಯ ಮಂತ್ರಿಯವರು

ಕ್ರ.ಸ	ಪ್ರಶ್ನೆ	ಉತ್ತರ
ಅ	ಕಳೆದ 3 ವರ್ಷಗಳಲ್ಲಿ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಗಳ ಕರ್ತವ್ಯಗಳಿಗೆ ಅಡ್ಡಿಪಡಿಸಿರುವ ಬಗ್ಗೆ ರಾಜ್ಯದಲ್ಲಿ ದಾಖಲು ಆಗಿರುವ ಎಫ್.ಐ.ಆರ್‌ಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರ ನೀಡುವುದು)	ರಾಜ್ಯದಲ್ಲಿ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಗಳ ಕರ್ತವ್ಯಗಳಿಗೆ ಅಡ್ಡಿಪಡಿಸಿರುವ ಬಗ್ಗೆ ರಾಜ್ಯದಲ್ಲಿ ದಾಖಲಾಗಿರುವ ಎಫ್.ಐ.ಆರ್‌ಗಳ ಸಂಖ್ಯಾವಾರು ಜಿಲ್ಲಾವಾರು ವಿವರವನ್ನು **ಅನುಬಂಧ-'ಅ'** ದಲ್ಲಿ ನೀಡಲಾಗಿದೆ.
ಆ	ರಾಜ್ಯದಲ್ಲಿ ಕಳೆದ 3 ವರ್ಷಗಳ ಪೂರ್ವದಲ್ಲಿದ್ದ ರೌಡಿ ಶೀಟರ್‌ಗಳ ಸಂಖ್ಯೆ ಎಷ್ಟು? ಕಳೆದ 3 ವರ್ಷಗಳಲ್ಲಿ ದಾಖಲಿಸಿರುವ ಹೊಸ ರೌಡಿ ಶೀಟರ್‌ಗಳ ಸಂಖ್ಯೆ ಎಷ್ಟು? ಕಳೆದ ಮೂರು ವರ್ಷಗಳಲ್ಲಿ ರೌಡಿ ಶೀಟರ್‌ಗಳನ್ನು ನಿಯಂತ್ರಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು.	ರಾಜ್ಯದಲ್ಲಿ ಕಳೆದ 3 ವರ್ಷಗಳ ಪೂರ್ವದಲ್ಲಿದ್ದ ರೌಡಿ ಶೀಟರ್‌ಗಳ ಸಂಖ್ಯಾವಾರು ವಿವರ ಹಾಗೂ ಕಳೆದ 3 ವರ್ಷಗಳಲ್ಲಿ ದಾಖಲಿಸಿರುವ ಹೊಸ ರೌಡಿ ಶೀಟರ್‌ಗಳ ಸಂಖ್ಯಾವಾರು ವಿವರವನ್ನು **ಅನುಬಂಧ-'ಅ'** ದಲ್ಲಿ ನೀಡಲಾಗಿದೆ. **ರೌಡಿಶೀಟರ್‌ಗಳನ್ನು ನಿಯಂತ್ರಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮ.** ➢ ರೌಡಿ ಶೀಟರ್‌ಗಳ ವಿರುದ್ಧ ಭದ್ರತಾ ಕಾಯಿದೆ ಅಡಿ ಪ್ರಕರಣಗಳನ್ನು ದಾಖಲಿಸಲಾಗುವು. ➢ ಪೊಲೀಸ್ ಠಾಣೆಗಳಲ್ಲಿ ಪ್ರಕರಣ ದಾಖಲಿಸಿದ ನಂತರ ರೌಡಿ ಶೀಟರ್‌ಗಳನ್ನು ಸಂಬಂಧಿಸಿದ ದಂಡಾಧಿಕಾರಿಗಳಲ್ಲಿ ಹಾಜರುಪಡಿಸಿ. ಸದರಿ ಆಸಾಮಿಗಳಿಂದ ಭದ್ರತಾ ಕಾಯ್ದೆ ಅನುಸಾರ ನಿರ್ದಿಷ್ಟ ಮೊತ್ತಕ್ಕೆ ಮುಚ್ಚಳಿಕೆಯನ್ನು ಪಡೆಯಲಾಗುತ್ತದೆ. ➢ ಪೊಲೀಸ್ ಠಾಣೆಗಳಲ್ಲಿರುವ ಬೀಟ್ ವ್ಯವಸ್ಥೆಯಲ್ಲಿ ರೌಡಿ ಶೀಟರ್‌ಗಳ ಚಲನವಲನಗಳ ಮೇಲೆ ನಿಗಾವಹಿಸಲಾಗುವುದು. ➢ ಪೊಲೀಸ್ ಠಾಣಾವಾರು ರೌಡಿ ಶೀಟರ್‌ಗಳ ಪೆರೇಡ್ ನಡೆಸಿ ಅವರು ರೌಡಿ ಚಟುವಟಿಕೆಗಳಲ್ಲಿ ಭಾಗವಹಿಸದಂತೆ ಎಚ್ಚರಿಕೆ ನೀಡಲಾಗುತ್ತದೆ.

		➢ ರೌಡಿ ಶೀಟ್‌ನಲ್ಲಿರುವ ವ್ಯಕ್ತಿಯು ಪುನ: ಪುನ: ಅಪರಾಧಗಳಲ್ಲಿ ಭಾಗವಹಿಸಿದ ಸಂದರ್ಭಗಳಲ್ಲಿ ಅವರ ವಿರುದ್ಧ ಗೂಂಡಾ ಕಾಯ್ದೆ ಮತ್ತು ಗಡಿಪಾರು ಶಿಕ್ಷೆಯನ್ನು ವಿಧಿಸಲು ಸಹ ಕ್ರಮ ತೆಗೆದುಕೊಳ್ಳಲಾಗುತ್ತದೆ.
ಇ	ಕಳೆದ 3 ವರ್ಷಗಳಲ್ಲಿ ಪೊಲೀಸ್ ಇಲಾಖೆಯಲ್ಲಿ ಸ್ವಯಂ ನಿವೃತ್ತಿ ತೆಗೆದುಕೊಂಡಿರುವ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಗಳ ಸಂಖ್ಯೆ ಎಷ್ಟು:	ಕಳೆದ 3 ವರ್ಷಗಳಲ್ಲಿ ಪೊಲೀಸ್ ಇಲಾಖೆಯಲ್ಲಿ ಒಟ್ಟು **250** ಪೊಲೀಸ್ ಅಧಿಕಾರಿ/ಸಿಬ್ಬಂದಿಗಳು ಸ್ವಯಂ ನಿವೃತ್ತಿಯನ್ನು ತೆಗೆದುಕೊಂಡಿರುತ್ತಾರೆ.
ಈ	ಪೊಲೀಸ್ ಇಲಾಖೆಯ ಸಿಬ್ಬಂದಿಗಳ ಭದ್ರತಾ ದೃಷ್ಟಿಯಿಂದ ರಾಜ್ಯ ಸರ್ಕಾರ ಕಳೆದ 3 ವರ್ಷಗಳಲ್ಲಿ ತೆಗೆದುಕೊಂಡಿರುವ ಹೊಸ ಭದ್ರತಾ ಸೌಕರ್ಯಗಳು ಯಾವುವು?	➢ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಯವರ ಭದ್ರತಾ ದೃಷ್ಟಿಯಿಂದ ತರಬೇತಿ ಸಮಯದಲ್ಲಿ ಪ್ರಶಿಕ್ಷಣಾರ್ಥಿಗಳಿಗೆ ಸ್ವಯಂ ರಕ್ಷಣೆಯ ತರಬೇತಿ ನೀಡಲಾಗುತ್ತದೆ. ➢ ಈ ಬಗ್ಗೆ ಆಗಾಗ್ಗೆ ಪುನರ್‌ಮನನ ತರಬೇತಿಯನ್ನು ಸಹ ನೀಡಲಾಗುತ್ತದೆ. ➢ ಆರೋಗ್ಯದ ಹಿತದೃಷ್ಟಿಯಿಂದ ಉಚಿತವಾಗಿ ವಾರ್ಷಿಕ ವೈದ್ಯಕೀಯ ಪರೀಕ್ಷೆಗಳನ್ನು ಸಹ ಮಾಡಿಸಲಾಗುತ್ತಿದೆ. ➢ ದೈಹಿಕ ಮತ್ತು ಮಾನಸಿಕ ಸದೃಢತೆಗಾಗಿ ಕವಾಯತು, ಯೋಗ ಶಿಬಿರಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ➢ ಭದ್ರತಾ ದೃಷ್ಟಿಯಿಂದ ಪ್ರತಿ ಸಿಬ್ಬಂದಿಯವರಿಗು ಹೆಲ್ಮೆಟ್, ಬಾಡಿ ಪ್ರೋಟೆಕ್ಟರ್, ಕೇನ್‌ಶೀಲ್ಡ್ ಲಾಠಿ, ಆಧುನಿಕ ಆಯುಧಗಳು ಇತ್ಯಾದಿ ಭದ್ರತಾ ಸೌಕರ್ಯ ಸಾಮಗ್ರಿಗಳನ್ನು ನೀಡಲಾಗಿದೆ. ➢ ಕರ್ತವ್ಯ ನಿರತ ಸಿಬ್ಬಂದಿಗಳಿಗೆ ಗಸ್ತು ಕರ್ತವ್ಯ / ಪೆಟ್ರೋಲಿಂಗ್‌ಗಾಗಿ ಹೊಸ ಮಾದರಿಯ ವಾಹನ ಸೌಲಭ್ಯಗಳನ್ನು ನೀಡಲಾಗಿದೆ.

ಒಇ 47 ಪಿಸಿಕ್ಯೂ 2018

(ಡಾ|| ಜಿ.ಪರಮೇಶ್ವರ)
ಉಪ ಮುಖ್ಯ ಮಂತ್ರಿ

ಅನುಬಂಧ-ಅ

ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಗಳ ಕರ್ತವ್ಯಗಳಿಗೆ ಅಡ್ಡಿಪಡಿಸಿರುವ ಬಗ್ಗೆ ರಾಜ್ಯದಲ್ಲಿ ದಾಖಲು ಆಗಿರುವ ಎಫ್.ಐ.ಆರ್‌ಗಳ ವಿವರ 2015 ರಿಂದ 2018 (30.06.2018) ರವರೆಗೆ

ಕ್ರಸ	ನಗರ/ಜಿಲ್ಲೆ	2015	2016	2017	2018
1.	ಬೆಂಗಳೂರು ನಗರ	190	135	180	61
2.	ಮೈಸೂರು ನಗರ	32	20	24	11
3.	ಹುಬ್ಬಳ್ಳಿ-ಧಾರವಾಡ	13	8	6	4
4.	ಮಂಗಳೂರು ನಗರ	28	22	22	6
5.	ಬೆಳಗಾವಿ ನಗರ	12	9	23	4
6.	ಬೆಂಗಳೂರು	14	17	15	9
7.	ತುಮಕೂರು	13	11	32	13
8.	ಕೋಲಾರ	5	3	4	5
9.	ರಾಮನಗರ	9	20	13	6
10.	ಚಿಕ್ಕಬಳ್ಳಾಪುರ	12	13	6	7
11.	ಕೆ.ಜಿ.ಎಫ್.	3	3	6	5
12.	ಮೈಸೂರು	20	27	23	6
13.	ಮಂಡ್ಯ	29	30	30	10
14.	ಹಾಸನ	22	20	22	13
15.	ಕೊಡಗು	17	7	6	3
16.	ಚಾಮರಾಜನಗರ	14	18	9	6
17.	ಬೆಳಗಾವಿ ಜಿಲ್ಲೆ	13	12	15	6
18.	ವಿಜಯಾಪುರ	19	6	8	4
19.	ಧಾರವಾಡ	3	12	2	1
20.	ಬಾಗಲಕೋಟೆ	9	5	11	3
21.	ಗದಗ	4	2	9	2
22.	ಚಿತ್ರದುರ್ಗ	8	9	15	10
23.	ಹಾವೇರಿ	12	11	13	4
24.	ಶಿವಮೊಗ್ಗ	45	23	35	9
25.	ದಾವಣಗೆರೆ	18	10	19	11
26.	ದಕ್ಷಿಣ ಕನ್ನಡ	12	4	16	9
27.	ಉತ್ತರ ಕನ್ನಡ	7	5	19	9
28.	ಚಿಕ್ಕಮಗಳೂರು	13	11	24	7
29.	ಉಡುಪಿ	7	10	4	4
30.	ಬಳ್ಳಾರಿ	12	13	20	3
31.	ಕಲಬುರಗಿ	15	18	32	16
32.	ಬೀದರ್	19	16	12	13
33.	ರಾಯಚೂರು	17	9	9	3
34.	ಕೊಪ್ಪಳ	5	4	6	3
35.	ಯಾದಗಿರಿ	5	5	4	4
	ಒಟ್ಟು	676	548	694	290

ಅನುಬಂಧ-ಆ

ರಾಜ್ಯದಲ್ಲಿ ಕಳೆದ 3 ವರ್ಷಗಳ ಪೂರ್ವದಲ್ಲಿದ್ದ ರೌಡಿಶೀಟರ್‌ಗಳ ವಿವರ ಹಾಗೂ ಕಳೆದ 3 ವರ್ಷಗಳಲ್ಲಿ ದಾಖಲಿಸಲಾದ ಹೊಸ ರೌಡಿ ಶೀಟರ್‌ಗಳ ಸಂಖ್ಯಾವಿವರ

2015 ರಿಂದ 2018 (30.06.2018) ರವರೆಗೆ

ಕ್ರಸ	ನಗರ/ಜಿಲ್ಲೆ	2015ಕ್ಕಿಂತ ಪೂರ್ವದಲ್ಲಿದ್ದ ರೌಡಿ ಶೀಟ್‌ಗಳ ಸಂಖ್ಯೆ	ಕಳೆದ 3 ವರ್ಷಗಳಲ್ಲಿ ಹೊಸದಾಗಿ ಆರಂಭಿಸಲಾದ ರೌಡಿಶೀಟ್‌ಗಳ ಸಂಖ್ಯೆ			
			2015	2016	2017	2018
1.	ಬೆಂಗಳೂರು ನಗರ	8885	976	474	2746	110
2.	ಮೈಸೂರು ನಗರ	578	59	131	273	2
3.	ಹುಬ್ಬಳ್ಳಿ-ಧಾರವಾಡ	1296	68	21	1219	32
4.	ಮಂಗಳೂರು ನಗರ	959	179	183	1404	106
5.	ಬೆಳಗಾವಿ ನಗರ	691	88	54	211	2
6.	ಬೆಂಗಳೂರು	898	78	141	926	52
7.	ತುಮಕೂರು	0	43	24	556	2
8.	ಕೋಲಾರ	363	23	9	246	2
9.	ರಾಮನಗರ	0	29	66	595	5
10.	ಚಿಕ್ಕಬಳ್ಳಾಪುರ	738	0	83	578	5
11.	ಕೆ.ಜಿ.ಎಫ್.	507	117	60	412	0
12.	ಮೈಸೂರು	604	19	31	1324	30
13.	ಮಂಡ್ಯ	777	829	558	1412	24
14.	ಹಾಸನ	694	84	95	875	1
15.	ಕೊಡಗು	423	16	33	429	21
16.	ಚಾಮರಾಜನಗರ	384	0	46	452	8
17.	ಬೆಳಗಾವಿ ಜಿಲ್ಲೆ	805	47	42	25	7
18.	ವಿಜಯಾಪುರ	554	0	50	588	50
19.	ಧಾರವಾಡ	150	85	88	144	16
20.	ಬಾಗಲಕೋಟೆ	480	8	85	569	310
21.	ಗದಗ	427	14	10	609	2
22.	ಚಿತ್ರದುರ್ಗ	264	39	24	524	4
23.	ಹಾವೇರಿ	392	17	230	640	15
24.	ಶಿವಮೊಗ್ಗ	968	408	198	1183	21
25.	ದಾವಣಗೆರೆ	462	6	92	1015	52
26.	ದಕ್ಷಿಣ ಕನ್ನಡ	467	300	140	866	15
27.	ಉತ್ತರ ಕನ್ನಡ	934	12	19	529	208
28.	ಚಿಕ್ಕಮಗಳೂರು	0	25	46	843	5
29.	ಉಡುಪಿ	862	56	115	736	16
30.	ಬಳ್ಳಾರಿ	578	66	27	1048	29
31.	ಕಲಬುರಗಿ	126	1568	1987	3818	3806
32.	ಬೀದರ್	939	189	145	1531	17
33.	ರಾಯಚೂರು	832	73	42	1478	23

34.	ಕೊಪ್ಪಳ	371	19	31	803	6
35.	ಯಾದಗಿರಿ	352	6	13	912	0
	ಒಟ್ಟು	**28234**	**5458**	**5339**	**31308**	**5002**

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	700
ಸದಸ್ಯರ ಹೆಸರು	ಶ್ರೀ ಮಹದೇವಪ್ಪ ಶಿವಲಿಂಗಪ್ಪ ಯಡವಾಡ್ (ರಾಮದುರ್ಗ)
ಉತ್ತರಿಸಬೇಕಾದ ದಿನಾಂಕ	11/7/2018
ಉತ್ತರಿಸುವವರು	ಪೌರಾಡಳಿತ, ಸ್ಥಳೀಯ ಸಂಸ್ಥೆಗಳು ಹಾಗೂ ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು.

ಕ್ರ ಸಂ.	ಪ್ರಶ್ನೆ	ಉತ್ತರ
(ಅ)	ಬೆಳಗಾವಿ ಜಿಲ್ಲೆಯ, ರಾಮದುರ್ಗ ಪುರಸಭೆಯಲ್ಲಿರುವ ಹುದ್ದೆಗಳೆಷ್ಟು; ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳೆಷ್ಟು; ಖಾಲಿ ಇರುವ ಹುದ್ದೆಗಳೆಷ್ಟು;	1) ರಾಮದುರ್ಗ ಪುರಸಭೆಯಲ್ಲಿ ಒಟ್ಟು 97 ಹುದ್ದೆಗಳಿದ್ದು, 54 ಖಾಯಂ ಅಧಿಕಾರಿ / ನೌಕರರು ಕರ್ತವ್ಯ ನಿರ್ವಹಿಸುತ್ತಿದ್ದಾರೆ. 2) ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿರುವ ನೌಕರರ ಸಂಖ್ಯೆ: 77 3) ಖಾಯಂ ಹುದ್ದೆಯಲ್ಲಿ ಖಾಲಿ ಇರುವ ಹುದ್ದೆಗಳ ಸಂಖ್ಯೆ: 43
(ಆ)	ಹುದ್ದೆಗಳು ಖಾಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಬಗ್ಗೆ ಕೈಗೊಂಡಿರುವ ಕ್ರಮಗಳೇನು; (ಮಾಹಿತಿ ನೀಡುವುದು)	ಹೌದು. ರಾಜ್ಯದ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಖಾಲಿ ಇರುವ ಒಟ್ಟು 1129 ಗ್ರೂಫ್ 'ಸಿ' ಮತ್ತು 'ಬಿ' ಹುದ್ದೆಗಳನ್ನು ಭರ್ತಿಮಾಡಲು ಅರ್ಹ ಅಭ್ಯರ್ಥಿಗಳನ್ನು ಆಯ್ಕೆ ಮಾಡಿ ಕೊಡಲು ಕರ್ನಾಟಕ ಲೋಕ ಸೇವಾ ಆಯೋಗಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಈಗಾಗಲೇ ಕರ್ನಾಟಕ ಲೋಕ ಸೇವಾ ಆಯೋಗದಿಂದ ಸ್ವೀಕೃತವಾಗಿರುವ ಆಯ್ಕೆ ಪಟ್ಟಿ ರೀತ್ಯಾ 278 ಹುದ್ದೆಗಳಿಗೆ ನೇಮಕಾತಿ ಮಾಡುವ ಬಗ್ಗೆ ಲೋಕ ಸೇವಾ ಆಯೋಗದಿಂದ ಅಂತಿಮ ಆಯ್ಕೆ ಪಟ್ಟಿ ಬಂದ ತಕ್ಷಣ ಕ್ರಮ ಕೈಗೊಳ್ಳಲಾಗುವುದು. ಕರ್ನಾಟಕ ಪುರಸಭೆಗಳ (ನಗರಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯಿತಿಗಳಲ್ಲಿನ ಪೌರಕಾರ್ಮಿಕರ ನೇಮಕಾತಿ) (ವಿಶೇಷ) ನಿಯಮಗಳು 2017ರ ನಿಯಮಗಳ ರೀತ್ಯಾ ಪುರಸಭೆಯಲ್ಲಿ ಖಾಲಿಯಿರುವ 37 ಪೌರಕಾರ್ಮಿಕರ ಹುದ್ದೆಗಳಿಗೆ ಹಾಲಿ ಕೆಲಸ ನಿರ್ವಹಿಸುತ್ತಿರುವ ದಿನಗೂಲಿ/ಕ್ಷೇಮಾಭಿವೃದ್ಧಿ/ಗುತ್ತಿಗೆ/ ಹೊರಗುತ್ತಿಗೆ/ಇತ್ಯಾಧಿ ನೌಕರರನ್ನು ಖಾಯಂ ನೇಮಕಾತಿ ಮಾಡಿಕೊಳ್ಳಲು ಬೆಳಗಾವಿ ಜಿಲ್ಲಾಧಿಕಾರಿಗಳು ದಿನಾಂಕ 23/02/2018 ರಂದು ಅಧಿಸೂಚನೆ ಹೊರಡಿಸಿದ್ದು, ನೇಮಕಾತಿ ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ.
(ಇ)	ನಗರೋತ್ಥಾನ ಯೋಜನೆಯಡಿ ರಾಮದುರ್ಗ ಪುರಸಭೆಗೆ ಎಷ್ಟು ಅನುದಾನ ಬಿಡುಗಡೆಯಾಗಿದೆ; ಬಿಡುಗಡೆಯಾದ ಅನುದಾನದಲ್ಲಿ ಯಾವ ಯಾವ ಕಾಮಗಾರಿಗಳನ್ನು	ನಗರೋತ್ಥಾನ (ಮುನಿಸಿಪಾಲಿಟಿ)-3ನೇ ಹಂತದ ಯೋಜನೆಯಡಿ 2017-18ನೇ ಸಾಲಿನಲ್ಲಿ ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಿಗೆ ಒಟ್ಟು ರೂ.288.54 ಕೋಟಿಗಳ ಮೊತ್ತವನ್ನು ಬಿಡುಗಡೆ ಮಾಡಲಾಗಿದೆ. ಯೋಜನೆಯ ಮುಖ್ಯ ಖಾತೆಯಲ್ಲಿ ಜಮೆ ಮಾಡಲಾಗಿದೆ. ಈ ಖಾತೆಯಿಂದ ರಾಜ್ಯದ

	ಕೈಗೊಳ್ಳಲಾಗಿದೆ; (ಕಾಮಗಾರಿಗಳ ವಿವರ ನೀಡುವುದು)	ಎಲ್ಲಾ ಜಿಲ್ಲಾಧಿಕಾರಿಗಳಿಗೆ ಹಣ ಡ್ರಾ ಮಾಡುವ ಅಧಿಕಾರ ಪ್ರತ್ಯಾಯೋಜಿಸಲಾಗಿದೆ. 2018-19ನೇ ಸಾಲಿನಲ್ಲಿ ಬೆಳಗಾವಿ ಜಿಲ್ಲೆಗೆ ರೂ.31.50 ಕೋಟಿಗಳ ಮೊತ್ತವನ್ನು ಜಿಲ್ಲಾಧಿಕಾರಿಗಳಿಗೆ Authorization ನೀಡಲಾಗಿದೆ. ಜಿಲ್ಲಾಧಿಕಾರಿಗಳು ಕಾಮಗಾರಿಗಳ ಪ್ರಗತಿಗೆ ಅನುಗುಣವಾಗಿ ಈ ಖಾತೆಯಿಂದ ಹಣ ಡ್ರಾ ಮಾಡಬಹುದಾಗಿದೆ. ಕಾಮಗಾರಿಗಳ ವಿವರಗಳನ್ನು ಅನುಬಂಧ 1 ಮತ್ತು 2ರಲ್ಲಿ ಲಗತ್ತಿಸಿದೆ.
(ಈ)	ರಾಮದುರ್ಗಾ ಪುರಸಭೆಯ ವ್ಯಾಪ್ತಿಯಲ್ಲಿ ಕೈಗೊಂಡಿರುವ ಕಾಮಗಾರಿಗಳು ಕಳಪೆ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯಾ; ಬಂದಿದ್ದಲ್ಲಿ, ಕೈಗೊಂಡ ಕ್ರಮವೇನು?	ನಗರೋತ್ಥಾನ 2 ನೇ ಹಂತದ ಯೋಜನೆಯಡಿಯಲ್ಲಿನ ಕಳಪೆಯಾಗಿರುವ ಕಾಮಗಾರಿ ಸರ್ಕಾರದ ಗಮನಕ್ಕೆ ಬಂದಿರುತ್ತದೆ. ನಗರೋತ್ಥಾನ 2ನೇ ಹಂತದ ಯೋಜನೆಯಡಿಯಲ್ಲಿನ ಕಳಪೆ ಕಾಮಗಾರಿ ನಿರ್ವಹಿಸಿದ ಗುತ್ತಿಗೆದಾರರ ಟೆಂಡರನ್ನು ಮಾನ್ಯ ಜಿಲ್ಲಾಧಿಕಾರಿಗಳು ಬೆಳಗಾವಿ ಇವರ ಆದೇಶದಂತೆ (Risk & cost) ಅಡಿಯಲ್ಲಿ ರದ್ದುಪಡಿಸಿ ಟೆಂಡರ್ ನಿಯಮಾನುಸಾರ ಕ್ರಮ ಕೈಗೊಳ್ಳಲು ಗುತ್ತಿಗೆದಾರರ ಸಮ್ಮುಖದಲ್ಲಿ ಕಾಮಗಾರಿಗಳ ಅಂತಿಮ ಅಳತೆಗಳನ್ನು ದಿನಾಂಕ 03/07/2018 ರಂದು ತೆಗೆದುಕೊಳ್ಳಲಾಗಿದೆ ಹಾಗೂ ಗುಣಮಟ್ಟದ ಕಾಮಗಾರಿ ನಿರ್ವಹಿಸಲು ಸಂಬಂಧಿಸಿದ ಗುತ್ತಿಗೆದಾರರಿಗೆ ಸೂಚಿಸಲಾಗಿದೆ.

(ಸಂಖ್ಯೆ: ನಅಇ 156 ಜಿಇಎಲ್ 2018)

(ರಮೇಶ್ ಲ. ಜಾರಕೀಹೊಳಿ)
ಪೌರಾಡಳಿತ ಮತ್ತು ಸ್ಥಳೀಯ ಸಂಸ್ಥೆಗಳು,
ಹಾಗೂ ಬಂದರು ಮತ್ತು
ಒಳನಾಡು ಜಲಸಾರಿಗೆ ಸಚಿವರು.

ಅನುಬಂಧ-1

ರಾಮದುರ್ಗ ಪುರಸಭೆಯ ಸನ್ 2014-15 ನೇ ಸಾಲಿನ ನಗರೋತ್ಥಾನ ಹಂತ-2 ಅಡಿಯಲ್ಲಿ ಮಂಜೂರಾದ ಕಾಮಗಾರಿಗಳ

ಅ.ನಂ.	ಕಾಮಗಾರಿಗಳ ವಿವರ	ಕ್ರಿಯಾ ಯೋಜನೆಯಲ್ಲಿ ಅನುಮೋದಿತ ಅಂದಾಜು ಮೊತ್ತ	ಪ್ರಗತಿ ಹಂತ
1	*2*	*3*	*6*
1	ರಾಮದುರ್ಗ ಪುರಸಭೆಯ ವಾರ್ಡ ನಂ 11 ರ ತೇರ ಬಜಾರ ಮಾಳವಾಡವರ ಅಂಗಡಿಯಿಂದ ಜನತಾ ಹೋಟೇಲವರೆಗೆ, ಜನತಾ ಹೊಟೇಲದಿಂದ ಸರ್ಕಾರಿ ಆಸ್ಪತ್ರೆ ವರೆಗೆ ಮತ್ತು ಜನತಾ ಹೊಟೇಲದಿಂದ ವನಕುದರಿಯವರ ಅಂಗಡಿಯವರೆಗೆ ಸಿಮೆಂಟ ರಸ್ತೆ ಮಡುವದು.	128.00	ಪೂರ್ಣಗೊಂಡಿದೆ
2	ವಾರ್ಡ ನಂ. 10 ಜುನಿಪೇಟ ರಸ್ತೆಯ ಹಳೆ ಪೋಲಿಸ್ ಸ್ಟೇಶನ್‌ದಿಂದ ಹೋಮ್‌ಗಾರ್ಡ್ಸ ಆಫೀಸವರೆಗೆ ಮತ್ತು ಬಸವೇಶ್ವರ ದೇವಸ್ಥಾನದಿಂದ ಶಿರೋಳ ಅಂಗಡಿಯ ಮುಖಾಂತರ ಬೆಳಗಾವಿ ರಸ್ತೆವರೆಗೆ ಸಿಮೆಂಟ ರಸ್ತೆ ಮಾಡುವದು.	108.00	ಪೂರ್ಣಗೊಂಡಿದೆ
3	ಪುರಸಭೆ ವಾರ್ಡ ನಂ 3 ರಲ್ಲಿ ಕಿಲ್ಲಾದಲ್ಲಿರುವ ಕೋರ್ಟ ದಿಂದ ಬಿ.ಇ.ಓ. ಆಫೀಸ ವರೆಗೆ ಹಾಗೂ ಸುಬ್ಬಣ್ಣ ಕಿರಾಣಿ ಅಂಗಡಿಯಿಂದ ಸೂಶಿಯಲ್ ಕ್ಲಬ್‌ವರೆಗೆ ಸಿಮೆಂಟ ರಸ್ತೆ ಮಾಡುವುದು. ವಾರ್ಡ ನಂ 13 ರಲ್ಲಿ ಕುಂಬಾರ ಗಿರಿ ಮಠದ ರಸ್ತೆಯ ಪಾಟೀಲವರ ಮನೆಯಿಂದ ಹಣಮಂತ ದೇವರ ಗುಡಿಯವರೆಗೆ ಸಿಮೆಂಟ ರಸ್ತೆ ಮಾಡುವುದು. ವಾರ್ಡ ನಂ. 5 ರ ಡಾ॥ ಗುಂಡಾಯವರ ದವಾಖಾನೆ ಪಕ್ಕದಿಂದ ಹೆಬ್ಬಳ್ಳಿಯವರ ಮನೆಯ ವರೆಗೆ ರಸ್ತೆಗೆ ಖಡೀಕರಣ ಮತ್ತು ಡಾಂಬರಿಕರಣ ಮಾಡುವದು.	114.00	ಭಾಗಶಃ ಪೂರ್ಣಗೊಂಡಿದೆ
4	ವಾರ್ಡ ನಂ 11 ರಲ್ಲಿ ಯಾನಂ ಪೇಟೆಯ ಬೀಳಗಿ ಕಲ್ಯಾಣ ಮಂಟಪದಿಂದ ಶಿಂದೆಯವರ ಮನೆಯವರೆಗೆ, ಕೌಜಲಗಿಯವರ ಕಟ್ಟಿಗೆ ಅಡ್ಡೆಯಿಂದ ಶ್ರೀ.ಪತ್ತೇಪೂರವರ ಅಂಡಿಯವರೆಗೆ, ಹಂಪಿಹೊಳಿಯವರ ಮನೆಯಿಂದ ರಾಮಣ್ಣ ಕಂಭಾರ ಮನೆಯವರೆಗೆ, ಸಮಗಾರ ಓಣಿಯಲ್ಲಿ ಶ್ರೀ.ವೆಂಕಟೇಶ ಖಾನಪೇಟ ಮನೆಯಿಂದ ಶಿಂದೆಯವರ ಮನೆಯವರೆಗೆ ಸಿಮೆಂಟ ರಸ್ತೆ, ವಾರ್ಡ ನಂ 12 ರಲ್ಲಿ ಕಾಗಿ ಓಣಿಯ ಬಸವಂತಪ್ಪ ಹರ್ಲಾಪೂರ ಮನೆಯಿಂದ ಹೊಳೆಯ ಹತ್ತಿರ ಮಳೆಪ್ಪಜ್ಜನವರ ಪಾದಗಟ್ಟೆಯವರೆಗೆ, ಯಾನಂ ಪೇಟೆಯ ಹರಗೋಲವರ ಮನೆಯಿಂದ ಬಸವಣ ದೇವರ ಗುಡಿಯವರೆಗೆ, ಹೊಸಪೇಟ ವಕೀಲರ ಮನೆಯಿಂದ ಹಡಪದವರ ಮನೆಯವರೆಗೆ, ಯಳಗಂಟಿಯವರ ಮನೆಯಿಂದ ದೊಡಮನಿಯವರ ಮನೆಯವರೆಗೆ ಸಿಮೆಂಟ ರಸ್ತೆ, ವಾರ್ಡ ನಂ 13 ರಲ್ಲಿ ಕುದ್ವನ ಮಸೀದಿಯಿಂದ ಅಂಗಡಿಯವರ ಮನೆಯವರೆಗೆ ಸಿಮೇಂಟ ರಸ್ತೆ, ಪುರಸಭೆಯ ನೇಕಾರ ಪೇಟೆಯ ದುರ್ಗಮ್ಮನ ಗುಡಿಯಿಂದ ಕಲಬುರ್ಗಿಯವರ ಮನೆಯವರೆಗೆ ಡಾಂಬರೀಕರಣ, ವಾರ್ಡ ನಂ 23 ರಲ್ಲಿ ಅಂಬೇಡ್ಕರ ನಗರದ ಎರಡನೇಯ ಮುಖ್ಯ ರಸ್ತೆಗೆ, ರಾಧಾಪೂರ ಪೇಟೆಯ ದುರ್ಗಮ್ಮನ ಗುಡಿಯಿಂದ ಶಾಲೆ ನಂ.03ರ ವರೆಗೆ ಸಿಮೇಂಟ ರಸ್ತೆ, ಮೂರನೆಯ ಮುಖ್ಯೆ ರಸ್ತೆಗೆ ಖಡೀಕರಣ ಮತ್ತು ಡಾಂಬರೀಕರಣ, ಪುರಸಭೆ ರಾಂಪೂರ ಪೇಟೆಯ ಪಾಂಡುರಂಗ ಟಾಕೀಜದಿಂದ ಆರಿಬೆಂಚಿ ಪೆಟ್ರೋಲ ಪಂಪವರೆಗೆ ರಸ್ತೆಗೆ ಖಡೀಕರಣ ಮತ್ತು ಡಾಂಬರೀಕರಣ, ವಾರ್ಡ ನಂ. 15ರ ಜಾಲಗಾರವರ ಮನೆಯಿಂದ ಕಳಸನ್ನವರ ಮನೆಯವರೆಗೆ, ನಿಂಗಾಪೂರ ಪೇಟ ಸಲೀಮ ಕೋಲಾರ ಮನೆಯಿಂದ ಶಾಲದಾರ ಮನೆವರೆಗೆ ಸಿಮೇಂಟ ರಸ್ತೆ, ವಾರ್ಡ ನಂ. 16 ನಿಂಗಾಪೂರ ಪೇಟೆಯ ಕಂದಗಲವರ ಮನೆಯಿಂದ ಪಟ್ಟದಕಲ ಮನೆಯವರೆಗೆ ಸಿಮೇಂಟ ರಸ್ತೆ, ವಾರ್ಡ ನಂ. 17ರ ಮಳೇಪ್ಪಜ್ಜನ ಮಠದಿಂದ ಕೊಳದೂರ ಕಿರಾಣಿ ಅಂಗಡಿಯವರೆಗೆ ಸಿಮೇಂಟ ರಸ್ತೆ ಮಾಡುವುದು.	50.00	ಭಾಗಶಃ ಪೂರ್ಣಗೊಂಡಿದೆ

5	ರಾಮದುರ್ಗ ಪುರಸಭೆಯ ವಾರ್ಡ ನಂ 11 ರ ತೇರ ಬಜಾರ ಮಾಳವಾಡವರ ಅಂಗಡಿಯಿಂದ ಜನತಾ ರಾಮದುರ್ಗ ಪುರಸಭೆಯ ವಾರ್ಡ ನಂ 11 ರ ತೇರ ಬಜಾರ ಮಾಳವಾಡವರ ಅಂಗಡಿಯಿಂದ ಜನತಾ ಹೋಟೇಲವರೆಗೆ, ಜನತಾ ಹೊಟೇಲದಿಂದ ಸರ್ಕಾರಿ ಆಸ್ಪತ್ರೆ ವರೆಗೆ. ಮತ್ತು ಜನತಾ ಹೊಟೇಲದಿಂದ ವನಕುದರಿಯವರ ಅಂಗಡಿಯವರೆಗೆ ವಾರ್ಡ ನಂ. 10 ಜುನಿಪೇಟ ರಸ್ತೆಯ ಹಳೆ ಪೋಲಿಸ್ ಸ್ಟೇಶನ್‌ದಿಂದ ಹೋಮ್‌ಗಾರ್ಡ್ಸ್ ಆಫೀಸವರೆಗೆ ಮತ್ತು ಬಸವೇಶ್ವರ ದೇವಸ್ಥಾನದಿಂದ ಶಿರೋಳ ಅಂಗಡಿಯ ಮುಖಾಂತರ ಬೆಳಗಾವಿ ರಸ್ತೆವರೆಗೆ, ಪುರಸಭೆ ವಾರ್ಡ ನಂ 3 ರಲ್ಲಿ ಕಿಲ್ಲಾದಲ್ಲಿರುವ ಕೋರ್ಟ ದಿಂದ ಬಿ.ಇ.ಓ. ಆಫೀಸ ವರೆಗೆ ಹಾಗೂ ಸುಬ್ಬಣ್ಣ ಕಿರಾಣಿ ಅಂಗಡಿಯಿಂದ ಸೂಶಿಯಲ್ ಕ್ಲಬ್‌ವರೆಗೆ, ವಾರ್ಡ ನಂ 13 ರಲ್ಲಿ ಕುಂಬಾರ ಗಿರಿ ಮಠದ ರಸ್ತೆಯ ಪಾಟೀಲವರ ಮನೆಯಿಂದ ಹಣಮಂತ ದೇವರ ಗುಡಿಯವರೆಗೆ, ವಾರ್ಡ ನಂ. 5 ರ ಡಾ॥ ಗುಂಡಾಯವರ ದವಾಖಾನೆ ಪಕ್ಕದಿಂದ ಹೆಬ್ಬಳ್ಳಿಯವರ ಮನೆಯ ವರೆಗೆ, ವಾರ್ಡ ನಂ 11 ರಲ್ಲಿ ಯಾನಂ ಪೇಟೆಯ ಬೀಳಗಿ ಕಲ್ಯಾಣ ಮಂಟಪದಿಂದ ಶಿಂದೆಯವರ ಮನೆಯವರೆಗೆ, ಕೌಜಲಗಿಯವರ ಕಟ್ಟಿಗೆ ಅಡ್ಡೆಯಿಂದ ಶ್ರೀ.ಪತ್ತೇಪೂರವರ ಅಂಡಿಯವರೆಗೆ, ಹಂಪಿಹೊಳಿಯವರ ಮನೆಯಿಂದ ರಾಮಣ್ಣ ಕಂಭಾರ ಮನೆಯವರೆ ಆರ್.ಸಿ.ಸಿ ಗಟಾರ ನಿರ್ಮಾಣ ಮಾಡುವ್ವದು. ವಾರ್ಡ ನಂ 12 ರಲ್ಲಿ ಕಾಗಿ ಓಣಿಯ ಬಸವಂತಪ್ಪ ಹರ್ಲಾಪೂರ ಮನೆಯಿಂದ ಹೊಳೆಯ ಹತ್ತಿರ ಮಳೆಪ್ಪಜ್ಜನವರ ಪಾದಗಟ್ಟೆಯವರೆಗೆ ಆರ್.ಸಿ.ಸಿ ಗಟಾರ ನಿರ್ಮಾಣ ಮಾಡುವದು.	100.00	ಭಾಗಶಾಃ ಪೂರ್ಣಗೊಂಡಿದೆ
	ಒಟ್ಟು ಮೊತ್ತ	**500.00**	

ಅಧೀಕ್ಷಕ ಅಭಿಯಂತರರು (I/c)
ಪೌರಾಡಳಿತ ನಿರ್ದೇಶನಾಲಯ

ಅನುಬಂಧ-2

ರಾಮದುರ್ಗ ಪುರಸಭೆಯ ನಗರೋತ್ಥಾನ ಹಂತ-3 ಅಡಿಯಲ್ಲಿ ಮಂಜೂರಾದ ಕಾಮಗಾರಿಗಳ ಪ್ರಗತಿ ವಿವರ

ಅ.ನಂ.	ಕಾಮಗಾರಿಗಳ ವಿವರ	ಕ್ರಿಯಾ ಯೋಜನೆಯಲ್ಲಿ ಅನುಮೋದಿತ ಅಂದಾಜು ಮೊತ್ತ	ಪ್ರಗತಿ ಹಂತ
1	*2*	*3*	*6*
1	ಪುರಸಭೆ ವ್ಯಾಪ್ತಿಯ ವಾರ್ಡ ನಂ. 17 ರ ವಡ್ಡರ ಓಣಿಯಲ್ಲಿ, ಭಾಗ್ಯನಗರದಲ್ಲಿ ಮತ್ತು ಶ್ರೀಪತಿನಗರದಲ್ಲಿ ಗೋಸಾವಿ ಜನರು ವಾಸಿಸುವ ಭಾಗದಲ್ಲಿ ಸಾರ್ವಜನಿಕ ಶೌಚಾಲಯ ನಿರ್ಮಾಣ ಮಾಡುವದು.	47.84	ಪ್ರಗತಿಯಲ್ಲಿದೆ
2	ಪುರಸಭೆ ವ್ಯಾಪ್ತಿಯ ವಾರ್ಡ ನಂ. 23 ರ ಅಂಬೇಡ್ಕನಗರದಲ್ಲಿ ಗಟಾರ ನಿರ್ಮಿಸುವದು. ವಾರ್ಡ ನಂ. 17 ರ ಚನ್ನಪ್ಪ ಬಂಡಿವಡ್ಡರ ಮನೆಯ ಹತ್ತಿರ ಗಟಾರ ನಿರ್ಮಾಣ ಮತ್ತು ಇಂಟರಲಾಕ್ ಪೇವರ್ಸ್ ಅಳವಡಿಸುವದು. ವಾರ್ಡ ನಂ. 11 ರ ಯಾನಂಪೇಠೆಯ ಸಮಗಾರ ಓಣಿಯಲ್ಲಿ ಗಟಾರ ನಿರ್ಮಾಣ ಮಾಡುವದು.	25.00	ಪ್ರಗತಿಯಲ್ಲಿದೆ
3	ಕರ್ನಾಟಕ ನಗರ ನೀರು ಸರಬರಾಜು ಒಳಚರಂಡಿ ಮಂಡಳಿಗೆ ನಿರಂತರ ನೀರು ಸರಬರಾಜು 24/7 ಯೋಜನೆಗೆ ಪುರಸಭೆಯಿಂದ ಪಾವತಿಸಬೇಕಾದ ಪುರಸಭೆ ವಂತಿಗೆ ರೂ. 347.13 ಲಕ್ಷಗಳ ಪೈಕಿ (ಪರಿಶಿಷ್ಟ ಜಾತಿ ಜನರು ವಾಸಿಸುವ ವಾರ್ಡ ನಂ. 4 ಗಡದಕೇರಿ, ವಾರ್ಡ ನಂ. 9 ಗಾಂಧೀನಗರ, ವಾರ್ಡ ನಂ. 11 ಸಮಗಾರ ಓಣಿ, ವಾರ್ಡ ನಂ. 17 ರ ವಡ್ಡರ ಓಣಿ, ವಾರ್ಡ ನಂ. 18 ರ ಕೊಂಚಿಕೊರವ ಓಣಿ ಮತ್ತು ವಾರ್ಡ ನಂ. 23 ರ ಅಂಬೇಡ್ಕರನಗರದಲ್ಲಿ) ಪಾವತಿಸಬೇಕಾದ ಅನುದಾನ	36.49	ಪಾವತಿಸಿದೆ
4	ಪುರಸಭೆ ವ್ಯಾಪ್ತಿಯ ವಾರ್ಡ ನಂ. 14 ರ ವಡ್ಡಿಓಣಿಯ ಹಣಮಂತದೇವರ ಗುಡಿಯಿಂದ ಲಭ್ಯಯವರ ಮನೆಯವರೆಗೆ ಹಾಗೂ ಭಜಂತ್ರಿಯವರ ಮನೆಯಿಂದ ಖಾದಿ ಕೇಂದ್ರದ ಮಾರ್ಗವಾಗಿ ಬಸವಣ್ಣದೇವರ ಗುಡಿಯವರೆಗೆ ಕುವೆಂಪು ಶಾಲೆಯಿಂದ ಮಳ್ಳಪ್ಪಜನ ವೃತದ ವರೆಗೆ ಖಾದಿಕೇಂದ್ರ ದಿಂದ ಸಾರ್ವಜನಿಕ ಶೌಚಾಲಯವರೆಗಿನ ರಸ್ತೆ ಮಾಡುವದು. ಹಾಗೂ ಸಿ.ಡಿ ನಿರ್ಮಾಣ ಹಾಗೂ ಗಟಾರ ನಿರ್ಮಾಣ ಮಾಡುವದು. ವಾರ್ಡ ನಂ. 02 ರ ತಳವಾರ ಓಣಿಯಲ್ಲಿ ಗಟಾರ ನಿರ್ಮಿಸುವದು.	26.41	ಪ್ರಗತಿಯಲ್ಲಿದೆ
5	ಕರ್ನಾಟಕ ನಗರ ನೀರು ಸರಬರಾಜು ಒಳಚರಂಡಿ ಮಂಡಳಿಗೆ ನಿರಂತರ ನೀರು ಸರಬರಾಜು 24/7 ಯೋಜನೆಗೆ ಪುರಸಭೆಯಿಂದ ಪಾವತಿಸಬೇಕಾದ ಪುರಸಭೆ ವಂತಿಗೆ ರೂ. 350.00 ಲಕ್ಷಗಳ ಪೈಕಿ (ಪರಿಶಿಷ್ಟ ಜಾತಿ ಜನರು ವಾಸಿಸುವ ವಾರ್ಡ ನಂ. 2 ಮತ್ತು 21 ರ ತಳವಾರ ಓಣಿ ಹಾಗೂ ವಾರ್ಡ ನಂ. 14 ರ ವಡ್ಡಿಓಣಿ) ಪಾವತಿಸಬೇಕಾದ ಅನುದಾನ	17.90	ಪಾವತಿಸಿದೆ

6	ಕರ್ನಾಟಕ ನಗರ ನೀರು ಸರಬರಾಜು ಒಳಚರಂಡಿ ಮಂಡಳಿಗೆ ನಿರಂತರ–ನೀರು ಸರಬರಾಜು 24/7 ಯೋಜನೆಗೆ ಪುರಸಭೆಯಿಂದ ಪಾವತಿಸಬೇಕಾದ ಪುರಸಭೆ ವಂತಿಗೆ (ರೂ. 347.13 ಲಕ್ಷಗಳ ಪೈಕಿ ಸನ್ 2015–16ನೇ ಸಾಲಿನ 14ನೇ ಹಣಕಾಸು ಯೋಜನೆ ಸಾಮಾನ್ಯ ಕಾರ್ಯಾಧಾರಿತ ಅನುದಾನದಲ್ಲಿ ರೂ. 7.00 ಲಕ್ಷಗಳನ್ನು ಕಾಯ್ದಿರಿಸಲಾಗಿರುತ್ತದೆ. ಹಾಗೂ ಸದರ ಕ್ರಿಯಾ ಯೋಜನೆಯ ಕ್ರ.ಸಂ. 3 ರಲ್ಲಿ ರೂ. 36.49 ಲಕ್ಷ ಹಾಗೂ ಕ್ರ.ಸಂ. 5 ರಲ್ಲಿ ರೂ. 17.90 ಲಕ್ಷ ಒಟ್ಟು 61.39 ಲಕ್ಷಗಳನ್ನು ಕಾಯ್ದಿರಿಸಲಾಗಿರುತ್ತದೆ. ಬಾಕಿ ಪಾವತಿಸಬೇಕಾದ ಮೊತ್ತ ರೂ. 285.74 ಲಕ್ಷಗಳು)	285.74	ಪಾವತಿಸಿದೆ
7	ಯುಐಡಿಎಸ್ಎಸ್ಎಂಟಿ ಯೋಜನೆಯಡಿಯಲ್ಲಿ ರಸ್ತೆ ಮತ್ತು ಚರಂಡಿ ನಿರ್ಮಾಣ ಕಾಮಗಾರಿಗೆ ಪುರಸಭೆಯಿಂದ ಭರಿಸಬೇಕಾದ ವಂತಿಕೆ ರೂ. 376.53 ಲಕ್ಷಗಳು ಪೈಕಿ (ಸನ್ 2014–15 ನೇ ಸಾಲಿನ ಎಸ್.ಎಫ್.ಸಿ ಮುಕ್ತ ನಿಧಿ ಅನುದಾನದಲ್ಲಿ ರೂ. 68.05 ಲಕ್ಷ ಸನ್ 2016–17 ನೇ ಸಾಲಿನ ಎಸ್.ಎಫ್.ಸಿ ಮುಕ್ತ ನಿಧಿ ಅನುದಾನದಲ್ಲಿ ರೂ. 50.00 ಲಕ್ಷ, ಸನ್ 2016–17 ನೇ 14ನೇ ಹಣಕಾಸು ಸಾಮಾನ್ಯ ಮೂಲ ಅನುದಾನದಲ್ಲಿ ರೂ. 25.30 ಲಕ್ಷ, ಸನ್ 2017–18 ನೇ ಸಾಲಿನ 14ನೇ ಹಣಕಾಸು ಸಾಮಾನ್ಯ ಮೂಲ ಅನುದಾನದಲ್ಲಿ ರೂ. 35.06 ಲಕ್ಷ, ಒಟ್ಟು 178.41 ಲಕ್ಷಗಳನ್ನು ಕಾಯ್ದಿರಿಸಲಾಗಿರುತ್ತದೆ.) ಬಾಕಿ ಪಾವತಿಸಬೇಕಾದ ಪುರಸಭೆ ವಂತಿಗೆ ರೂ. 376.53 ಲಕ್ಷ – 178.41 ಲಕ್ಷ = 198.12	198.12	ಪಾವತಿಸಿದೆ
	ಒಟ್ಟು ಮೊತ್ತ	**637.50**	

ಅಧೀಕ್ಷಕ ಅಭಿಯಂತರರು (I/c)
ಪೌರಾಡಳಿತ ನಿರ್ದೇಶನಾಲಯ

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	159
ಸದಸ್ಯರ ಹೆಸರು	ಶ್ರೀ ಎಚ್. ಹಾಲಪ್ಪ (ಸಾಗರ)
ಉತ್ತರಿಸಬೇಕಾದ ದಿನಾಂಕ	11/07/2018
ಉತ್ತರಿಸುವವರು	ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಹಾಗೂ ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
(ಅ)	ನಗರಸಭೆಗಳ ವ್ಯಾಪ್ತಿಯಲ್ಲಿ ಬಡಾವಣೆಗಳನ್ನು ನಿರ್ಮಿಸಲು ಇರುವ ಮಾನದಂಡಗಳೇನು; (ಇದಕ್ಕೆ ಸಂಬಂಧಿಸಿದ ಎಲ್ಲಾ ಸರ್ಕಾರಿ ಆದೇಶದ ಪ್ರತಿಗಳನ್ನು ಒದಗಿಸುವುದು)	ನಗರಸಭೆ ವ್ಯಾಪ್ತಿಯಲ್ಲಿ ಬಡಾವಣೆಗಳನ್ನು ನಿರ್ಮಿಸಲು ಕರ್ನಾಟಕ ಭೂ ಕರ್ನಾಟಕ ಕಂದಾಯ ಅಧಿನಿಯಮ-1964 ಕಲಂ 95ರಡಿಯಲ್ಲಿ **(ಅನುಬಂಧ-1)** ಜಿಲ್ಲಾಧಿಕಾರಿಗಳವರಿಂದ ಪ್ರಸ್ತಾಪಿತ ಭೂ ಪ್ರದೇಶಗಳು ವಸತಿ ಉದ್ದೇಶಕ್ಕೆ, ಭೂ ಪರಿವರ್ತನೆಯಾಗಿರಬೇಕು. ನಂತರದಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಅಧಿನಿಯಮ 17ರಡಿಯಲ್ಲಿ **(ಅನುಬಂಧ-2)** ಲೇಔಟ್ ನಕ್ಷೆಯನ್ನು ತಯಾರಿಸಿ ಸ್ಥಳೀಯ ಯೋಜನಾ ಪ್ರಾಧಿಕಾರಕ್ಕೆ ಅನುಮೋದನೆಗೆ ಸಲ್ಲಿಸಲಾಗುತ್ತದೆ. ಸರ್ಕಾರದ ಆದೇಶ ನಂ:174(ಬೆ.ನ)/2006 ದಿನಾಂಕ:12-11-2007 **(ಅನುಬಂಧ-3)** ಹಾಗೂ ನಅಇ/08/ಟಿಟಿಪಿ/2013 ದಿನಾಂಕ 24/05/2014 **(ಅನುಬಂಧ-4)** ಮತ್ತು ಆದೇಶ ಸಂಖ್ಯೆ: ಸಂವ್ಯಶಾಇ 24 ಶಾಸನ 2015 ಬೆಂಗಳೂರು ದಿನಾಂಕ 10/09/2015 **(ಅನುಬಂಧ-5)** ರಲ್ಲಿ ನೀಡಿರುವ ಸೂಚನೆಗಳಂತೆ ಈ ಕೆಳಕಂಡ ಮಾನದಂಡಗಳನ್ನು ಅನುಸರಿಸಲಾಗುತ್ತಿದೆ. 1. ಖಾಸಗಿ ಬಡಾವಣೆ ಮಾಲೀಕರು ಬಡಾವಣೆ ನಕ್ಷೆಯನ್ನು ಯೋಜನಾ ಪ್ರಾಧಿಕಾರದಿಂದ ಅನುಮೋದನೆ ಪಡೆಯಬೇಕು. 2. ಖಾಸಗಿ ಬಡಾವಣೆ ಮಾಲೀಕರು ಬಡಾವಣೆಗೆ ಸಂಬಂಧಪಟ್ಟಂತೆ ಮೂಲಭೂತ ಸೌಕರ್ಯಗಳನ್ನು ಅವರೇ ಒದಗಿಸಬೇಕು. ಈ ಬಗ್ಗೆ ಅಂದಾಜು ವೆಚ್ಚದ ಶೇ.4% ರಷ್ಟು ಮೇಲ್ವಿಚಾರಣಾ ಶುಲ್ಕವನ್ನು ನಗರಸಭೆಗೆ ಪಾವತಿಸಬೇಕು. 3. ಈ ಹಿಂದೆ ಬಡಾವಣೆ ವಿನ್ಯಾಸ ಅನುಮೋದನೆಯಾದ ಮೊದಲ ಹಂತದಲ್ಲಿ ಅನುಮೋದಿತ ನಕ್ಷೆಯಂತೆ ಶೇ.40ರಷ್ಟು ನಿವೇಶನಗಳ ಖಾತೆಗಳನ್ನು ಪ್ರಾರಂಭದಲ್ಲಿ ಬಿಡುಗಡೆ ಮಾಡಿ ನಂತರ ಪೂರ್ಣವಾಗಿ ಮೂಲಭೂತ ಸೌಕರ್ಯ ಒದಗಿಸಿದ ಮೇಲೆ ಶೇ.100ರಷ್ಟು ನಿವೇಶನಗಳ ಖಾತೆಗಳನ್ನು ದಾಖಲಿಸಲಾಗುತ್ತಿತ್ತು. 4. ಸರ್ಕಾರದ ಅಧಿಸೂಚನೆಯ ಪತ್ರ ಸಂಖ್ಯೆ: ಸಂವ್ಯಶಾಇ 24 ಶಾಸನ 2015 ಬೆಂಗಳೂರು ದಿನಾಂಕ 10/09/2015 ರೀತ್ಯಾ ಲೇಔಟ್ ಮಾಲೀಕರು ಸಂಪೂರ್ಣ ಮೂಲಭೂತ ಸೌಕರ್ಯ ಒದಗಿಸಿದ

		ನಂತರದಲ್ಲಿ ಪರಿಶೀಲಿಸಿ ನಿಯಮಾನುಸಾರ ಶೇ.100ರಷ್ಟು ನಿವೇಶನಗಳನ್ನು ಬಿಡುಗಡೆಗೊಳಿಸಬೇಕಾಗಿರುತ್ತದೆ. (ಸರ್ಕಾರದ ಆದೇಶದ ಪ್ರತಿಗಳನ್ನು ಲಗತ್ತಿಸಿದೆ.)
(ಆ)	ಸಾಗರ ನಗರಸಭೆಯ ವ್ಯಾಪ್ತಿಯಲ್ಲಿ ನಿರ್ಮಾಣವಾಗಿರುವ ಬಡಾವಣೆಗಳು ಯಾವುವು; (ಎಲ್ಲಾ ಬಡಾವಣೆಗಳ ಹೆಸರು ಪೂರ್ಣ ವಿವರ ನೀಡುವುದು)	ಸಾಗರ ನಗರಸಭೆ ವ್ಯಾಪ್ತಿಯಲ್ಲಿ ನಿರ್ಮಾಣವಾಗಿರುವ ಖಾಸಗಿ ಲೇಔಟ್‌ಗಳ ಪಟ್ಟಿಯನ್ನು ಅನುಬಂಧ-6ರಲ್ಲಿ ವಿವರಿಸಲಾಗಿದೆ.
(ಇ)	ಅವುಗಳಲ್ಲಿ ಯಾವ ಯಾವ ಬಡಾವಣೆಗಳಿಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸಲಾಗಿದೆ; (ವಿವರ ಒದಗಿಸುವುದು)	ಸಾಗರ ನಗರಸಭೆ ವ್ಯಾಪ್ತಿಯಲ್ಲಿ ನಿರ್ಮಾಣವಾಗಿರುವ ಖಾಸಗಿ ಲೇಔಟ್‌ಗಳ ಪಟ್ಟಿಯಲ್ಲಿರುವ ಬಡಾವಣೆಗಳಲ್ಲಿ ಮೂಲಭೂತ ಸೌಕರ್ಯ ಒದಗಿಸಿರುವ ವಿವರಗಳನ್ನು ಅನುಬಂಧ-6ರಲ್ಲಿ ವಿವರಿಸಿದೆ.
(ಈ)	ಮೂಲಭೂತ ಸೌಲಭ್ಯ ಪಡೆಯದೇ ಇರುವ ಬಡಾವಣೆಗಳು ಯಾವುವು; (ವಿವರ ಒದಗಿಸುವುದು)	ಸಾಗರ ನಗರಸಭೆ ವ್ಯಾಪ್ತಿಯಲ್ಲಿ ನಿರ್ಮಾಣವಾಗಿರುವ ಖಾಸಗಿ ಲೇಔಟ್‌ಗಳ ಪಟ್ಟಿಯಲ್ಲಿರುವ ಬಡಾವಣೆಗಳಲ್ಲಿ ಮೂಲಭೂತ ಸೌಕರ್ಯ ಪಡೆಯದೇ ಇರುವ ಬಡಾವಣೆಗಳನ್ನು ಸದರಿ ಪಟ್ಟಿಯಲ್ಲಿ ದಾಖಲಿಸಿದೆ. **(ಅನುಬಂಧ-6)**
(ಉ)	ಇದುವರೆವಿಗೂ ಮೂಲಭೂತ ಸೌಲಭ್ಯ ಒದಗಿಸದಿರಲು ಕಾರಣವೇನು;	ಮೇಲ್ಕಂಡ ಸರ್ಕಾರದ ಆದೇಶದಂತೆ ಖಾಸಗಿ ಲೇಔಟ್ ನಿರ್ಮಾಣ ಮಾಡುವ ಲೇಔಟ್ ಮಾಲೀಕರು ಮೂಲಭೂತ ಸೌಕರ್ಯಗಳನ್ನು ಒದಗಿಸಬೇಕಾಗಿದರುತ್ತದೆ. ಅದರಂತೆ ಮೊದಲಿಗೆ ಶೇ.40ರಷ್ಟು ಲೇಔಟ್‌ನ ನಿವೇಶನಗಳನ್ನು ಮಾತ್ರ ಖಾತೆ ದಾಖಲಿಸಿ ನಂತರ ಲೇಔಟ್‌ಗೆ ಪೂರ್ಣವಾಗಿ ಮೂಲಭೂತ ಸೌಕರ್ಯ ಒದಗಿಸಿದ ನಂತರದಲ್ಲಿ ಉಳಿದ ನಿವೇಶನಗಳ ಖಾತೆಗಳನ್ನು ದಾಖಲಿಸಲಾಗುವುದು. ಅನೇಕ ಲೇಔಟ್‌ಗಳಲ್ಲಿ ಶೇ.40 ಖಾತೆ ದಾಖಲಿಸಿಕೊಂಡು ಮೂಲಭೂತ ಸೌಕರ್ಯಗಳನ್ನು ಒದಗಿಸುವ ಕಾಮಗಾರಿ ಮಾಡಿಸಲಾಗುತ್ತಿದೆ.
(ಊ)	ಮೂಲಭೂತ ಸೌಲಭ್ಯವನ್ನು ಒದಗಿಸಲು ಕೈಗೊಂಡ ಕ್ರಮವೇನು? (ವಿವರ ಒದಗಿಸುವುದು)	ಮೇಲ್ಕಂಡ ಸರ್ಕಾರದ ಆದೇಶಗಳ ಪ್ರಕಾರ ಮೂಲಭೂತ ಸೌಕರ್ಯಗಳನ್ನು ಒದಗಿಸಲು ವಿಫಲವಾದ ಸಂಬಂಧಪಟ್ಟ ಲೇಔಟ್‌ನ ಮಾಲೀಕರಿಗೆ ಸರ್ಕಾರದ ಆದೇಶದಲ್ಲಿ ನಿಗದಿ ಪಡಿಸಿರುವ ಸೂಚನೆಗಳಂತೆ ಕ್ರಮ ಕೈಗೊಂಡು ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಕ್ರಮ ಕೈಗೊಳ್ಳಲಾಗುವುದು.

ಸಂಖ್ಯೆ: ನಅಇ 168 ಜಿಇಎಲ್ 2018

(ರಮೇಶ್ ಲ. ಜಾರಕೀಹೊಳಿ)
ಪೌರಾಡಳಿತ, ಸ್ಥಳೀಯ ಸಂಸ್ಥೆಗಳು,
ಹಾಗೂ ಬಂದರು ಮತ್ತು
ಒಳನಾಡು ಜಲಸಾರಿಗೆ ಸಚಿವರು

(4) Conditions may be imposed on diversion in order to secure the health, safety and convenience, and in the case of land which is to be used as building sites, in order to secure in addition that the dimensions, arrangement and accessibility of the sites are adequate for the health and convenience of occupiers or are suitable to the locality and do not contravene the provisions of any law relating to town and country planning or the erection of buildings.

(5) Where the Deputy Commissioner fails to inform the applicant of his decision on the application made under sub-section (2) within a period of four months, from the date of receipt of the application, the permission applied for shall be deemed to have been granted.

(6) Unless the Deputy Commissioner shall, in any particular instance otherwise direct, no application under sub-section (2) shall be recognised unless it is made by the occupant.

[1][(6a) In Dakshina Kannada District, Kodagu District, and Kollegal Taluk of Mysore District where any land assessed or held for purposes of agriculture has been diverted or used for any other purposes, before the date of commencement of the Karnataka Land Revenue (Amendment) Act, 1981, the land so used together with the land appurtenant to any building (other than a farm house) therein, not exceeding three times the built area of such building, shall with effect from such date be deemed to have been permitted to be used for purposes other than agriculture.][1]

1. Inserted by Act 42 of 1981 w.e.f. 2.10.1980.

[1][(7) When any land assessed or held for the purpose of agriculture is permitted under sub-section (2) [2][or is diverted under the [3][provisos][3] to the said sub-section][2] or is deemed to have been permitted under sub-section (5) or sub-section (6a), to be used for any purpose unconnected with agriculture, the Deputy Commissioner may, subject to such rules as may be made by the State Government in this behalf, require the payment of a fine. No assessment shall be leviable on such land thereafter except under sub-section (2) of section 83.

Explanation.—For the purpose of this section, "occupant" includes a mulgeni tenant or a permanent tenant.][1]

1. Substituted by Act 42 of 1981 w.e.f. 2.10.1980.
2. Inserted by Act 20 of 1983 w.e.f. 28.6.1983.
3. Substituted by Act 2 of 1991 w.e.f. 20.3.1991.

96. Penalty for using agricultural land for other purpose without permission.—(1) If any land assessed or held for the purpose of agriculture

sub-section (2A) shall be liable to be demolished or brought back to their earlier use and expenses incurred thereon shall be collected from such person as arrears of land revenue.][1]

1. Inserted by Act 26 of 2009 w.e.f. 29.9.2009.

[1][Provided that the Deputy Commissioner shall not refuse permission for diversion of such land included in the [2][Master Plan][2] published under the Karnataka Town and Country Planning Act, 1961 (Karnataka Act 11 of 1963), if such diversion is in accordance with the purpose of land use specified in respect of the land in such plan.][1]

1. Inserted by Act 2 of 1991 w.e.f. 20.3.1991.
2. Substituted by Act 1 of 2005 w.e.f. 14.2.2005.

[1][[2][Provided further that][2] in Dakshina Kannada District, subject to any law for the time being in force regarding erection of buildings or the construction of wells or tanks, an occupant of [2][dry (punja) land, wet land or garden land][2] who is not,—

(*a*) a person registered or liable to be registered as an occupant of such land under section 48A of the Karnataka Land Reforms Act, 1961 (Karnataka Act 10 of 1962); or

(*b*) a grantee of such land under section 77 of the said Act, may, without obtaining the permission required under this sub-section and notwithstanding anything contained therein, divert such land or part thereof to any other purpose after sending a prior notice in that behalf, in the prescribed form to the Tahsildar and paying in the prescribed manner, the fine prescribed under sub-section (7).][1]

1. Inserted by Act 20 of 1983 w.e.f. 28.6.1983.
2. Substituted by Act 2 of 1991 w.e.f. 20.3.1991.

(3) Permission to divert may be refused by the Deputy Commissioner on the ground [1][that the diversion is likely to defeat the provisions of any law for the time being in force or that it is likely to cause a public nuisance][1] or that it is not in the interests of the general public or that the occupant is unable or unwilling to comply with the conditions that may be imposed under sub-section (4).

1. Substituted by Act 2 of 1991 w.e.f. 20.3.1991.

[1][(3A) xxx][1]

1. Omitted by Act 1 of 2005 w.e.f. 14.2.2005.

[1][(3B) xxx][1]

1. Omitted by Act 1 of 2005 w.e.f. 14.2.2005.

(iv) is a forest land;

(v) belonging to another person over which the applicant has no title;

(vi) is reserved for parks, play grounds, open places or for providing any civic amenities;

(vii) or building is abutting to neighbouring property, storm water drains, tank bed areas, river course or beds and canals or below the high tension electric line;

(viii) use is against height restrictions specified in zoning regulations for heritage monuments, aerodrums and Defense Regulations;

(ix) not conforms to any clearance from high-tension lines or fire protection measures;

(x) is in the area covered by the Coastal Zone Regulations of the Ministry Environment and Forest, Government of India;

(xi) regularisation of violation in respect of change of land use shall be made as far as may be in accordance with section 14A of the Karnataka Town and Country Planning Act, 1961;

(xii) or development in respect of any building having more than two floors shall be regularised unless,-

(a) a certificate from a Structural Engineer is produced regarding the structural stability of such building;

(b) a No Objection Certificate is obtained from the Fire Force Department.

(xiii) or unauthorised development or construction made in agricultural zone of approved Master Plan or green belt area declared under Karnataka Land Revenue Act, 1964; and

(xiv) is covered under any other prohibition as may be prescribed:

1.Shall be and shall always be deemed to have been substituted by Act 29 of 2011 w.e.f. 27.6.2011.

(2AA) Burden of proving that the diversion or change of land use was made for residential purpose prior to 31st day of December 2008 shall lie on the applicant who seeks regularisation of such unauthorised diversion or change of land use.

(2AAA) All such diversions or change of land use which are not regularised or where applicant does not apply within the time specified in

95. Uses of agricultural land and the procedure for use of agricultural land for other purpose.—(1) Subject to any law for the time being in force regarding erection of buildings or construction of wells or tanks, an occupant of land assessed or held for the purpose of agriculture is entitled by himself, his servants, tenants, agents, or other legal representatives, to erect farm buildings, construct wells or tanks, or make any other improvements thereon for the better cultivation of the land or its more convenient use for the purpose aforesaid.

(2) If any occupant of land assessed or held for the purpose of agriculture wishes to divert such land or any part thereof to any other purpose, he shall [1][notwithstanding anything contained in any law for the time being in force][1] apply for permission to the Deputy Commissioner who may, subject to the provisions of this section and the rules made under this Act, refuse permission or grant it on such conditions as he may think fit.

1. Inserted by Act 2 of 1991 w.e.f. 15.1.1965.

[1][(2A) Where any occupant of land assessed or held for the purpose of agriculture has diverted such land or part thereof to residential purpose without obtaining the permission of Deputy Commissioner under sub-section (2), prior to 31st day of December 2008 and desirous to get such diversion be regularised, shall, apply [1][within the period of one year from the date of commencement of the Karnataka Land Revenue (Amendment) Act, 2011][1] in such form, alongwith such fee and penalty, as may be prescribed, to the Deputy Commissioner. On receipt of such application, the Deputy Commissioner may, notwithstanding anything contained in this Act, but subject to the provisions of any other law for the time being in force and subject to such conditions and in such manner as may be prescribed, on production of such evidence as he may require it to be necessary and after an enquiry, regularise or refuse to regularize except where such land,-

(i) lies in the line of natural drains or course of valley;

(ii) belongs to the State Government or an authority owned or controlled by the State Government or any local Authority;

(iii) coming in the way of existing or proposed roads, inner or outer ring roads, national high ways, by pass over ring roads including those proposed for widening and railway lines, tram ways, mass rapid transit system projects, communications and other civic facilities or public utilities;

(3) If, within the period of six months from the date on which the purchase notice is served under this section, the State Government has not confirmed the notice, the notice shall be deemed to be confirmed at the expiration of that period, and the Planning Authority on which the notice was served shall be deemed to be authorised to acquire the interest of the owner compulsorily in accordance with the provisions of this Act at the expiration of the said period.

(4) The compulsory acquisition of the interest of the owner of a land under this section shall be deemed to be acquisition of land needed for a public purpose within the meaning of the Land Acquisition Act, 1894 (Central Act I of 1894).

17. Sanction for sub-division of plot or lay-out of private street.—(1) Every person who intends to sub-divide his plot or make or lay-out a private street on or after the date of the publication of the declaration of intention to prepare the outline development plan under sub-section (1) of section 10, shall submit the lay-out plan together with the prescribed particulars to the Planning Authority for sanction.

(2) The Planning Authority may, within the prescribed period, sanction such plan either without modification or subject to such modifications and conditions as it considers expedient or may refuse to give sanction, if the Planning Authority is of opinion that such division or laying out is not in any way consistent with the proposals of the outline development plan.

(3) No compensation shall be payable for the refusal or the insertion, imposition or modification or conditions in the grant of sanction.

(4) If any person does any work in contravention of sub-section (1) or in contravention of the modifications and conditions of the sanction granted under sub-section (2) or despite refusal for the sanction under the said sub-section (2), the Planning Authority may direct such person by notice in writing to stop any work in progress and after making an inquiry in the prescribed manner, remove or pull down any work or restore the land to its original condition.

(5) Any expenses incurred by the Planning Authority under sub-section (4) shall be a sum due to the Planning Authority under this Act from the person in default.

[1][(6) Any person aggrieved by the decision of the Planning Authority under sub-section (2) or sub-section (4) may, within thirty days from the date of such decision appeal to such authority as may be prescribed.

(7) The prescribed authority may after giving a reasonable opportunity of being heard to the appellant and the Planning Authority, pass such order as it deems fit, as far as may be, within four months from the date of receipt of the appeal.][1]

1. Sub-sections (6) and (7) Inserted by Act 17 of 1991 w.e.f. 19.4.1991

18. Recovery of a fee in certain cases of permission for change in the use of land or building.- [1][(1) Where permission for change of land use or development of land or building is granted under section 14A or section 14B or section 15 or section 17 and such change of land use or development is capable of yielding a better income to the owner, the Planning Authority may levy a prescribed fee not exceeding one-third of the estimated increase in the value of the land or building in the prescribed manner for permitting such change of land use or development of land or building][1]

1. Substituted by Act 23 of 2004 w.e.f. 03.06.2004.

(2) Any person aggrieved by the levy of fee under sub-section (1), may within such period as may be prescribed, appeal to the District Court having jurisdiction on the ground that the change or development is not capable of yielding a better income to the owner. The decision of the District Court on such appeal shall be final.

[1][(3) The State Government may exempt any Board, Authority or body constituted by or under any law and owned or controlled by the State Government or Central Government or an infrastructure Project promoted or implemented by any Company or person and approved by the State Government or Central Government from the payment of fee specified under sub-section (1).

Explanation:- For the purpose of this section and section 18A "Infrastructure Project " means,-

(a) road, bridge, air port, port, inland water ways and inland ports, rail system or any other public facility of a similar nature as may be notified by the State Government from time to time;

(b) a highway project including housing or other activities being an integral part of that project;

[illegible]

[illegible] 2006 [illegible]

[illegible]

[illegible] 12-11-2007

[illegible]

[illegible] (1)

[illegible] 21-04-90.

[illegible] 104(1) [illegible] 2005

[illegible] 09-05-05.

4. [illegible] 102 [illegible] 2005 [illegible] 09-06-05.

******

[illegible]

1. [illegible]

2. [illegible]

(8)

[illegible] ನೀರು [illegible]

i) [illegible]

ii) [illegible] 10 [illegible]

3. ಪ್ರಾಧಿಕಾರವು ಈ ನಕ್ಷೆ ವಿನ್ಯಾಸಕ್ಕೆ ಅನುಮೋದನೆ ನೀಡಿದ ನಂತರ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ ಪ್ರಕರಣ 18 ರನ್ವಯ ಕರ್ನಾಟಕ ಯೋಜನಾ ಪ್ರಾಧಿಕಾರಗಳ ನಿಯಮಾವಳಿಗಳು 1965 ರ ನಿಯಮ 37(ಎ) ರಂತೆ ನಿಗದಿಪಡಿಸಿರುವ ಶುಲ್ಕ ಪಾವತಿಸಲು ಅರ್ಜಿದಾರರಿಗೆ ನಿಗದಿತ ನಮೂನೆಯಲ್ಲಿ ಸೂಚನೆಗಳನ್ನು ನೀಡತಕ್ಕದ್ದು ಹಾಗೂ ಪ್ರಾಧಿಕಾರದ ತಾಂತ್ರಿಕ (ಇಂಜಿನಿಯರಿಂಗ್) ಶಾಖೆಯಲ್ಲಿ ವಿನ್ಯಾಸದ ಸಿವಿಲ್ ಕಾಮಗಾರಿ, ಒಳಚರಂಡಿ ಮತ್ತು ನೀರು ಸರಬರಾಜು ವ್ಯವಸ್ಥೆ [illegible] ಮತ್ತು ಉದ್ಯಾನವನದ ಅಭಿವೃದ್ಧಿಗಾಗಿ ಅಂದಾಜು ಪಟ್ಟಿಯನ್ನು ತಯಾರಿಸಲು ಕ್ರಮ ಕೈಗೊಳ್ಳತಕ್ಕದ್ದು. ಸಿವಿಲ್ ಕಾಮಗಾರಿಗೆ ಅಂದಾಜು ಪಟ್ಟಿ [illegible] (ಪ್ರಸಕ್ತ ಸಾಲಿನ ದರಪಟ್ಟಿ ಆಧಾರದಲ್ಲಿ) ಸಹಾಯದಿಂದಲೂ, ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆಗೆ ಸಂಬಂಧಿಸಿದ ಅಂದಾಜು ಪಟ್ಟಿಯನ್ನು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಸಹಾಯದಿಂದಲೂ ಮತ್ತು ವಿದ್ಯುತ್ ಸೌಲಭ್ಯಕ್ಕೆ ಸಂಬಂಧಿಸಿದ ಅಂದಾಜು ಪಟ್ಟಿಯನ್ನು ಸಂಬಂಧಿಸಿದ ವಿದ್ಯುತ್ ಸರಬರಾಜು ಕಂಪನಿಯಿಂದಲೂ ಮತ್ತು ಉದ್ಯಾನವನ ಅಭಿವೃದ್ಧಿಪಡಿಸಲು ಅಂದಾಜು ಪಟ್ಟಿಯನ್ನು ತೋಟಗಾರಿಕೆ ಇಲಾಖೆಯ ಸಹಾಯದಿಂದಲೂ ಪಡೆದುಕೊಳ್ಳತಕ್ಕದ್ದು. ಸದರಿ ಕಾಮಗಾರಿಗಳನ್ನು ಸಂಬಂಧಿಸಿದ ಇಲಾಖೆಯಿಂದಲೇ ಕೆಲಸ ಮಾಡಿಸಲು ಇಚ್ಛಿಸಿದಲ್ಲಿ ಅಂದಾಜಿನ ಹಣವನ್ನು ಪ್ರಾಧಿಕಾರವು ಅರ್ಜಿದಾರರಿಂದ ಪಾವತಿಸಿಕೊಂಡು ಅದನ್ನು ಆಯಾ ಇಲಾಖೆಯಲ್ಲಿ ಡೆಪಾಸಿಟ್ ಮಾಡಬೇಕು ಅಥವಾ ಅರ್ಜಿದಾರರೇ ಸದರಿ ಅಭಿವೃದ್ಧಿ ಕಾಮಗಾರಿಗಳನ್ನು ಮಾಡಲು ಇಚ್ಛಿಸಿದಲ್ಲಿ ಅರ್ಜಿದಾರರು ಆಯಾ ಇಲಾಖೆಯನ್ನು ಸಂಪರ್ಕಿಸಿ ಇಲಾಖೆಯ ಸೂಚನೆಯಂತೆ ಮೇಲ್ವಿಚಾರಣಾ ಶುಲ್ಕ ಅದರ ಇಲಾಖೆಗೆ ಪಾವತಿಸಿ ಪರವಾನಗಿ ಹೊಂದಿರುವ (ರಿಜಿಸ್ಟರ್ಡ್) ಗುತ್ತಿಗೆದಾರರಿಂದ ಕಾಮಗಾರಿಯನ್ನು ಪೂರ್ಣಗೊಳಿಸಿ ಸಂಬಂಧಿಸಿದ ಇಲಾಖೆಯಿಂದ ದೃಢೀಕೃತ ಪ್ರಮಾಣ ಪತ್ರ ಪಡೆದು ಪ್ರಾಧಿಕಾರಕ್ಕೆ ಸಲ್ಲಿಸತಕ್ಕದ್ದು. ಸಿವಿಲ್ ಕಾಮಗಾರಿಯನ್ನು ಪ್ರಾಧಿಕಾರವೇ ಕೈಗೊಳ್ಳುವ ಸಂದರ್ಭದಲ್ಲಿ ಸಂಬಂಧಿಸಿದ ಲೋಕೋಪಯೋಗಿ ಇಲಾಖೆಯ (ಪ್ರಸಕ್ತ ಸಾಲಿನ ದರಪಟ್ಟಿ ಆಧಾರದಲ್ಲಿ) ತಯಾರಿಸಿದ ಅಂದಾಜು ಮೊತ್ತಕ್ಕೆ [illegible] 17.50 [illegible] ಅಭಿವೃದ್ಧಿ ಶುಲ್ಕ ನಿಗದಿಪಡಿಸಿ ಅದರಂತೆ ಅಭಿವೃದ್ಧಿ ಶುಲ್ಕ ಪಾವತಿಸಲು ಅರ್ಜಿದಾರರಿಗೆ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ 1987 ರ ಕಲಂ 32 ರನ್ವಯ [illegible]

4. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆಯನ್ವಯ ನಿಗದಿಪಡಿಸಿರುವ ಶುಲ್ಕ [illegible] ಕಾಮಗಾರಿಗಳಿಗೆ [illegible] ಶುಲ್ಕವನ್ನು ಅರ್ಜಿದಾರರು ಪಾವತಿಸಿದ ನಂತರ [illegible] ವಿನ್ಯಾಸದ [illegible] ಮತ್ತು [illegible] ಅರ್ಜಿದಾರರು [illegible] (ಅಭಿವೃದ್ಧಿ [illegible]) [illegible]

[illegible]

[illegible]

5. ಒಂದು ವೇಳೆ ಅರ್ಜಿದಾರರು ಸಿವಿಲ್ ಕಾಮಗಾರಿಯನ್ನು [illegible] ಕಾಮಗಾರಿಯು [illegible] ಪಡೆದುಕೊಂಡು ಸಿವಿಲ್ ಕಾಮಗಾರಿಯನ್ನು ಪ್ರಾಧಿಕಾರದ [illegible] ತಾಂತ್ರಿಕ ಅಂಶಗಳನ್ನೊಳಗೊಂಡ (ಸ್ಪೆಸಿಫಿಕೇಷನ್) ಪೂರ್ಣಗೊಳಿಸುವ ಬಗ್ಗೆ ಅರ್ಜಿದಾರರಿಂದ [illegible] ಪಡೆದುಕೊಂಡು ಅನುಮತಿ ನೀಡತಕ್ಕದ್ದು ಹಾಗೂ ಕಾಮಗಾರಿಯನ್ನು ಪ್ರಾಧಿಕಾರವು [illegible] ನಿರ್ವಹಿಸಿದ ಬಗ್ಗೆ ಪ್ರಾಧಿಕಾರದ ಇಂಜಿನಿಯರ್ ಕಡೆಯಿಂದ ಪ್ರಮಾಣ ಪತ್ರ [illegible] ಅರ್ಜಿದಾರರು ಸಿವಿಲ್ ಕಾಮಗಾರಿಯನ್ನು ಪೂರ್ಣಗೊಳಿಸಿ ಹಾಗೂ ಉಳಿದ ಕಾಮಗಾರಿಗಳಿಗೆ [illegible] ಠೇವಣಿಗಳನ್ನು, ಸಂಪರ್ಕ ಕಾಮಗಾರಿಗಳನ್ನು ಪೂರ್ಣಗೊಳಿಸಿದ ನಂತರ ಸಂಬಂಧಿಸಿದ ಠೇವಣಿಗಳ [illegible] ಪ್ರಮಾಣ ಪತ್ರ ಸಲ್ಲಿಸತಕ್ಕದ್ದು. ವಿನ್ಯಾಸದಲ್ಲಿ [illegible] ಅಗತ್ಯ ಕ್ರಮ ಕೈಗೊಳ್ಳತಕ್ಕದ್ದು.

6. ಖಾಸಗಿ ವಿನ್ಯಾಸದಾರರು / ಅಭಿವೃದ್ಧಿದಾರರು (ಡೆವಲಪರ್) ಸಂಬಂಧಿಸಿದ ಪ್ರಾಧಿಕಾರಗಳಾದ ಕರ್ನಾಟಕ ನಗರ ನೀರು ಸರಬರಾಜು ಮಂಡಳಿಯಿಂದ ಮತ್ತು ವಿದ್ಯುತ್ ಸರಬರಾಜು ಕಂಪೆನಿಯಿಂದ ಕಡ್ಡಾಯವಾಗಿ ನಿರಾಕ್ಷೇಪಣಾ ಪತ್ರ ಪಡೆದು ಸಲ್ಲಿಸತಕ್ಕದ್ದು.

7. ಖಾಸಗಿ ವಿನ್ಯಾಸದಾರರು / ಅಭಿವೃದ್ಧಿದಾರರು (ಡೆವಲಪರ್ಸ್) ಜನಹಿತ ಮತ್ತು ಸರ್ಕಾರದ ಮಾರ್ಗದರ್ಶನವನ್ನು ಕಡ್ಡಾಯವಾಗಿ ಅನುಸರಿಸತಕ್ಕದ್ದು.

8. ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ 1987ರ ಪ್ರಕರಣ 32 ರಂತೆ ವಿನ್ಯಾಸದ ರಸ್ತೆ, ಉದ್ಯಾನವನ ಮತ್ತು ಬಯಲು ಜಾಗ ಹಾಗೂ ನಾಗರೀಕ ಸೌಲಭ್ಯದ ನಿವೇಶನಗಳನ್ನು ಪ್ರಾಧಿಕಾರಕ್ಕೆ ಹಸ್ತಾಂತರಿಸಿದ ನಂತರ ಪ್ರಾಧಿಕಾರವು ಸರ್ಕಾರದ ಸುತ್ತೋಲೆ ಸಂ. ನಅಇ:112:ಬೆಂಮಪ್ರ:2005 ದಿನಾಂಕ 26-05-2005 ರಲ್ಲಿ ನೀಡಿರುವ ನಿರ್ದೇಶನದಂತೆ ವಿನ್ಯಾಸದಲ್ಲಿಯ ನಿವೇಶನಗಳನ್ನು ಬಿಡುಗಡೆಗೊಳಿಸುವ ಕುರಿತು ಅನುಸರಿಸಬೇಕಾದ ಕ್ರಮಗಳನ್ನೆಲ್ಲಾ ಅನುಸರಿಸಿ ವಿನ್ಯಾಸವನ್ನು ಬಿಡುಗಡೆ ಮಾಡತಕ್ಕದ್ದು.

9. ವಿನ್ಯಾಸವನ್ನು ಅಭಿವೃದ್ಧಿ ಹಂತದಲ್ಲಿರುವಾಗ ನಗರಾಭಿವೃದ್ಧಿ ಪ್ರಾಧಿಕಾರದ ಮತ್ತು ಸ್ಥಳೀಯ ಸಂಸ್ಥೆಯ [illegible] ಸಿಬ್ಬಂದಿಗಳು ಕೆಲಸದ ಗುಣಮಟ್ಟವನ್ನು [illegible] ಅವಶ್ಯಕತೆ ಇದೆ. [illegible]

[illegible]

10. [illegible]

11. [illegible]

ಅಗತ್ಯವಿದ್ದಲ್ಲಿ [illegible] ನಿರ್ವಹಣೆಗಾಗಿ [illegible] ಬಳಸಬಹುದು.

ಮೇಲ್ಕಂಡ ಸೂಚನೆಗಳನ್ನು ಎಲ್ಲಾ ನಗರಾಭಿವೃದ್ಧಿ ಪ್ರಾಧಿಕಾರಗಳು ಕಟ್ಟುನಿಟ್ಟಾಗಿ ಪಾಲಿಸಲು ಸೂಚಿಸಲಾಗಿದೆ. ಈ ಸೂಚನೆಗೆ ವ್ಯತಿರಿಕ್ತವಾಗಿ ಕ್ರಮ ಕೈಗೊಂಡಲ್ಲಿ ಸಂಬಂಧಪಟ್ಟ ಪ್ರಾಧಿಕಾರದ ಆಯುಕ್ತರನ್ನು ಹೊಣೆಗಾರರನ್ನಾಗಿಸಿ [illegible] ಕ್ರಮ ಜರುಗಿಸಲಾಗುವುದು.

([illegible])
ಸರ್ಕಾರದ ಅಧೀನ ಕಾರ್ಯದರ್ಶಿ
ನಗರಾಭಿವೃದ್ಧಿ ಇಲಾಖೆ.

ಗೆ:

1. ಎಲ್ಲಾ ಜಿಲ್ಲಾಧಿಕಾರಿಗಳು.
2. ನಿರ್ದೇಶಕರು, ನಗರ ಯೋಜನಾ ಇಲಾಖೆ.
3. ಆಯುಕ್ತರು, ಎಲ್ಲಾ ನಗರಾಭಿವೃದ್ಧಿ ಪ್ರಾಧಿಕಾರಗಳು.
4. ಸದಸ್ಯ ಕಾರ್ಯದರ್ಶಿ, ನಗರ ಯೋಜನಾ ಪ್ರಾಧಿಕಾರಗಳು.
5. ಆಯುಕ್ತರು, ಎಲ್ಲಾ ಮಹಾನಗರ ಪಾಲಿಕೆ, ಪುರಸಭೆ : ನಗರಸಭೆ.
6. ಮುಖ್ಯಾಧಿಕಾರಿಗಳು, ನಗರ : ಪಟ್ಟಣ ಪಂಚಾಯತಿ.
7. ಕಾರಕ : ಕಡತ.

ಅನುಬಂಧ-4 (17)

ಕರ್ನಾಟಕ ಸರ್ಕಾರ

ಸಂಖ್ಯೆ: ನಅಇ 08 ಬೆಮಪ್ರಾ 2013

	Grand Total	**293**	**173**	**27**	**101**	**56**	**381**	**43**	**1179**

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 199

ಮಾನ್ಯ ವಿಧಾನಸಭೆ ಸದಸ್ಯರ ಹೆಸರು : ಶ್ರೀ ವಿಶ್ವನಾಥ್ ಚಂದ್ರಶೇಖರ್ ಮಾಮನಿ (ಸವದತ್ತಿ ಯಲ್ಲಮ್ಮ)

ಉತ್ತರಿಸಬೇಕಾದ ದಿನಾಂಕ : 11.07.2018.

ಉತ್ತರಿಸುವ ಸಚಿವರು : ಮಾನ್ಯ ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ, ಅಲ್ಪ ಸಂಖ್ಯಾತರ ಕಲ್ಯಾಣ & ವಕ್ಫ್ ಹಾಗೂ ಹಜ್ ಇಲಾಖಾ ಸಚಿವರು.

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ಸವದತ್ತಿ ಯಲ್ಲಮ್ಮ ವಿಧಾನಸಭಾ ಕ್ಷೇತ್ರಕ್ಕೆ ಪ್ರತಿ ತಿಂಗಳು ಸರಬರಾಜು ಆಗುತ್ತಿರುವ ಅಕ್ಕಿ, ಗೋಧಿ, ಸಕ್ಕರೆ ಹಾಗೂ ಇತರೆ ಪಡಿತರ ಪ್ರಮಾಣ ಎಷ್ಟು;	ಸವದತ್ತಿ ಯಲ್ಲಮ್ಮ ವಿಧಾನಸಭಾ ಕ್ಷೇತ್ರಕ್ಕೆ ಪ್ರತಿ ತಿಂಗಳು ಸರಬರಾಜು ಆಗುತ್ತಿರುವ ಪ್ರಮಾಣ ಕ್ವಿಂಟಾಲ್‌ಗಳಲ್ಲಿ. ಅಕ್ಕಿ– 13964.98 ಗೋಧಿ– 0.00 ಸಕ್ಕರೆ – 0.00 ತೊಗರಿಬೇಳೆ– 614.56 ಸೀಮೆಎಣ್ಣೆ (ಗ್ರಾಮಾಂತರ ಪ್ರದೇಶ ಮಾತ್ರ) (ಎಎವೈ+ಬಿಪಿಎಲ್+ ವಿಲ್ಲಿಂಗ್‌ನೆಸ್ ನೀಡಿದ ಪಡಿತರ ಚೀಟಿಗಳು ಸೇರಿ) 86951
ಆ)	ಈ ಮತಕ್ಷೇತ್ರಕ್ಕೆ ಕಳೆದ ಮೂರು ತಿಂಗಳಿನಿಂದ ಅಂತ್ಯೋದಯ ಅನ್ನ ಹಾಗೂ ಬಿಪಿಎಲ್ ಕಾರ್ಡ್‌ದಾರರಿಗೆ ಅಕ್ಕಿ ಹೊರತಾಗಿ ಬೇರೆ ಪಡಿತರ ದಿನಸಿಗಳು ಸರಬರಾಜು ಆಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಸರ್ಕಾರ ಕೈಗೊಂಡ ಕ್ರಮವೇನು? (ವಿವರ ನೀಡುವುದು)	ಈ ಮತಕ್ಷೇತ್ರಕ್ಕೆ ಕಳೆದ ಮೂರು ತಿಂಗಳಿನಿಂದ ಅಂತ್ಯೋದಯ ಹಾಗೂ ಬಿಪಿಎಲ್ ಕಾರ್ಡ್‌ದಾರರಿಗೆ ಅಕ್ಕಿ–41894.94, ತೊಗರಿಬೇಳೆ – 1843.68 ಹಾಗೂ ಗ್ರಾಮಾಂತರ ಪ್ರದೇಶದ ಎಲ್ಲಾ ಬಗೆಯ ಪಡಿತರ ಚೀಟಿದಾರರಿಗೆ ಸೀಮೆಎಣ್ಣೆ (ಎಎವೈ+ಬಿಪಿಎಲ್+ ವಿಲ್ಲಿಂಗ್‌ನೆಸ್ ನೀಡಿದ ಪಡಿತರ ಚೀಟಿಗಳು ಸೇರಿ) –260853 ಲೀಟರ್ ಮಾತ್ರ ಸರಬರಾಜು ಮಾಡಲಾಗಿದೆ.

ಆನಾಸ 156 ಡಿಆರ್‌ಎ 2018

(ಬಿ. ಜೆಡ್. ಜಮೀರ್ ಅಹ್ಮದ್ ಖಾನ್)
ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ
ಹಾಗೂ ಕಾನೂನು ಮಾಪನಶಾಸ್ತ್ರ, ಅಲ್ಪ ಸಂಖ್ಯಾತರ ಕಲ್ಯಾಣ ಮತ್ತು
ವಕ್ಫ್ ಹಾಗೂ ಹಜ್ ಇಲಾಖಾ ಸಚಿವರು

ಕರ್ನಾಟಕ ವಿಧಾನ ಸಭೆ

(1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 699
(2) ಸದಸ್ಯರ ಹೆಸರು : ಡಾ॥ ಭರತ್ ಶೆಟ್ಟಿ ವೈ.
(3) ಉತ್ತರಿಸುವ ದಿನಾಂಕ : 11-07-2018
(4) ಉತ್ತರಿಸುವ ಸಚಿವರು : ನಗರಾಭಿವೃದ್ಧಿ ಮತ್ತು ವಸತಿ ಸಚಿವರು

	ಪ್ರಶ್ನೆ	ಉತ್ತರ
ಅ	ಮಂಗಳೂರು ಮಹಾನಗರ ಪಾಲಿಕೆಯಲ್ಲಿ ಇರುವ ರಾಜಕಾಲುವೆಗಳೆಷ್ಟು;	ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಒಟ್ಟು 12 ರಾಜಕಾಲುವೆಗಳಿರುತ್ತವೆ.
ಆ	ಈ ರಾಜಕಾಲುವೆಗಳಲ್ಲಿ ಹೂಳು ತುಂಬಿ ನೀರು ಮಲೀನವಾಗಿ ನಗರ ವ್ಯಾಪ್ತಿಯಲ್ಲಿ ಹರಿಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಇದನ್ನು ತಡೆಯಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;	ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಬರುವ ಪ್ರಮುಖ 12 ರಾಜ ಕಾಲುವೆಗಳನ್ನು ಪ್ರತಿ ವರ್ಷದಂತೆ ಈ ವರ್ಷವೂ ಸಹ ಹೂಳು ತೆಗೆದು ಸ್ವಚ್ಚಗೊಳಿಸಲಾಗಿರುತ್ತದೆ.
ಇ	ಈ ರಾಜಕಾಲುವೆಗಳು ಅಕ್ರಮವಾಗಿ ಒತ್ತುವರಿ ಆಗಿವೆಯೇ; ಒತ್ತುವರಿ ಆಗಿದ್ದಲ್ಲಿ ತೆರವುಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?	ಜಿಲ್ಲಾಧಿಕಾರಿಗಳು, ದಕ್ಷಿಣ ಕನ್ನಡ ಜಿಲ್ಲೆ ರವರ ನಡವಳಿ ದಿನಾಂಕ.30.05.2018ರಂತೆ ಜಿಲ್ಲಾಡಳಿತ ವತಿಯಿಂದ ನಗರದಲ್ಲಿ ಇರುವ ರಾಜಕಾಲುವೆಗಳ ಬಗ್ಗೆ ಪರಿಶೀಲಿಸಿ ಸರ್ವೆ ನಡೆಸಿ ಒತ್ತುವರಿಯಾಗಿರುವ ಬಗ್ಗೆ ವರದಿ ನೀಡಲು ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಲಾಗಿರುತ್ತದೆ. ವಿಶೇಷ ಭೂ ಸ್ವಾಧೀನಾಧಿಕಾರಿ, ಮಹಾನಗರ ಪಾಲಿಕೆ, ಮಂಗಳೂರು, Consultant Engineer, KUIDFC, KIUWMI Project, ಸಹಾಯಕ ಆಯುಕ್ತರು (ಪರೀಕ್ಷಾರ್ಥಿ) ಹಾಗೂ ತಹಶೀಲ್ದಾರರು ಸಮಿತಿಯ ಸದಸ್ಯರಾಗಿರುತ್ತಾರೆ. ಸದರಿ ಸಮಿತಿಯ ವತಿಯಿಂದ ಸರ್ವೆ ಕಾರ್ಯ ಪ್ರಗತಿಯಲ್ಲಿರುತ್ತದೆ. ಸಮಿತಿಯಿಂದ ವರದಿ ಬಂದ ಕೂಡಲೇ ರಾಜಕಾಲುವೆ ಅಕ್ರಮ ಒತ್ತುವರಿ ಬಗ್ಗೆ ಮಹಾನಗರ ಪಾಲಿಕೆಯಿಂದ ತೆರವುಗೊಳಿಸಲು ಮುಂದಿನ ಕ್ರಮ ವಹಿಸಲಾಗುತ್ತದೆ.

ನಅಇ 24 ಎಂಎಂಸಿ 2018

(ಯು.ಟಿ. ಖಾದರ್)
ನಗರಾಭಿವೃದ್ಧಿ ಮತ್ತು ವಸತಿ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	161
ಸದಸ್ಯರ ಹೆಸರು	ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ)
ಉತ್ತರಿಸಬೇಕಾದ ದಿನಾಂಕ	11/07/2018
ಉತ್ತರಿಸುವವರು	ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಹಾಗೂ ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು

ಕ್ರ.ಸಂ.	ವಿಷಯ	ಉತ್ತರ
1	ರಾಜ್ಯದಲ್ಲಿ ದಿನಗೂಲಿ ಪೌರಕಾರ್ಮಿಕರನ್ನು ಖಾಯಂಗೊಳಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?	ಕರ್ನಾಟಕ ಪುರಸಭೆ (ರಾಜ್ಯದ ಮಹಾನಗರ ಪಾಲಿಕೆಗಳು ನಗರಸಭೆಗಳು, ಪುರಸಭೆಗಳು ಮತ್ತು ಪಟ್ಟಣ ಪಂಚಾಯಿತಿಗಳ ಪೌರಕಾರ್ಮಿಕರ ನೇಮಕಾತಿ) (ವಿಶೇಷ) ನಿಯಮಗಳು 2017 ವಿಶೇಷ ನೇಮಕಾತಿ ನಿಯಮಗಳ ರೀತ್ಯಾ ರಾಜ್ಯದ ಮಹಾನಗರಪಾಲಿಕೆ, ನಗರಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯಿತಿಗಳಲ್ಲಿನ ದಿನಗೂಲಿ/ಕ್ಷೇಮಾಭಿವೃದ್ಧಿ/ಗುತ್ತಿಗೆ/ಹೊರಗುತ್ತಿಗೆ ಇತ್ಯಾದಿ ಹುದ್ದೆಗಳಲ್ಲಿ ಹಾಲಿ ಕೆಲಸ ನಿರ್ವಹಿಸುತ್ತಿರುವ ನೌಕರರುಗಳನ್ನು ಮಹಾನಗರಪಾಲಿಕೆ, ನಗರಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯಿತಿಗಳಲ್ಲಿ ನೇರ ನೇಮಕಾತಿ ಕೋಟಾದಲ್ಲಿ ಖಾಲಿ ಇರುವ ಪೌರಕಾರ್ಮಿಕರ ಹುದ್ದೆಗೆ ಖಾಯಂ ನೇಮಕಾತಿ ಮಾಡಿಕೊಳ್ಳಲು ಕೋಲಾರ ಜಿಲ್ಲೆಯನ್ನು ಹೊರತುಪಡಿಸಿ ಉಳಿದ ಎಲ್ಲಾ ಜಿಲ್ಲೆಗಳಲ್ಲಿ ಪೌರಕಾರ್ಮಿಕರ ವಿಶೇಷ ನೇಮಕಾತಿ ನಿಯಮಗಳ ರೀತ್ಯಾ ಅಧಿಸೂಚನೆಯನ್ನು ಹೊರಡಿಸಲಾಗಿದೆ. ಬಿಬಿಎಂಪಿ ಯಲ್ಲಿ 2 ವರ್ಷಗಳಿಗಿಂತ ಕಡಿಮೆ ಇಲ್ಲದಂತೆ ಸೇವೆ ಸಲ್ಲಿಸಿರುವ ಹಾಗೂ ಎನ್‌ಎಂಆರ್/ದಿನಗೂಲಿ/ ಗುತ್ತಿಗೆ/ಹೊರಗುತ್ತಿಗೆ ಹಾಗೂ ಇತರೇ 4000 ಪೌರಕಾರ್ಮಿಕರುಗಳನ್ನು ಖಾಯಂಗೊಳಿಸುವ ಸಂಬಂಧ ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 536 ಎಂಎನ್‌ವೈ 2014 ದಿನಾಂಕ:01/02/2018ರಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಪೌರ ಕಾರ್ಮಿಕರ ನೇಮಕಾತಿ) (ವಿಶೇಷ) ನಿಯಮಗಳು 2017ನ್ನು ರೂಪಿಸಲಾಗಿದ್ದು, ಅದರಂತೆ ನೇಮಕಾತಿ ಮಾಡಿಕೊಳ್ಳಲು ಕ್ರಮ ಜರುಗಿಸಲಾಗುತ್ತಿದೆ.

2	ರಾಜ್ಯದಲ್ಲಿ ಈವರೆಗೆ ಯಾವ ಯಾವ ಜಿಲ್ಲೆಯಲ್ಲಿ ಎಷ್ಟು ಜನ ದಿನಗೂಲಿ ಪೌರಕಾರ್ಮಿಕರನ್ನು ಖಾಯಂ ಮಾಡಿ ಆದೇಶ ಹೊರಡಿಸಲಾಗಿದೆ?	ಪೌರಕಾರ್ಮಿಕರ ವಿಶೇಷ ನೇಮಕಾತಿ ನಿಯಮಗಳ ರೀತ್ಯಾ ಈವರೆವಿಗೆ ತುಮಕೂರು ಜಿಲ್ಲೆಯಲ್ಲಿ 174 ಹಾಗೂ ಕೊಪ್ಪಳ ಜಿಲ್ಲೆಯಲ್ಲಿ 89 ಜನ ಪೌರಕಾರ್ಮಿಕರನ್ನು ಖಾಯಂ ನೇಮಕಾತಿ ಮಾಡಿ ಆದೇಶ ಹೊರಡಿಸಲಾಗಿದೆ.
3	ಶಿವಮೊಗ್ಗ ಮಹಾನಗರ ಪಾಲಿಕೆಯಲ್ಲಿ ದಿನಗೂಲಿ ಪೌರಕಾರ್ಮಿಕರನ್ನು ಖಾಯಂಗೊಳಿಸಲು ಕೈಗೊಂಡಿರುವ ಕ್ರಮಗಳೇನು?	ಶಿವಮೊಗ್ಗ ಮಹಾನಗರ ಪಾಲಿಕೆಯಲ್ಲಿ ಖಾಲಿ ಇರುವ 86 ನೇರ ನೇಮಕಾತಿ ಪೌರಕಾರ್ಮಿಕರ ಹುದ್ದೆಗಳಿಗೆ ದಿನಗೂಲಿ/ಕ್ಷೇಮಾಭಿವೃದ್ಧಿ/ಗುತ್ತಿಗೆ/ಹೊರಗುತ್ತಿಗೆ ಇತ್ಯಾದಿ ಹುದ್ದೆಗಳಲ್ಲಿನ ನೌಕರರನ್ನು ಖಾಯಂ ನೇಮಕಾತಿ ಮಾಡಿಕೊಳ್ಳಲು ಶಿವಮೊಗ್ಗ ಜಿಲ್ಲಾಧಿಕಾರಿಗಳ ಪತ್ರ ಸಂಖ್ಯೆ: SMGDC.DUDC.CR(4)MISS-305/17-18(77571-10299/17-18), ದಿನಾಂಕ: 19.02.2018ರಲ್ಲಿ ಅಧಿಸೂಚನೆ ಹೊರಡಿಸಲಾಗಿದೆ.
4	ಶಿವಮೊಗ್ಗ ಮಹಾನಗರಪಾಲಿಕೆಯಲ್ಲಿ ದಿನಗೂಲಿ ಪೌರಕಾರ್ಮಿಕರನ್ನು ಖಾಯಂಗೊಳಿಸಿ ಆದೇಶಿಸದಿರಲು ಕಾರಣಗಳೇನು?	ಈಗಾಗಲೇ ಜಿಲ್ಲಾಧಿಕಾರಿಗಳು ಪೌರಕಾರ್ಮಿಕರನ್ನು ನೇಮಕಾತಿ ಮಾಡಿಕೊಳ್ಳುವ ಬಗ್ಗೆ ಅಧಿಸೂಚನೆ ಹೊರಡಿಸಿರುವ ರೀತ್ಯಾ ವಿಶೇಷ ನೇಮಕಾತಿ ನಿಯಮಗಳನ್ವಯ ದಾಖಲೆಗಳನ್ನು ಪರಿಶೀಲಿಸಿ ವರದಿ ಸಲ್ಲಿಸಲು ಸಮಿತಿಯನ್ನು ರಚಿಸಲಾಗಿದ್ದು ಮಹಾನಗರ ಪಾಲಿಕೆಯ ವತಿಯಿಂದ ಸಮಿತಿಯ ವರದಿ ಸ್ವೀಕೃತವಾಗಿದ್ದು, ಸದರಿ ವರದಿಯನ್ನು ಹಾಗೂ ಅರ್ಜಿದಾರರ ಮನವಿಗಳು ಹಾಗೂ ಸೇವಾ ದಾಖಲೆಗಳನ್ನು ಪರಿಶೀಲಿಸಿ ನೇಮಕಾತಿ ಆದೇಶ ನೀಡುವ ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ.

ಸಂಖ್ಯೆ: ನಅಇ 171 ಜಿಇಎಲ್ 2018

(ರಮೇಶ್ ಲ. ಜಾರಕೀಹೊಳಿ)
ಪೌರಾಡಳಿತ, ಸ್ಥಳೀಯ ಸಂಸ್ಥೆಗಳು,
ಹಾಗೂ ಬಂದರು ಮತ್ತು
ಒಳನಾಡು ಜಲಸಾರಿಗೆ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	628
ಮಾನ್ಯ ವಿಧಾನ ಸಭೆ ಸದಸ್ಯರ ಹೆಸರು	:	ಶ್ರೀ ಆರ್. ಅಶೋಕ್ (ಪದ್ಮನಾಭನಗರ)
ಉತ್ತರಿಸಬೇಕಾದ ದಿನಾಂಕ	:	11.07.2018.
ಉತ್ತರಿಸುವ ಸಚಿವರು	:	ಮಾನ್ಯ ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ, ಅಲ್ಪ ಸಂಖ್ಯಾತರ ಕಲ್ಯಾಣ & ವಕ್ಫ್ ಹಾಗೂ ಹಜ್ ಇಲಾಖಾ ಸಚಿವರು.

<table>
<tr><th>ಕ್ರ.ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಪಡಿತರ ವಿತರಣೆಯಲ್ಲಿ ಬಿಪಿಎಲ್ ಫಲಾನುಭವಿಗಳಿಗೆ ರಾಗಿ ವಿತರಣೆ ಮಾಡಲಾಗುತ್ತಿದೆಯೇ; ಹಾಗಿದ್ದಲ್ಲಿ, ಒಂದು ಮನೆಗೆ ಎಷ್ಟು ಕೆ.ಜಿ ರಾಗಿಯನ್ನು ವಿತರಣೆ ಮಾಡಲಾಗುತ್ತಿದೆ;</td><td>ಹೌದು.
ರಾಜ್ಯ ಸರ್ಕಾರವು 2017-18 ನೇ ಸಾಲಿನ ಮುಂಗಾರು ಋತುವಿನಲ್ಲಿ ರೈತರಿಂದ ಕನಿಷ್ಠ ಬೆಂಬಲ ಯೋಜನೆಯಡಿ 9 ಜಿಲ್ಲೆಗಳಿಂದ ಒಟ್ಟು 3,77,037.41 ಕ್ವಿಂಟಾಲ್ ರಾಗಿಯನ್ನು ಖರೀದಿ ಮಾಡಿದೆ.
ಕುಟುಂಬದಲ್ಲಿನ ಪ್ರತಿ ಸದಸ್ಯನಿಗೆ 2 ಕೆ.ಜಿಯಂತೆ ರಾಗಿಯನ್ನು ವಿತರಣೆ ಮಾಡಲಾಗುತ್ತಿದೆ.</td></tr>
<tr><td>ಆ)</td><td>ರಾಗಿಯನ್ನು ಒಂದು ಕೆ.ಜಿಗೆ ಎಷ್ಟು ಹಣ ಕೊಟ್ಟು ಖರೀದಿ ಮಾಡಲಾಗುತ್ತಿದೆ?</td><td>ರಾಗಿಯನ್ನು ಒಂದು ಕೆ.ಜಿಗೆ ರೂ. 25.50/- ರಂತೆ ಖರೀದಿ ಮಾಡಲಾಗುತ್ತಿದೆ. ಖರೀದಿ ವಿವರ ಕೆಳಕಂಡಂತಿದೆ.
<table>
<tr><th>ಕ್ರ.ಸಂ</th><th>ವಿವರ</th><th>ದರ ಪ್ರತಿ ಕ್ವಿಂ. ಗೆ</th></tr>
<tr><td>1</td><td>ಮೂಲ ಖರೀದಿ ದರ</td><td>1900.00</td></tr>
<tr><td>2</td><td>ರಾಜ್ಯ ಸರ್ಕಾರದ ಪ್ರೋತ್ಸಾಹ ಧನ</td><td>400.00</td></tr>
<tr><td>3</td><td>ಮಾರುಕಟ್ಟೆ ಸೆಸ್ ಶೇ. 1.5 ರಂತೆ</td><td>28.50</td></tr>
<tr><td>4</td><td>ನಿರ್ವಹಣಾ/ಕಾರ್ಮಿಕ ವೆಚ್ಚ (ಹಮಾಲಿ ವೆಚ್ಚ/ತೂಕದ ವೆಚ್ಚ)</td><td>30.00</td></tr>
<tr><td>5</td><td>ಸಾಗಾಣಿಕೆ ವೆಚ್ಚ (ಖರೀದಿ ಕೇಂದ್ರದಿಂದ ಶೇಖರಣಾ ಕೇಂದ್ರದವರೆಗೆ)</td><td>67.00</td></tr>
<tr><td>6</td><td>ರಾಗಿಯ ಶೇಖರಣೆ ಮತ್ತು ನಿರ್ವಹಣೆ ವೆಚ್ಚ ರೂ. 8.40ರಂತೆ ಪ್ರತಿ ಕ್ವಿಂ. ಗೆ 6 ತಿಂಗಳಿಗೆ ಕೆಎಸ್‌ಡಬ್ಲ್ಯುಸಿ ದರದಂತೆ</td><td>50.40</td></tr>
<tr><td>7</td><td>ಖಾಲಿ ಗೋಣಿ ಚೀಲಗಳ ಖರೀದಿ ವೆಚ್ಚ ಪ್ರತಿ 50 ಕೆ.ಜಿ ಒಂದು ಚೀಲಕ್ಕೆ ರೂ. 12 ರಂತೆ</td><td>24.00</td></tr>
<tr><td>8</td><td>ಆಡಳಿತಾತ್ಮಕ ವೆಚ್ಚ</td><td>47.50</td></tr>
<tr><td></td><td>ಒಟ್ಟು ವೆಚ್ಚ</td><td>2547.40</td></tr>
</table></td></tr>
</table>

ಆನಾಸ 164 ಡಿಆರ್ಎ 2018

(ಬಿ. ಜೆಡ್. ಜಮೀರ್ ಅಹ್ಮದ್ ಖಾನ್)
ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ
ಹಾಗೂ ಕಾನೂನು ಮಾಪನಶಾಸ್ತ್ರ, ಅಲ್ಪ ಸಂಖ್ಯಾತರ ಕಲ್ಯಾಣ ಮತ್ತು
ವಕ್ಫ್ ಹಾಗೂ ಹಜ್ ಇಲಾಖಾ ಸಚಿವರು

ಕರ್ನಾಟಕ ವಿಧಾನ ಸಭೆ

1	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	291
2	ಸದಸ್ಯರ ಹೆಸರು	:	ಶ್ರೀ ವಿ.ಸೋಮಣ್ಣ
3	ಉತ್ತರಿಸುವ ದಿನಾಂಕ	:	11-07-2018
4	ಉತ್ತರಿಸುವವರು	:	ಮಾನ್ಯ ಉಪಮುಖ್ಯಮಂತ್ರಿಗಳು

ಕ್ರ.ಸಂ	ಪ್ರಶ್ನೆ	ಉತ್ತರ
ಅ	ಕಳೆದ ಮೂರು ವರ್ಷಗಳಲ್ಲಿ ಬಿಬಿಎಂಪಿ ವ್ಯಾಪ್ತಿಯ ರಾಜ ಕಾಲುವೆಗಳಲ್ಲಿ ಹೂಳು ತೆಗೆಯಲು ಬಿಡುಗಡೆ ಮಾಡಿದ ಹಣವೆಷ್ಟು;	ಕಳೆದ ಮೂರು ವರ್ಷಗಳಲ್ಲಿ ಬಿಬಿಎಂಪಿ ವ್ಯಾಪ್ತಿಯ ರಾಜಕಾಲುವೆಗಳಲ್ಲಿ ಹೂಳು ತೆಗೆಯಲು ಬಿಡುಗಡೆ ಮಾಡಿದ ಹಣದ ವಿವರಗಳು ಈ ಕೆಳಕಂಡಂತೆ ಇರುತ್ತವೆ:
ಆ	ಯಾವ ಯಾವ ಭಾಗಗಳಲ್ಲಿ ಯಾವ ಯಾವ ರಾಜಕಾಲುವೆಗಳಿಗೆ ಎಷ್ಟು ಹಣವನ್ನು ಖರ್ಚು ಮಾಡಿ ಹೂಳು ತೆಗೆಯಲಾಗಿದೆ;	ರಾಜಕಾಲುವೆಗಳಲ್ಲಿ ಹೂಳು ತೆಗೆಯಲು ವೆಚ್ಚ ಮಾಡಿರುವ ವಿವರಗಳನ್ನು ಅನುಬಂಧ ದಲ್ಲಿ ನೀಡಿದೆ.
ಇ	ರಾಜ ಕಾಲುವೆ ಕಾಮಗಾರಿ ನಡೆಯುವಾಗ ಗಾಯಗೊಂಡವರ/ ಮೃತಪಟ್ಟವರ ಸಂಖ್ಯೆ ಎಷ್ಟು; ಹೀಗೆ ಗಾಯಗೊಂಡವರ/ಮೃತಪಟ್ಟವರ ಕುಟುಂಬಗಳಿಗೆ ಪರಿಹಾರ ನೀಡಲಾಗಿರುವುದೇ?	ರಾಜಕಾಲುವೆ ಕಾಮಗಾರಿ ನಡೆಯುವಾಗ ಗಾಯಗೊಂಡವರ/ ಮೃತಪಟ್ಟವರ ಪ್ರಕರಣಗಳು ಯಾವುದೂ ಇರುವುದಿಲ್ಲ.

(ಅ) ಉತ್ತರದ ಕೋಷ್ಟಕ:

ಕ್ರ.ಸಂ.	ವರ್ಷ	ಬಿಡುಗಡೆ ಮಾಡಿದ ಹಣ (ರೂ.ಲಕ್ಷಗಳಲ್ಲಿ)
1	2015-16	0.00
2	2016-17	695.25
3	2017-18	2689.28

ಸಂಖ್ಯೆ: ನಅಇ 368 ಎಂಎನ್‌ವೈ 2018

(ಜಿ.ಪರಮೇಶ್ವರ)
ಉಪ ಮುಖ್ಯಮಂತ್ರಿ

ಅನುಬಂಧ - 1

Statement Showing the Expenditure of Desilting for the year 2016-17 Pertaining to SWD

Sl.No	B.R.No	B.R.Date	Job No.	Head of Account	Name of Contractor	Name of Work	V.R. No	V.R.Date	Bill am
1	258	01-01-2016	307-16-000008	P-2349	UDAYSHIVA KUMAR (RAJANNA)	Removal of Accumulated in SWD in R R Nagara Zone	3	04-05-2016	106484
2	257	01-01-2016	307-16-000001	P-2351	C.Chandrashekar	Excavation of Accumulated earth in Hebbala Valley of East Zone	4	04-05-2016	198683
3	256	01-01-2016	307-16-000007	P-1730	Amilineni Sandeep Chowdary	Excavation of Accumulated earth in SWD BP-183 from Nagavara kere outlet weir to H-300 primary drain near telecom layout in Yelahanka Zone	5	04-05-2016	319428
4	270	30-01-2016	307-16-000006	P-1730	S.Prasanna kumar	Excavation of Accumulated earth in SWD of Bommanahalli Zone	8	01-07-2016	570577
5	254	31-12-2015	307-16-000004	P-2352	M/S M R Constructions	Excavation of Accumulated earth for preventing flood in Storm Water Drain South Zone	9	01-07-2016	817145

Sl.	B.R.No	B.R.Date	Job No.	Head of Account	Name of Contractor	Name of Work	V.R. No	V.R.Date	Bill am
6	303	10-03-2016	307-15-000079	P-0598	Sadashiva Charappa Biradar	Excavation of Accumulated Soil in SWD to prevent flooding at Outlet drain of Y Tank on either side of Hosakote main road in Mahadevapura Zone	10	05-07-2016	88260
7	2	02-04-2016	307-16-000006	P-1730	S Prasanna Kumar	Removal of accumulated earth in SWD in Bommanahalli zone	4	03-08-2016	518765
8	260	11-01-2016	307-15-0000078	P-0542	Vijaya Kumar.R	Removal of Accumulated earth in SWD H-400, towards chelekere and vaddarapalya and MD-269 drain	6	06-09-2016	47440
9	3	02-04-2016	307-16-000002	P-2350	M/s M.R. Construction	Excavation of accumlated earth in challaghatta valley of East zone	1	03-11-2016	824480
10	110	25-07-2016	307-15-000034	P-2349	H.S.Anand Kumar	Excavation of accumulated earth at VV V-301 from ring road bridge kavika layout 8th cross to prevent flooding pertining EE/SWD ward No.158 deepanjalinagar	20	05-11-2016	473950
11	111	25-07-2016	307-15-000035	P-2349	H.S.Anand Kumar	Excavation of accumulated earth at V Valley at 8th 9th and 10th cross of magadi road kempapura agrahara to prevent flooding pertaining to EE/SWD south in ward No.122	22	05-11-2016	430150

Sl.No	B.R.No	B.R.Date	Job No.	Head of Account	Name of Contractor	Name of Work	V.R. No	V.R.Date	Bill amou
12	316	29-03-2016			Vijay Kumar	Excavation of accumulated earth in Srorm Water Drain H 400 towards chelekere and voddarapalya and MD 269 drain	27	08-11-2016	13000.0
13	308	18-03-2016	307-16-000008		Udaya shiva kumar	Removal of Acoumulated in SWD in R R Nagara Zone	7	11-01-2017	2114100.0
14	204	20-10-2016	307-15-000031		M/s Nijaguna land developers & Builders	Excavation of Accumulated earth at Vrishabhavathi valley V 100 from Ch: 8100 to 8530m and in V-102 from Ch: 1700.00 to 1800.00 prevent flooding pertaining to Executive Engineer in South SWD.	14	25-01-2017	2162400.0
15	203	20-10-2016	307-14-000032		M/s Nijaguna land developers & Builders	Excavation of accumulated earth at Vrushabhavathi valley V-100 from Ch: 8530 to 8800 to prevent flooding pertaining to EE SWD South	10	14-03-2017	1953450.0
									69524800.0

Chief Engineer
SWD

Statement Showing the Expenditure of Desilting for the year 2017-18 Pertaining to SWD

Sl. No	B.R. No	B.R.Date	Job No.	Head of Account	Name of Contractor	Name of Work	V.R. No & Date	Bill amoun
1	296	21-02-2017	307-17-000010	P-3158	M/s K Damodar & Co	Maintenance of SWD in Chikpet constituency	4/04-04-2017	9814550.00
2	290	09-02-2017	307-17-000015	P-3158	S. Prasanna kumar	Maintenance of SWD in Bommanahalli zone .	5/04-04-2017	8612600.00
3	305	01-03-2017	307-15-000045	P-2351	M.B.Thimmegowda	Excavating of Accumulated earth in SWD (DH 233) hesaragatta main road to Thottadaguddahalli W.N 41	19/07-04-2017	1642850.00
4	304	01-03-2017	307-15-000043	P-2351	S.M.Enterprises	Excavating of Accumulated earth in SWD (DH 125) Abbigere tank waste weir to Chikkabanavara tank. W.N 39	21/07-04-2017	959480.00
5	39	22-06-2016	307-16-000002	P-2350	M.R.Construction	Excavation of Accumulated earth in Challaghatta Valley of East Zone	61/26-04-2017	12422900.00
6	49	22-06-2016	307-16-000008	P-2349	Udaya shiva kumar	Removal of Accumulated Earth in SWD in RR nagar Zone	02/03-05-2017	6661500.00
7	62	22-06-2016	050-15-000012	P-0541	M/s.Sai Infra Creators	Excavation of accumulated earth in primary storm water and providing chain link fencing to SWD near K R Puram flyover kasturinagar in ward No.50	05/03-05-2017	471950.00
8	321	23-03-2017	307-17-000007	P-3158	S Manjunath	Maintenance of SWD in Padmanabanagara constitency	06/06-05-2017	4876950.00
9	336	31-03-2017	307-17-000013	P-3158	K.N.Mahesh	Maintenance of SWD in K R Puram constituency	07/06-05-2017	9388100.00
10	91	19-07-2016	307-15-000049	P-2351	K.N.Dinesh	Excavation of accumulated earth in SWD BP-026 from BB nagara kodigehalli to tata nagara in yelahanka zone (0.0m to 900.0m) ward No.6, 7 & 8 bytarayanapura and kodigehalli	22/23-05-2017	319150.00

Sl. No	B.R. No	B.R.Date	Job No.	Head of Account	Name of Contractor	Name of Work	V.R. No & Date	Bill amount
11	92	19-07-2016	307-15-000050	P-2351	K.N.Dinesh	Excavation of accumulated earth in SWD BP-017 from canara bank layout to H-200 drain near devinagara in yelahanka zone in ward No.9	23/23-05-2017	331400.00
12	12	26-04-2017	307-17-000015	P-3158	S.Prasanna kumar	Maintenance of SWD in Bommanahalli zone .	26/23-05-2017	6026900.00
13	16	09-05-2017	307-17-000006	P-3158	S.Manjunath	Maintenance of SWD in Basavanagudi Constituency	31/29-05-2017	2325800.00
14	22	25/05/2017	307-17-000014	P-3158	K N Mahesh	Maintenance of storm water drains in mahadevpura Zone	03/15/06/2017	5181300.00
15	90	19/07/2016	307-15-000002		M/s Sri. Vekateshwara Construction	Excavation of accumulated earth at challaghatta valley c-200 from ch:3100.00 to 3600.00m (from wheelers road near komala refreshments to starting of military campus compound)	06/28/06/2017	1126700
16	120	30/07/2016	307-15-000013	P-2351	Sri. Ravi Kumar	Excavation of accumulated in Hebbal valley H 306 from ch:350.00m to 1100.00m (from doddanna nagar, DJ Halli ward no.47 to shampur main road)	07/28/06/2017	777850
17	119	30/07/2016	307-15-000011	P-2351	Sri. Ravi Kumar	Excavation of accumulated in Hebbal valley H-306 from ch:280.00m to 680.00m in Doddanna nagar, DJ Halli ward no.47	08/28/06/2017	188000
18	124	30/07/2016	307-16-000008	P-2349	Udaya Shiva Kumar (Rajanna)	Removal of Accumulated in SWD in R R Nagara Zone	02/04-07-2017	12204450.00
19	123	30/07/2016	307-16-000003	P-2349	Udaya Shiva Kumar (Rajanna)	Excavation of Accumulated earth in Vrishabhavathi Valley	03/04-07-2017	12329350.00
20	332	31/03/2017	165-17-000007	P-0541	KRIDL	Desilting and Imporovevments to Storm Water drain near fire station Banashankari 2nd stage in Ganesh Mandira ward 165	05/05-07-2017	4556250.00

Sl. No	B.R. No	B.R.Date	Job No.	Head of Account	Name of Contractor	Name of Work	V.R. No & Date	Bill amount
21	106	25/07/2017	307-16-000001		C Chandrashekar	Excavation of Accumulated earth in Hebbal Valley	13/20-07-2017	13956700.00
22	39	20-06-2017	307-17-000002	P3158 SI	M R Constructions	Maintence of Challgatta valley	-1	21497950.00
23	44	29-06-2017	307-17-000010	P3158 SI	K Damodar & Co	Maintanance of swd in chikkpet constituency	2	8981450.00
24	105	25-07-2016	307-16-000007	P1730 5 CMC	Amilineni Sandeep Chowdary	Excavating the accumulated earth in SWD BP183 from naganakere outlet weir to H-300 primary drain road telecom	4	1859230.00
25	157	31-08-2016	307-15-000016	P2350	H J Gopi	Excecavation of accumulated earth in SWD RN 211 from samruddi layout upto dorekere ch.3000 to 3200.00 in vasanthapura ward 197 in bommanahalli zone	8/16-08-2017	484650.00
26	158	31-08-2016	307-15-000018	P2352 Non-Jn Nurm	S.Prasanna Kumar	Excavation of accumulated earth in slushy condition in SWD K-209 to pre cast throuding from dollors colony to ranka colony in Bommanahalli zone	10/16-08-2017	582000.00
27	160	31-08-2016	307-15-000021	P2350 Non-Jn Nurm	S.Prasanna Kumar	Excavation of accumulated earth in slushy condition in SWD to present according from begur tank to hosur road upto oxford college in bommanahalli zone Ch:1350m to 2600m	11/16-08-2017	869450.00
28	310	18-03-2016	307-16-000001	P2351 Non Jn-Nurm	Preethi Cad Consulting Engineers Pvt Ltd	Providing consultency services for construction supervision project management pre for cost levels & other works for removal of accumulated earth in East Zone	17/29-08-2017	1041000.00
29	169	31-08-2016	307-15-000009	P2351 Non Jn-Nurm	Sri.Vaishnavi Enterprises	Excavation of accumulated earth at hebbal valley H-200 from Ch:3800.00 to 4900.00 m from New BEL road to nice ring road	18/29-08-17	1508300.00

Sl. No	B.R. No	B.R.Date	Job No.	Head of Account	Name of Contractor	Name of Work	V.R. No & Date	Bill amount
30	161	31-08-2016	307-15-000048	P2351 Non Jn-Nurm	Sri.N.Venkata Krishna Reddy	Excavating the accumulated earth in SWD H-200, from amco layout to nagawara kere yogesh nagar bridge in yelahanka zone (Ch-6100.00m to 8770.00)	19/29-08-2017	2921450.00
31	148	25-08-2016	307-15-000022	P2350 Non-Jn Nurm	R.Chetan	slushy condition in SWD BH-554 to pre cast according at kodichikkanahalli in bommanahalli zone Ch:0.00 to 1200.00	20/29-08-2017	1012000.00
32	162	31-08-2016		P-	Venkatesjwara Construction	Excavation accumulated earth in pertaining SWD C-100 from Ch: 4000m to 4500m in Challagatta Valley	05/18-09-2017	1374250.00
33	172	31-08-2017	307-15-000004	P2350	Vaishnavi Enterprises	Excavation of accumulated earth in Primary SWD C-100 from Ch: 2400,00 to 2900.00m in Challaghatta valley (Armstrong Road to St.Jhons road)	07/26-09-2017	924395.00
34	665	31-08-2016	059-15-000001	P2351	Sai Infra Creators	Excavation of accumulated earth in Secondary SWD in Satyanagar slum upto military area ward no 59 Challaghatta valley	04/17-10-2017	168300.00
35	202	29-09-2016	307-16-000003	P2349	Uday Shivakumar	Excavation of Accumulated earth in Vrishabhavathi Valley	05/17-10-2017	4207850.00
36	170	31-08-2016	307-15-000010	P2351	M/s.Shri Vaishnavi Enterprises	Excavation of accumulated earth at Hebbala valley H-300 from Ch: 2100.0m to 5000.0m (From HBR Layout to TELECOM layout)	06/17-10-2017	1930300.00
37	17	22-08-2017	307-17-000007		S Manjunatha	Maintenance of swd in padmanabhanagara constituency	02/03-11-2017	3719000.00
38	19	31-08-2017	307-17-000013		K N Mahesh	Maintenance of swd in K R Pura constituency	03/03-11-2017	4796300.00
39	34	09/06-2017	307-17-000008		M Nagesh	Maintenance of swd in Vijayanagara constituency	04/03-11-2017	4946950.00

S No	B.R. No	B.R.Date	Job No.	Head of Account	Name of Contractor	Name of Work	V.R. No & Date	Bill amoun
40	27	15-09-2017	307-17-000003		S K Basavaraju	Maintenance of swd primary and secondary drain in Gandhinagar and Malleshwarm Constituency	07/07-11-2017	5104800.00
41	164	31-08-2016	307-15-000006		M/s Sai Infra Creators	Excavation of accumulated earth in secondary swd c-105 in challaghatta valley (inside ISRO premisis in HAL 2nd stage Indiranagar)	08/08-11-2017	679200.00
42	165	31-08-2016	307-15-000005		M/s Sai Infra Creators	Excavation of accumulated earth insecondary swd c-105 in challaghatta valley (near domlur flyover joining pirmary drain c-100 to upstream 400m cambridge road to isro slum	09/07-11-2017	907490.00
43	166	31-08-2016	307-15-000001		M/s Sai Infra Creators	Excavation of accumulated earth insecondary swd c-105 in challaghatta valley c-200 from ch:1500.00 to 2100m (from S.K Garden near military campus to bore bank road)	10/07-11-2017	1203200.00
44	159	31-08-2016	307-15-000020		Prasannakumar S	Excavation of accumulated earth in sushy condition in swd to prevent follding from begur tank to hosur road upto oxford collee in bommanahalli zone (ch: 0.00m to 1270.00m) w.n.189 Hongasandra	11/07-11-2017	878650.00
45	163	31-08-2016	307-15-000007		M/s Sai Infra Creators	Excavation of accumulated earth in secondary swd n4 in challaghatta valley (joining primary drain c-100 to upstream 400m)	12/07-11-2017	822150.00
46	26	15-09-2017	307-17-000004		S K Basavaraju	Maintenance of SWD primary and secondary drain in mahalakshmi layout and Rajajnagar constituency	15/08-11-2017	6130500.00

S. No	B.R. No	B.R.Date	Job No.	Head of Account	Name of Contractor	Name of Work	V.R. No & Date	Bill amount
47	28	15-09-2017	307-17-000005		Chandrashekar N	Maintenance of swd Primary and secondary drain in Govindarajanagar and Chamarajpete constituency	16/08-11-2017	5853200.00
48	39	31-10-2017	307-17-000006		Manjunath	Maintainance to SWD in Basavanagudi Consultants	22/15-11-2017	1342900.00
49					Souharda Infrastrure Pvt ltd	Maintainance to SWD in Teloka consultants	24/16-11-2017	4234700.00
50	56	22-06-2017	307-16-000006		S.Prasanna Kumar	Removal of Accumulated earth in SWD in Bommanahalli Zone	28/21-11-2017	3410100.00
51	139	20-08-2017	307-16-000008	P-2349	M/s.Preethi Cad Consulting Engineers Pvt Ltd	Removal of Accumulated Earth in SWD in RR nagar Zone	08/19-12-2017	406099.00
52	171	31-08-2016	307-15-000008	P2350	M/s. Sri Vaishnavi Constructions	Excavation of accumulated earth in secondary SWD (from Kaggadasapura main road (from niligiri) to Kaggadasapura lake in Versova layout) in Challaghatta valley missing bit.	07/24-01-2018	265100.00
53	173	31-08-2016	307-15-000014	P2350	M/s. Shri Vaishnavi Enterprises	Excavation of accumulated earth in Primary SWD C-100 from Ch: 4500.00 to 5000.00m in Challaghatta valley (Sri Satyanarayana temple to Old Madras road) Ward no. 90	08/24-01-2018	1385450.00
54	174	31-08-2016	307-15-000015	P2350	M/s.Sri Vaishnavi Enterprises	Excavation of accumulated earth in Primary SWD C-100 from Ch: 5000.00 to 5500.00m in Challaghatta valley (Old Madras road to Sri Shastry Nagar) Ward no. 80 and 89	09/24-01-2018	1709500.00
55	177	31-08-2016	307-15-000003	P2350	M/s. Sri Vaishnavi Enterprises	Excavation of accumulated earth at Hebbala valley H-100 from Ch: 3375m to 3825m (Near Sunrise colony to railway track at V Nagenahalli).	10/24-01-2018	1265000.00

S No	B.R. No	B.R.Date	Job No.	Head of Account	Name of Contractor	Name of Work	V.R. No & Date	Bill amount
56	53	29-11-2017	307-17-000019	P3158	B H Krishna Reddy	Maintenance of SWD in Byatarayanapura constituency.	04/02-02-2018	6533400.00
57	85	02-01-2018	307-17-000008	P3158	BVH Consulting Engineer	Consultancy services project mangment and quality control for the work of Maintenance of SWD in Vijayanagara constituency.	07/02-02-2018	87500.00
58	79	30-12-2017	307-17-000002	P3158	BVH Consulting Engineers	Consultancy services project mangment and quality control for the work of Maintenance of Challaghatta valley	09/02-02-2020	390000.00
59	65	21-12-2017	307-17-000012	P3158	M/s Souhrdha Infratech Pvt Ltd	Maintenance of SWD in BTM Layout constituency.	13/02-02-2018	6949800.00
60	86	02-02-2018	307-17-000006	P3158	BVH Consulting Engineer	Consultancy services project mangment and quality control for the work of Maintenance of SWD in Basavanagudi constituency.	15/02-02-2018	43750.00
61	103	17-01-2018	167-17-000001	P3158	S Manjunath	Maintenance of SWD from Yediyur lake to 4th main road Tata silk form (in between Kariyappa road) in ward no 167	22/05-02-2018	1071500.00
62	101	17-01-2018	307-17-0000010		K.Damodhar CO	Maintainance at SWD in Chikkapete	26/	2546000.00
63	185	22-09-2016	307-16-000006	P1730	M/s.Preethi CAD Consulting Engineers Pvt Ltd	Consultancy services project mangment and quality control for the work of Excavation of Accumulated earth in SWD of Bommanahalli Zone	37/15-02-2018	387565.00
64	197	22-09-2016	307-16-000004	P2352	M.R.Constructions	Excavation of Accumulated earth for preventing flood in Storm Water Drain South Zone	41/	21037400.00
65	187	22-09-2016	307-16-000009	P1730	Sri. Udaya Shiva Kumar (Rajanna)	Removal of Accumulated in SWD in Mahadevapura Zone (KR.Puram and Mahadevapura Zone)	42/26-02-2018	3882700.00

S. No	B.R. No	B.R.Date	Job No.	Head of Account	Name of Contractor	Name of Work	V.R. No & Date	Bill amoun
66	200	29-09-2016	307-15-000030	P2352	K N Somashekar	Excavation of accumulated earth for preventing flood upstream and downstream side of SWD at Housur road flyover near the junction of Central Silk Board in K-22 Ward no-172 Madiwala	09/	728700.00
67	210	28-10-2016	307-15-000017	P2352	Sri.K.N.Somashekar	Excavation of Accumulated earth in Slushy Condition in SWD to prevent flooding at exit of point agara kere in K-200 Ch: 7200.00m to 7800.00 in Bommanahalli Zone 174 HSR Layout	10/20-03-2018	2244800.00
68	228	30-11-2016	307-16-000008	P2349	UDAYSHIVAKUMAR(RAJANNA)	Removal of Accumulated in SWD in R R Nagara Zone	11/20-03-2018	792950.00
69	122	07-02-2018	307-17-000008	P3158	Sri.M.Nagesh	Maintenance of SWD in Vijayanagara constituency.	16/27-03-2018	4891000.00
70	123	25-03-2018	307-17-000014	P3158	K.N.Mahesh	Maintenance of SWD in Mahadevapura constituency.	18/27-03-2018	4743300.00
						Grand Total		268927959.00

Chief Engineer
SWD

Statement Showing the Desilting Work year 2015-16

Sl. No	Zone	Name of work	Job code	HEAD OF ACCOUNT	Name of the Contractor	Bill Amount	B.R No & Date	VR No & Date	Remark
73		Desilting of SWD from Moge kere vai PP layout to Happy Valley main drain in w no-184	184-14-000022	P-0541	H.J.Gopi	149500.00	230/31-12-2014	31/13-07-2015	1st & Fir bill
		Total				149500.00			

Chief Engineer
SWD

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 358
ಸದಸ್ಯರ ಹೆಸರು : ಶ್ರೀ ಆರ್. ಅಶೋಕ
ಉತ್ತರಿಸುವ ದಿನಾಂಕ: : 11-07-2018
ಉತ್ತರಿಸುವವರು : ಮಾನ್ಯ ಉಪ ಮುಖ್ಯಮಂತ್ರಿಗಳು

ಕ್ರಸಂ	ಪ್ರಶ್ನೆ	ಉತ್ತರ
ಅ)	ಕಳೆದ 8-9 ತಿಂಗಳಿನಿಂದ ಬಿ.ಬಿ.ಎಂ.ಪಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಪೌರ ಕಾರ್ಮಿಕರಿಗೆ ವೇತನ ನೀಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ. ಪಾಲಿಕೆಯ ನೇರ ಸಂಭಾವನೆಗೆ ಒಳಪಡುವ ಪೌರಕಾರ್ಮಿಕರಿಗೆ ಏಪ್ರಿಲ್-2018ರವರೆಗೆ ವೇತನವನ್ನು ಪಾವತಿಸಲಾಗಿದೆ. ಉಳಿದಂತೆ ಬಾಕಿ ಇರುವ ಮೇ-2018 ಹಾಗೂ ಜೂನ್-2018ರ ವೇತನವನ್ನು ಪಾವತಿಸಲು ಕ್ರಮವಹಿಸಲಾಗುತ್ತಿದೆ.
ಆ)	ಹಾಗಿದ್ದಲ್ಲಿ, ಪೌರಕಾರ್ಮಿಕರಿಗೆ ವೇತನವನ್ನು ನೀಡದೆ ಇರಲು ಕಾರಣವೇನು;	ನೈಜ ಪೌರಕಾರ್ಮಿಕರ ಬಗ್ಗೆ ಗೊಂದಲ ಇದ್ದುದರಿಂದ ವೇತನವನ್ನು ಅಂತಿಮಗೊಳಿಸಲು ವಿಳಂಬವಾಗಿರುತ್ತದೆ.
ಇ)	ವೇತನವಿಲ್ಲದೆ ಪೌರಕಾರ್ಮಿಕರು ಕುಟುಂಬ ನಿರ್ವಹಣೆ, ಮನೆಬಾಡಿಗೆ ಪಾವತಿ ಮಾಡದೆ ತುಂಬಾ ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಯಾವಾಗ ವೇತನ ನೀಡಲಾಗುವುದು?	ಪಾಲಿಕೆಯ ವ್ಯಾಪ್ತಿಯಲ್ಲಿ ನೇರ ಸಂಭಾವನೆಗೆ ಒಳಪಡುವ ಅರ್ಹ ಪೌರಕಾರ್ಮಿಕರಿಗೆ ಏಪ್ರಿಲ್-2018ರವರೆಗೆ ವೇತನವನ್ನು ಪಾವತಿಸಲಾಗಿದೆ. ಉಳಿದಂತೆ ಬಾಕಿ ಇರುವ ಮೇ-2018 ಹಾಗೂ ಜೂನ್-2018ರ ಮಾಹೆಯ ವೇತನವನ್ನು ಪಾವತಿಸಲು ಕ್ರಮ ವಹಿಸಲಾಗುತ್ತಿದೆ.

ಸಂಖ್ಯೆ: ನಅಇ 322 ಎಂಎನ್‌ಜಿ 2018

(ಡಾ|| ಜಿ. ಪರಮೇಶ್ವರ)
ಉಪ ಮುಖ್ಯಮಂತ್ರಿ

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ - 460
ಉತ್ತರಿಸಬೇಕಾದ ದಿನಾಂಕ - 11.07.2018
ಸದಸ್ಯರ ಹೆಸರು - ಶ್ರೀ ಟಿ.ಡಿ. ರಾಜೇಗೌಡ(ಶೃಂಗೇರಿ)

ಕ್ರ ಸಂ.	ಪ್ರಶ್ನೆ	ಉತ್ತರ
ಅ)	ಕಳೆದ ಮೂರು ವರ್ಷಗಳಲ್ಲಿ ಶೃಂಗೇರಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಶೃಂಗೇರಿ-ಕೊಪ್ಪ-ಎನ್.ಆರ್.ಪುರ ತಾಲ್ಲೂಕುಗಳಲ್ಲಿ ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮದ ವತಿಯಿಂದ ಶ್ರೀ ಬಸವ ವಸತಿ ಯೋಜನೆಯಡಿಯಲ್ಲಿ ವಸತಿ ರಹಿತ ಫಲಾನುಭವಿಗಳಿಗೆ ಹಂಚಿಕೆ ಮಾಡಲಾಗಿರುವ ಮನೆಗಳ ಸಂಖ್ಯೆ ಎಷ್ಟು; (ವಿವರ ನೀಡುವುದು)	ಕಳೆದ ಮೂರು ವರ್ಷಗಳಲ್ಲಿ ಶೃಂಗೇರಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಶೃಂಗೇರಿ, ಕೊಪ್ಪ, ಎನ್.ಆರ್.ಪುರ ತಾಲ್ಲೂಕುಗಳಲ್ಲಿ ಬಸವ ವಸತಿ ಯೋಜನೆಯಡಿ ವಸತಿ ರಹಿತ ಫಲಾನುಭವಿಗಳಿಗೆ 2244 ಮನೆಗಳನ್ನು ಹಂಚಿಕೆ ಮಾಡಲಾಗಿದೆ. ವಿವರ ಇಂತಿದೆ. (ಕೋಷ್ಟಕ 1 ನೋಡಿ)

ತಾಲ್ಲೂಕು	2015-16	2016-17	2017-18	ಒಟ್ಟು
ಕೊಪ್ಪ	440	235	440	1115
ಶೃಂಗೇರಿ	181	94	141	416
ಎನ್ ಆರ್ ಪುರ	268	127	318	713
ಒಟ್ಟು	**889**	**456**	**899**	**2244**

ಕ್ರ ಸಂ.	ಪ್ರಶ್ನೆ	ಉತ್ತರ
ಆ)	ಅದರಲ್ಲಿ ಪೂರ್ಣಗೊಂಡಿರುವ ಮತ್ತು ಪೂರ್ಣಗೊಳ್ಳದೆ ಇರುವ ಮನೆಗಳ ಸಂಖ್ಯೆ ಎಷ್ಟು; (ವಿವರ ಒದಗಿಸುವುದು)	ಕಳೆದ ಮೂರು ವರ್ಷಗಳಲ್ಲಿ ಶೃಂಗೇರಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಶೃಂಗೇರಿ, ಕೊಪ್ಪ, ಎನ್.ಆರ್.ಪುರ ತಾಲ್ಲೂಕುಗಳಲ್ಲಿ ಹಂಚಿಕೆ ಮಾಡಲಾದ 2,244 ಮನೆಗಳಲ್ಲಿ 972 ಮನೆಗಳು ಪೂರ್ಣಗೊಂಡಿದ್ದು, 771 ವಿವಿಧ ಹಂತದಲ್ಲಿ ಪ್ರಗತಿಯಲ್ಲಿದ್ದು, 283 ಮನೆಗಳು ಇನ್ನೂ ಪ್ರಾರಂಭವಾಗಬೇಕಿರುತ್ತದೆ. ಉಳಿದಂತೆ 218 ಮನೆಗಳು ರದ್ದಾಗಿರುತ್ತವೆ. ವಿವರ ಇಂತಿದೆ. (ಕೋಷ್ಟಕ 2 ನೋಡಿ)

ತಾಲ್ಲೂಕು	ಪೂರ್ಣಗೊಂಡ ಮನೆಗಳು	ವಿವಿಧ ಹಂತದಲ್ಲಿ ಪ್ರಗತಿಯಲ್ಲಿರುವ ಮನೆಗಳು	ಪ್ರಾರಂಭವಾಗಬೇಕಿರುವ ಮನೆಗಳು	ಒಟ್ಟು
ಕೊಪ್ಪ	499	364	124	987
ಶೃಂಗೇರಿ	204	137	42	383
ಎನ್ ಆರ್ ಪುರ	269	270	117	656
ಒಟ್ಟು	**972**	**771**	**283**	**2026**

ಕ್ರ ಸಂ.	ಪ್ರಶ್ನೆ	ಉತ್ತರ
ಇ)	ಮಂಜೂರಾಗಿ ಪೂರ್ಣಗೊಳ್ಳದೆ ಇರುವ ಮನೆಗಳನ್ನು ಪೂರ್ಣಗೊಳಿಸಲು ಸರ್ಕಾರ ಯಾವ ಕ್ರಮ ತೆಗೆದುಕೊಂಡಿದೆ? (ವಿವರ ಒದಗಿಸುವುದು)	ವಿವಿಧ ವಸತಿ ಯೋಜನೆಗಳಡಿಯಲ್ಲಿ ಫಲಾನುಭವಿಗಳು ತಮ್ಮ ಮನೆಗಳನ್ನು ತಾವೇ ನಿರ್ಮಿಸಿಕೊಳ್ಳಬೇಕಿರುತ್ತದೆ. ಕೆಲವು ಫಲಾನುಭವಿಗಳಿಗೆ ಸಾಕಷ್ಟು ಕಾಲಾವಕಾಶ ನೀಡಿದರೂ ಹಾಗೂ ಸ್ಥಳೀಯ ಅಧಿಕಾರಿಗಳು ಪೂರ್ಣ ಸಹಕಾರ ಹಾಗೂ ಪ್ರೋತ್ಸಾಹ ನೀಡಿದರೂ ಸಹಾ ತಮ್ಮ ವೈಯಕ್ತಿಕ ಕಾರಣಗಳಿಂದ ಮನೆಗಳನ್ನು ನಿಗದಿತ ಸಮಯದಲ್ಲಿ ನಿರ್ಮಿಸಿಕೊಳ್ಳಲು ಆಸಕ್ತಿ ತೋರುತ್ತಿಲ್ಲ. ಆದಕಾರಣ ಮಂಜೂರಾದ ಮನೆಗಳನ್ನು ನಿಗದಿತ ಸಮಯದಲ್ಲಿ ಪೂರ್ಣಗೊಳಿಸಲು ಸಾಧ್ಯವಾಗುತ್ತಿಲ್ಲ. ಆದರೂ ಸಹ ಅಂತಹ ಫಲಾನುಭವಿಗಳ ಮನವೊಲಿಸಿ ಮನೆಗಳನ್ನು ಪೂರ್ಣಗೊಳಿಸಲು ಕ್ರಮವಹಿಸಲಾಗುತ್ತಿದೆ. ಆದಾಗ್ಯೂ, ಸಹಾ ಮನೆ ನಿರ್ಮಾಣದಲ್ಲಿ ಫಲಾನುಭವಿಗೆ ಇರುವ ವೈಯುಕ್ತಿಕ ಸಮಸ್ಯೆಗಳು, ಮಳೆಗಾಲ, ಆರ್ಥಿಕ ಸಮಸ್ಯೆಗಳು, ಬಡತನ ಮುಂತಾದ ಹಿನ್ನೆಲೆಯನ್ನು ಗಮನದಲ್ಲಿಟ್ಟುಕೊಂಡು ಫಲಾನುಭವಿಗೆ ತಿಳುವಳಿಕೆ ಪತ್ರಗಳನ್ನು ಜಾರಿ ಮಾಡುವ ಮೂಲಕ ಅವರ ಮನವೊಲಿಸಿ ಮನೆ ನಿರ್ಮಾಣಕ್ಕೆ ಒತ್ತು ನೀಡಲಾಗಿದೆ ಹಾಗೂ ಅನೇಕ ವಿಡಿಯೋ ಕಾನ್ಫರೆನ್ಸ್ ಮತ್ತು ಪ್ರಗತಿ ಪರಿಶೀಲನಾ ಸಭೆಗಳಲ್ಲಿ ಪ್ರಾರಂಭವಾಗದ ಮನೆಗಳನ್ನು ಕೂಡಲೇ ಪ್ರಾರಂಭಿಸಲು ಬೇಕಾದ ಕ್ರಮಗಳನ್ನು ತೆಗೆದುಕೊಳ್ಳಲು ತಿಳಿಸಲಾಗಿದೆ.

ಸಂಖ್ಯೆ: ವಇ 168 ಹೆಚ್‌ಎಂ 2018

(ಯು.ಟಿ.ಅಬ್ದುಲ್ ಖಾದರ್)
ವಸತಿ ಸಚಿವರು.

ಕರ್ನಾಟಕ ವಿಧಾನ ಸಭೆ

(1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 398

(2) ಸದಸ್ಯರ ಹೆಸರು : ಶ್ರೀ ಎಸ್.ಎ ರವೀಂದ್ರನಾಥ್

(3) ಉತ್ತರಿಸುವ ದಿನಾಂಕ : 11-07-2018

(4) ಉತ್ತರಿಸುವ ಸಚಿವರು : ನಗರಾಭಿವೃದ್ಧಿ ಮತ್ತು ವಸತಿ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ	ದಾವಣಗೆರೆ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಪ್ರತಿನಿತ್ಯ ಕಸ ಸ್ವಚ್ಛ ಮಾಡದೇ ಇರುವುದರಿಂದ ಕಸದ ರಾಶಿ ಬಿದ್ದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ದಾವಣಗೆರೆ ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ 41 ವಾರ್ಡ್‌ಗಳಿದ್ದು, ಈ ಹಿಂದೆ 19 ಆಟೋ ಟಿಪ್ಪರ್‌ಗಳ ಸಹಾಯದಿಂದ ಖಾಸಗಿ ಏಜನ್ಸಿಯವರ ಮೂಲಕ ಮನೆಮನೆ ಕಸ ಸಂಗ್ರಹ, ಮಾಡಲಾಗುತ್ತಿತ್ತು. ಸದರಿ ವ್ಯವಸ್ಥೆಯು ಪರಿಣಾಮ ಕಾರಿಯಾಗಿ ಇಲ್ಲದಿರುವುದನ್ನು ಮನಗಂಡು ಖಾಸಗಿ ಏಜನ್ಸಿ ರದ್ದುಗೊಳಿಸಲಾಗಿದೆ ಹಾಗೂ ಹೆಚ್ಚುವರಿಯಾಗಿ 32 ಹೊಸ ಟಿಪ್ಪರ್‌ಗಳನ್ನು ಪಾಲಿಕೆಯಿಂದ ಖರೀದಿಸಲಾಗಿದೆ. ಪ್ರಸ್ತುತ ಮನೆ ಮನೆಯಿಂದ ಕಸ ಸಂಗ್ರಹವನ್ನು ಎಲ್ಲಾ 41 ವಾರ್ಡ್‌ಗಳಲ್ಲಿ ಜುಲೈ 01 ರಿಂದ ಪಾಲಿಕೆ ವತಿಯಿಂದಲೇ ನಿರ್ವಹಿಸಲು ಕ್ರಮ ಕೈಗೊಳ್ಳಲಾಗಿದ್ದು, ಇದಕ್ಕಾಗಿ ಪ್ರಾಥಮಿಕ ಸಂಗ್ರಹಕ್ಕಾಗಿ 51 ಟಿಪ್ಪರ್‌ಗಳು ದ್ವಿತೀಯ ಹಂತದಲ್ಲಿ 07 ಕಾಂಪ್ಯಾಕ್ಟರ್‌ಗಳನ್ನು ಬಳಸಿ ಕೊಳ್ಳಲಾಗುತ್ತಿದೆ ಅಲ್ಲದೇ ಅಗತ್ಯವಾದ ಕೆಲವು ಸ್ಥಳ ಗಳಲ್ಲಿ 18 ಟ್ರ್ಯಾಕ್ಟರ್‌ಗಳನ್ನು ಸಹ ಉಪಯೋಗಿಸಲಾಗುತ್ತಿದೆ. ಸದರಿ ಸ್ವಚ್ಛತಾ ಕಾರ್ಯದಲ್ಲಿ ಒಟ್ಟು 720 ಸಿಬ್ಬಂದಿಗಳು ತೊಡಗಿದ್ದು, ಪ್ರತಿನಿತ್ಯ ಜನಹಿತದಲ್ಲಿ (public redressal system) ಬರುವ ಸುಮಾರು 10 ರಿಂದ 15ರವರೆಗಿನ ಸಾರ್ವಜನಿಕ ದೂರುಗಳನ್ನು ಆದ್ಯತೆಯ ಮೇರೆಗೆ ಇತ್ಯರ್ಥ ಪಡಿಸಲಾಗಿದೆ ಹಾಗೂ ಮಹಾನಗರ ಪಾಲಿಕೆ ವತಿಯಿಂದ ಪ್ರತಿನಿತ್ಯ ಸಂಗ್ರಹವಾಗುವ ಕಸವನ್ನು ಸಂಪೂರ್ಣವಾಗಿ ಸ್ವಚ್ಛಗೊಳಿಸಲು ಎಲ್ಲಾ ಅಗತ್ಯ ಕ್ರಮ ಕೈಗೊಳ್ಳಲಾಗಿದೆ. ಇದಲ್ಲದೆ ಪ್ರಸ್ತುತ ಸ್ವಚ್ಛ ಭಾರತ ಮಿಷನ್ ಅಡಿಯಲ್ಲಿ ಸಮಗ್ರ ಘನ ತ್ಯಾಜ್ಯ ವಸ್ತು ನಿರ್ವಹಣೆ ವಿಸ್ತೃತ ಯೋಜನಾ ವರದಿಯನ್ನು ಸಿದ್ಧಪಡಿಸಲಾಗಿದ್ದು ಸದರಿ ಯೋಜನಾ ವರದಿಯಲ್ಲಿ 100 ಪ್ರತಿ ಶತ ಪ್ರಾಥಮಿಕ ತ್ಯಾಜ್ಯ ಸಂಗ್ರಹಣೆ, ಮೂಲದಲ್ಲೇ ತ್ಯಾಜ್ಯ ಬೇರ್ಪಡಿಕೆ, ದ್ವಿತೀಯ ತ್ಯಾಜ್ಯ ಸಂಗ್ರಹಣೆ ಹಾಗೂ- ಸಾಗಣಿಕೆ ಹಾಗೂ ವೈಜ್ಞಾನಿಕ ತ್ಯಾಜ್ಯ ಸಂಗ್ರಹಣೆ ಹಾಗೂ ವಿಲೇವಾರಿ ಗುರಿಯನ್ನು ತಲುಪುವ ಸಲುವಾಗಿ ಅಗತ್ಯವಿರುವ ಹೆಚ್ಚುವರಿ ವಾಹನ, ಯಂತ್ರೋಪರಣ ಅಂದಾಜಿಸಲಾಗಿದೆ
ಆ	ಹಾಗಿದ್ದಲ್ಲಿ, ಪ್ರತಿನಿತ್ಯ ಪೂರ್ಣ ಕಸ ವಿಲೇವಾರಿ ಮಾಡಲು ಸರ್ಕಾರ ಯಾವ ಕ್ರಮ ವಹಿಸಿದೆ;	

		ಹಾಗೂ ಆಧುನಿಕ ಪರಿಕಲ್ಪನೆಗಳಾದ Eco-Bank, commission & operation of smart SWM digital solutions for Davanagere City, implementation of IEC tools, installation of 20 TPD capacity ploy crack technology ಮುಂತಾದವುಗಳನ್ನು ಅಳವಡಿಸಲು ಕ್ರಮ ಕೈಗೊಳ್ಳಲಾಗಿರುತ್ತದೆ.
ಇ	ಈ ಪಾಲಿಕೆ ವ್ಯಾಪ್ತಿಯಲ್ಲಿ ಪ್ರತಿನಿತ್ಯ ಕಸ ಸ್ವಚ್ಛಗೊಳಿಸಲು ಎಷ್ಟು ಸಿಬ್ಬಂದಿಗಳನ್ನು ನೇಮಿಸಲಾಗಿದೆ; ಪ್ರತಿ ದಿನ ಎಷ್ಟು ಸಿಬ್ಬಂದಿಗಳು ಎಷ್ಟು ಗಂಟೆಯಿಂದ ಎಷ್ಟು ಗಂಟೆಯವರೆಗೆ ಕಸ ಸ್ವಚ್ಛಗೊಳಿಸುತ್ತಾರೆ; (ವಿವರ ನೀಡುವುದು)	ಪಾಲಿಕೆ ವ್ಯಾಪ್ತಿಯಲ್ಲಿ ಪ್ರತಿನಿತ್ಯ ಕಸ ಸ್ವಚ್ಛಗೊಳಿಸಲು ಒಟ್ಟು 720 ಸಿಬ್ಬಂದಿಗಳನ್ನು ನೇಮಿಸಲಾಗಿದೆ. ಸದರಿ ಸಿಬ್ಬಂದಿಗಳು ಬೆಳಿಗ್ಗೆ 06-00 ಗಂಟೆಯಿಂದ ಮಧ್ಯಾಹ್ನ 02-00 ಗಂಟೆಯವರೆಗೆ ಸ್ವಚ್ಛತಾ ಕೆಲಸ ನಿರ್ವಹಿಸುತ್ತಾರೆ (ಬುಧವಾರ ಮತ್ತು ಭಾನುವಾರ ಬೆಳಿಗ್ಗೆ 6-00 ಗಂಟೆಯಿಂದ 10-00 ಗಂಟೆವರೆಗೆ ಕಸ ಸ್ವಚ್ಛಗೊಳಿಸುತ್ತಾರೆ) ವಿವರವನ್ನು ಅನುಬಂಧದಲ್ಲಿ ನಮೂದಿಸಲಾಗಿದೆ.
ಈ	ಪ್ರತಿದಿನ ಕಸ ಸ್ವಚ್ಛಗೊಳಿಸುತ್ತಿರುವ ಸಿಬ್ಬಂದಿಗಳೆಷ್ಟು; (ಕೆಲಸದ ಅವಧಿಯೊಂದಿಗೆ ವಿವರ ನೀಡುವುದು)	ಪ್ರತಿ ದಿನ 720 ಸ್ವಚ್ಛತಾ ಕೆಲಸಗಾರರು ಮಹಾನಗರಪಾಲಿಕೆಯಲ್ಲಿ ಕೆಲಸ ನಿರ್ವಹಿಸುತ್ತಿದ್ದು, ವಿವರಗಳನ್ನು ಅನುಬಂಧ-1 ರಂತೆ ಲಗತ್ತಿಸಲಾಗಿದೆ.
ಉ	ಸ್ವಚ್ಛತಾ ಸಿಬ್ಬಂದಿಗಳ ಕೊರತೆಯಿದ್ದಲ್ಲಿ ಯಾವಾಗ ನೇಮಕ ಮಾಡಿಕೊಳ್ಳಲಾಗುವುದು?	ಸ್ವಚ್ಛತಾ ಸಿಬ್ಬಂದಿಗಳ ನೇಮಕಾತಿ ಪ್ರಕ್ರಿಯೆಯು ಪ್ರಗತಿಯಲ್ಲಿರುತ್ತದೆ. ಈ ನಿಟ್ಟಿನಲ್ಲಿ ಈಗಾಗಲೇ ದಿ:06-02-2018 ರಂದು ದಾವಣಗೆರೆ ಜಿಲ್ಲಾಧಿಕಾರಿಗಳ ಕಛೇರಿಯಿಂದ ಅಧಿಸೂಚನೆಯನ್ನು ಹೊರಡಿಸಿರುತ್ತದೆ. (ಅನುಬಂಧ-2)

ನಅಇ 25 ಎಸಿಡಿ 2018

(ಯು.ಟಿ. ಖಾದರ್)
ನಗರಾಭಿವೃದ್ಧಿ ಮತ್ತು ವಸತಿ ಸಚಿವರು

ಅನುಬಂಧ-1

ದಾವಣಗೆರೆ ಮಹಾನಗರಪಾಲಿಕೆಯಲ್ಲಿ ವ್ಯಾಪ್ತಿಯಲ್ಲಿ ಸ್ವಚ್ಛತಾ ವಿಭಾಗದಲ್ಲಿ ತೊಡಗಿರುವ ಸಿಬ್ಬಂದಿಗಳ ಮಾಹಿತಿ.

ಕ್ರ.ಸಂ	ಹುದ್ದೆಯ ಹೆಸರು	ಖಾಯಂ ನೌಕರರು	ಹೊರಗುತ್ತಿಗೆ ನೌಕರರು	ಒಟ್ಟು ನೌಕರರು	ಪ್ರತಿ ದಿನ ಕೆಲಸ ನಿರ್ವಹಿಸುವ ಅವಧಿ
1	ಪೌರಕಾರ್ಮಿಕರು	264	270	534	ಪ್ರತಿ ದಿನ ಬೆಳಗ್ಗೆ 06-00 ಗಂಟೆ ಯಿಂದ ಮಧ್ಯಾಹ್ನ 02-00 ಗಂಟೆಯ ವರೆಗೆ ಸ್ವಚ್ಛತಾ ಕಾರ್ಯ ನಿರ್ವಹಿಸುತ್ತಾರೆ *
2	ಲೋಡರ್ಸ್	32	0	32	
3	ಯುಜಿಡಿ ಸಹಾಯಕರು	43	49	92	
4	ಕ್ಲೀನರ್ಸ್	07	11	18	
5	ಡ್ರೈವರ್ಸ್	06	38	44	
	ಒಟ್ಟು ಸಂಖ್ಯೆ	352	368	720	

* ಸ್ವಚ್ಛತಾ ವಿಭಾಗದ ಸಿಬ್ಬಂದಿಗಳು ಬುಧವಾರ ಮತ್ತು ಭಾನುವಾರ ಬೆಳಗ್ಗೆ 06-00 ಗಂಟೆಯಿಂದ 10-00 ಗಂಟೆಯವರೆಗೆ ಸ್ವಚ್ಛತಾ ಕಾರ್ಯ ನಿರ್ವಹಿಸುತ್ತಾರೆ.

ಆಯುಕ್ತರು,
ಮಹಾನಗರಪಾಲಿಕೆ, ದಾವಣಗೆರೆ.

6ಎಬಿಂಧ -2 (4)

ಕರ್ನಾಟಕ ಸರ್ಕಾರ

ಜಿಲ್ಲಾಧಿಕಾರಿಗಳ ಕಾರ್ಯಾಲಯ, ದಾವಣಗೆರೆ ಜಿಲ್ಲೆ, ದಾವಣಗೆರೆ.

ನಂ.ಜಿನ.ಕೋ.ದಾ(2)/ಸಿಆರ್/1363/2017-18 ದಿನಾಂಕ :06-02-2018

ಅಧಿಸೂಚನೆ

1. ದಾವಣಗೆರೆ ಜಿಲ್ಲೆಯ ಮಹಾನಗರ ಪಾಲಿಕೆ/ ನಗರಸಭೆ/ ಪುರಸಭೆ/ ಪಟ್ಟಣ ಪಂಚಾಯಿತಿಗಳಲ್ಲಿ ಖಾಲಿ ಇರುವ ಈ ಕೆಳಗಿನಂತೆ ಪೌರ ಕಾರ್ಮಿಕರ ಹುದ್ದೆಗಳನ್ನು ವಿಶೇಷ ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಅರ್ಹ ಅಭ್ಯರ್ಥಿಗಳಿಂದ ನಿಗಧಿತ ನಮೂನೆಯಲ್ಲಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಜಿ ನಮೂನೆಗಳನ್ನು ದಾವಣಗೆರೆ ಜಿಲ್ಲಾಧಿಕಾರಿಗಳ ಕಛೇರಿಯ ಜಿಲ್ಲಾ ನಗರಾಭಿವೃದ್ಧಿ ಕೋಶ ಅಥವಾ ದಾವಣಗೆರೆ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಅರ್ಜಿಗಳನ್ನು ದಿನಾಂಕ: 22-02-2018 ರೊಳಗಾಗಿ ದಾಖಲಾತಿಗಳೊಂದಿಗೆ ಸಲ್ಲಿಸತಕ್ಕದ್ದು.

ಕ್ರ.ಸಂ.	ಹುದ್ದೆಯ ಹೆಸರು	ಒಟ್ಟು ಹುದ್ದೆಗಳು	ಕನಿಷ್ಠ ವಿದ್ಯಾರ್ಹತೆ/ಅರ್ಹತೆ	ವೇತನ ಶ್ರೇಣಿ
1	ಪೌರ ಕಾರ್ಮಿಕರು	186	1. ವಿದ್ಯಾರ್ಹತೆ ಅನ್ವಯಿಸುವುದಿಲ್ಲ. 2. ಕನ್ನಡ ಮಾತನಾಡಲು ಗೊತ್ತಿರಬೇಕು. 3. ಆಯಾ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಪೌರ ಕಾರ್ಮಿಕ ಹುದ್ದೆಯಲ್ಲಿ ಕೆಲಸ ಮಾಡುತ್ತಿರುವ ಕ್ಷೇಮಾಭಿವೃದ್ಧಿ/ ದಿನಗೂಲಿ/ಗುತ್ತಿಗೆ/ಹೊರ ಗುತ್ತಿಗೆ/ ಸಮಾನ ಕೆಲಸಕ್ಕೆ ಸಮಾನ ವೇತನ ಕಾರ್ಯದಡಿ ಹಾಲಿ ಕಾರ್ಯ ನಿರ್ವಹಿಸುತ್ತಿರುವ ನೌಕರರು ಮಾತ್ರ ಅರ್ಜಿ ಸಲ್ಲಿಸಲು ಅರ್ಹರಿರುತ್ತಾರೆ.	9600-14550

2. ಹುದ್ದೆಗಳ ವರ್ಗೀಕರಣ:

ದಾವಣಗೆರೆ ಜಿಲ್ಲೆಯ ದಾವಣಗೆರೆ ಮಹಾನಗರ ಪಾಲಿಕೆಯಲ್ಲಿ ಖಾಲಿ ಇರುವ ಪೌರಕಾರ್ಮಿಕರು- ಸ್ಥಳೀಯ ವೃಂದದ ಒಟ್ಟು ಹುದ್ದೆಗಳ ಸಂಖ್ಯೆ:

ಮೀಸಲಾತಿ	ಸಾಮಾನ್ಯ	ಮಹಿಳೆ	ಗ್ರಾಮೀಣ	ಅಂ.ವಿ	ಮಾ.ಸೈ	ಕ.ಮಾ.ಅ	ಯೋ.ಅ	ಒಟ್ಟು
ಪ.ಜಾ	05	01	01	01	01	01	01	11
ಪ.ಪಂ	01	01	-	-	-	-	-	02
ಪ್ರ-1	02	01	-	-	-	-	-	03
ಪ್ರ-2 (ಎ)	04	01	01	01	01	01	01	10
ಪ್ರ-2 (ಬಿ)	02	01	-	-	-	-	-	03
ಪ್ರ-3 (ಎ)	02	01	-	-	-	-	-	03
ಪ್ರ-3 (ಬಿ)	02	01	01	01	-	-	-	05
ಸಾ.ಅ	18	06	03	02	03	03	02	37
ಒಟ್ಟು	**36**	**13**	**06**	**05**	**05**	**05**	**04**	**74**

ದಾವಣಗೆರೆ ಜಿಲ್ಲೆಯ ಹರಿಹರ ನಗರಸಭೆಯಲ್ಲಿ ಖಾಲಿ ಇರುವ ಪೌರಕಾರ್ಮಿಕರು- ಸ್ಥಳೀಯ ವೃಂದದ ಒಟ್ಟು ಹುದ್ದೆಗಳ ಸಂಖ್ಯೆ:

ಮೀಸಲಾತಿ	ಸಾಮಾನ್ಯ	ಮಹಿಳೆ	ಗ್ರಾಮೀಣ	ಅಂ.ವಿ	ಮಾ.ಸೈ	ಕ.ಮಾ.ಅ	ಯೋ.ಅ	ಒಟ್ಟು
ಪ.ಜಾ	01	01	-	-	-	-	-	02
ಪ.ಪಂ	01	-	-	-	-	-	-	01
ಪ್ರ-1	-	-	-	-	-	-	-	-
ಪ್ರ-2 (ಎ)	-	-	-	-	-	-	-	-
ಪ್ರ-2 (ಬಿ)	-	-	-	-	-	-	-	-
ಪ್ರ-3 (ಎ)	-	-	-	-	-	-	-	-
ಪ್ರ-3 (ಬಿ)	-	-	-	-	-	-	-	-
ಸಾ.ಅ	-	-	-	-	-	-	-	-
ಒಟ್ಟು	02	01	-	-	-	-	-	03

ಸಹಾಯಕ ನಿರ್ದೇಶಕರು ... ಸಂ.... ದಿನಾಂಕ.... ದಾವಣಗೆರೆ 7/2/18

[illegible] ಪುರಸಭೆಯಲ್ಲಿ ಖಾಲಿ ಇರುವ ಪೌರಕಾರ್ಮಿಕರು– ಸ್ಥಳೀಯ ವೃಂದದ ಒಟ್ಟು ಹುದ್ದೆಗಳ ಸಂಖ್ಯೆ

ಮೀಸಲಾತಿ	ಸಾಮಾನ್ಯ	ಮಹಿಳೆ	ಗ್ರಾಮೀಣ	ಅಂ.ವಿ	ಮಾ.ಸೈ	ಕ.ಮಾ.ಅ	ಯೋ.ಅ	ಒಟ್ಟು
ಪ.ಜಾ	03	01	01	01	01	01	01	09
ಪ.ಪಂ	01	–	–	–	–	–	–	01
ಪ್ರ-1	01	–	–	–	–	–	–	01
ಪ್ರ-2 (ಎ)	01	01	01	01	01	–	–	05
ಪ್ರ-2 (ಬಿ)	01	–	–	–	–	–	–	01
ಪ್ರ-3 (ಎ)	01	–	–	–	–	–	–	01
ಪ್ರ-3 (ಬಿ)	01	01	–	–	–	–	–	02
ಸಾ.ಅ	07	04	02	01	01	01	01	17
ಒಟ್ಟು	16	07	04	03	03	02	02	37

ದಾವಣಗೆರೆ ಜಿಲ್ಲೆಯ ಚನ್ನಗಿರಿ ಪುರಸಭೆಯಲ್ಲಿ ಖಾಲಿ ಇರುವ ಪೌರಕಾರ್ಮಿಕರು– ಸ್ಥಳೀಯ ವೃಂದದ ಒಟ್ಟು ಹುದ್ದೆಗಳ ಸಂಖ್ಯೆ

ಮೀಸಲಾತಿ	ಸಾಮಾನ್ಯ	ಮಹಿಳೆ	ಗ್ರಾಮೀಣ	ಅಂ.ವಿ	ಮಾ.ಸೈ	ಕ.ಮಾ.ಅ	ಯೋ.ಅ	ಒಟ್ಟು
ಪ.ಜಾ	02	01	–	–	–	–	–	03
ಪ.ಪಂ	01	–	–	–	–	–	–	01
ಪ್ರ-1	01	–	–	–	–	–	–	01
ಪ್ರ-2 (ಎ)	01	–	–	–	–	–	–	01
ಪ್ರ-2 (ಬಿ)	01	–	–	–	–	–	–	01
ಪ್ರ-3 (ಎ)	01	–	–	–	–	–	–	01
ಪ್ರ-3 (ಬಿ)	01	01	–	–	–	–	–	02
ಸಾ.ಅ	05	02	01	01	01	–	–	10
ಒಟ್ಟು	13	04	01	01	01	–	–	20

ದಾವಣಗೆರೆ ಜಿಲ್ಲೆಯ ಮಲೇಬೆನ್ನೂರು ಪುರಸಭೆಯಲ್ಲಿ ಖಾಲಿ ಇರುವ ಪೌರಕಾರ್ಮಿಕರು– ಸ್ಥಳೀಯ ವೃಂದದ ಒಟ್ಟು ಹುದ್ದೆಗಳ ಸಂಖ್ಯೆ

ಮೀಸಲಾತಿ	ಸಾಮಾನ್ಯ	ಮಹಿಳೆ	ಗ್ರಾಮೀಣ	ಅಂ.ವಿ	ಮಾ.ಸೈ	ಕ.ಮಾ.ಅ	ಯೋ.ಅ	ಒಟ್ಟು
ಪ.ಜಾ	02	01	–	–	–	–	–	03
ಪ.ಪಂ	01	–	–	–	–	–	–	01
ಪ್ರ-1	01	–	–	–	–	–	–	01
ಪ್ರ-2 (ಎ)	01	–	–	–	–	–	–	01
ಪ್ರ-2 (ಬಿ)	01	–	–	–	–	–	–	01
ಪ್ರ-3 (ಎ)	01	–	–	–	–	–	–	01
ಪ್ರ-3 (ಬಿ)	01	–	–	–	–	–	–	01
ಸಾ.ಅ	04	01	01	01	–	01	–	08
ಒಟ್ಟು	12	02	01	01	–	01	–	17

ದಾವಣಗೆರೆ ಜಿಲ್ಲೆಯ ಹೊನ್ನಾಳಿ ಪಟ್ಟಣ ಪಂಚಾಯಿತಿಯಲ್ಲಿ ಖಾಲಿ ಇರುವ ಪೌರಕಾರ್ಮಿಕರು– ಸ್ಥಳೀಯ ವೃಂದದ ಒಟ್ಟು ಹುದ್ದೆಗಳ ಸಂಖ್ಯೆ

ಮೀಸಲಾತಿ	ಸಾಮಾನ್ಯ	ಮಹಿಳೆ	ಗ್ರಾಮೀಣ	ಅಂ.ವಿ	ಮಾ.ಸೈ	ಕ.ಮಾ.ಅ	ಯೋ.ಅ	ಒಟ್ಟು
ಪ.ಜಾ	02	01	–	–	–	–	–	03
ಪ.ಪಂ	01	–	–	–	–	–	–	01
ಪ್ರ-1	01	–	–	–	–	–	–	01
ಪ್ರ-2 (ಎ)	01	–	–	–	–	–	–	01
ಪ್ರ-2 (ಬಿ)	01	–	–	–	–	–	–	01
ಪ್ರ-3 (ಎ)	01	–	–	–	–	–	–	01
ಪ್ರ-3 (ಬಿ)	01	01	–	–	–	–	–	02
ಸಾ.ಅ	05	02	01	01	01	–	–	10
ಒಟ್ಟು	13	04	01	01	01	–	–	20

ದಾವಣಗೆರೆ ಜಿಲ್ಲೆಯ ಜಗಳೂರು ಪಟ್ಟಣ ಪಂಚಾಯಿತಿಯಲ್ಲಿ ಖಾಲಿ ಇರುವ ಪೌರಕಾರ್ಮಿಕರು– ಸ್ಥಳೀಯ ವೃಂದದ ಒಟ್ಟು ಹುದ್ದೆಗಳ ಸಂಖ್ಯೆ

ಮೀಸಲಾತಿ	ಸಾಮಾನ್ಯ	ಮಹಿಳೆ	ಗ್ರಾಮೀಣ	ಅಂ.ವಿ	ಮಾ.ಸೈ	ಕ.ಮಾ.ಅ	ಯೋ.ಅ	ಒಟ್ಟು
ಪ.ಜಾ	02	–	–	–	–	–	–	02
ಪ.ಪಂ	01	–	–	–	–	–	–	01
ಪ್ರ-1	01	–	–	–	–	–	–	01
ಪ್ರ-2 (ಎ)	01	–	–	–	–	–	–	01
ಪ್ರ-2 (ಬಿ)	01	–	–	–	–	–	–	01
ಪ್ರ-3 (ಎ)	01	–	–	–	–	–	–	01
ಪ್ರ-3 (ಬಿ)	01	–	–	–	–	–	–	01
ಸಾ.ಅ	04	01	01	01	–	–	–	07
ಒಟ್ಟು	12	01	01	01	–	–	–	15

1. ಹೆಚ್ಚಿನ ಮಾಹಿತಿ ಹಾಗೂ ವಿವರವಾದ ಅಧಿಸೂಚನೆಯನ್ನು ಆಯಾ ಮಹಾನಗರ ಪಾಲಿಕೆ/ನಗರಸಭೆ/ಪುರಸಭೆ/ಪಟ್ಟಣ ಪಂಚಾಯಿತಿಗಳಲ್ಲಿ ಮಾಹಿತಿಯನ್ನು ಪಡೆಯಬಹುದು.
2. ಅರ್ಜಿ ನಮೂನೆ ಪಡೆಯುವ ವಿಳಾಸ ಆಯಾ ಮಹಾನಗರ ಪಾಲಿಕೆ/ನಗರಸಭೆ/ಪುರಸಭೆ/ಪಟ್ಟಣ ಪಂಚಾಯಿತಿ.
3. ಭರ್ತಿ ಮಾಡಿರುವ ಅರ್ಜಿಗಳನ್ನು ಸಲ್ಲಿಸುವ ದಿನಾಂಕ ಮತ್ತು ಸ್ಥಳ: ಜಿಲ್ಲಾ ನಗರಾಭಿವೃದ್ಧಿ ಕೋಶ, ಜಿಲ್ಲಾಧಿಕಾರಿಗಳ ಕಛೇರಿ, ದಾವಣಗೆರೆ ದಿನಾಂಕ:22-02-2018.
4. ಈ ನೇಮಕಾತಿಯು ಸರ್ಕಾರದ/ಪೌರಾಡಳಿತ ನಿರ್ದೇಶನಾಲಯದಿಂದ ಕಾಲ ಕಾಲಕ್ಕೆ ಹೊರಡಿಸುವ ಆದೇಶ/ಸುತ್ತೋಲೆಯ ಷರತ್ತುಗೊಳಪಟ್ಟಿದೆ.

ಅಧ್ಯಕ್ಷರು,
ಆಯ್ಕೆ ಮತ್ತು ನೇರ ನೇಮಕಾತಿ ಪ್ರಾಧಿಕಾರ
ಹಾಗೂ ಜಿಲ್ಲಾಧಿಕಾರಿಗಳು, ದಾವಣಗೆರೆ ಜಿಲ್ಲೆ.

ಯಥಾ ಪ್ರತಿಗಳನ್ನು:

1. ಹಿರಿಯ ಸಹಾಯಕ ನಿರ್ದೇಶಕರು, ವಾರ್ತಾ ಮತ್ತು ಪ್ರಚಾರ ಇಲಾಖೆ, ದಾವಣಗೆರೆ ಇವರಿಗೆ ರವಾನಿಸುತ್ತಾ, ಸದರಿ ಪ್ರಕಟಣೆಯನ್ನು ಸ್ಥಳೀಯ ಒಂದು ಕನ್ನಡ ಪತ್ರಿಕೆ ಮತ್ತು ರಾಜ್ಯ ಮಟ್ಟದ ಎರಡು (2) ದಿನ ಪತ್ರಿಕೆಯಲ್ಲಿ ಪ್ರಚುರ ಪಡಿಸಲು ಕೋರಿದೆ.
2. ಆಯುಕ್ತರು, ಮಹಾನಗರ ಪಾಲಿಕೆ, ದಾವಣಗೆರೆ ರವರಿಗೆ ಅಗತ್ಯ ಕ್ರಮಕ್ಕಾಗಿ.
3. ಪೌರಾಯುಕ್ತರು, ನಗರಸಭೆ, ಹರಿಹರ ರವರಿಗೆ ಅಗತ್ಯ ಕ್ರಮಕ್ಕಾಗಿ.
4. ಮುಖ್ಯಾಧಿಕಾರಿ, ಪುರಸಭೆ, ಹರಪನಹಳ್ಳಿ/ಚನ್ನಗಿರಿ/ಮಲೇಬೆನ್ನೂರು ಅಗತ್ಯ ಕ್ರಮಕ್ಕಾಗಿ.
5. ಮುಖ್ಯಾಧಿಕಾರಿ, ಪಟ್ಟಣ ಪಂಚಾಯಿತಿ, ಹೊನ್ನಾಳಿ/ಜಗಳೂರು ಅಗತ್ಯ ಕ್ರಮಕ್ಕಾಗಿ.

ಅಧ್ಯಕ್ಷರು,
ಆಯ್ಕೆ ಮತ್ತು ನೇರ ನೇಮಕಾತಿ ಪ್ರಾಧಿಕಾರ
ಹಾಗೂ ಜಿಲ್ಲಾಧಿಕಾರಿಗಳು, ದಾವಣಗೆರೆ ಜಿಲ್ಲೆ.

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 356
ಉತ್ತರಿಸಬೇಕಾದ ದಿನಾಂಕ : 11.7.2018
ಸದಸ್ಯರ ಹೆಸರು : ಶ್ರೀ ಆಚಾರ್ ಹಾಲಪ್ಪ ಬಸಪ್ಪ

ಕ್ರ ಸಂ.	ಪ್ರಶ್ನೆ	ಉತ್ತರ
1	ಕೊಪ್ಪಳ ಜಿಲ್ಲೆ ಯಲಬುರ್ಗಾ ತಾಲ್ಲೂಕಿನಲ್ಲಿ ನಿವೇಶನರಹಿತರು ಹಾಗೂ ವಸತಿರಹಿತರು ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು.
2	ಹಾಗಿದ್ದಲ್ಲಿ, ನಿವೇಶನ ಹಾಗೂ ವಸತಿರಹಿತರು ಇರುವವರೆಷ್ಟು ; (ವಿವರ ಒದಗಿಸುವುದು)	2011ರ ಸಾಮಾಜಿಕ ಆರ್ಥಿಕ ಜಾತಿ ಜನಗಣತಿ ಪ್ರಕಾರ ವಸತಿ ರಹಿತರು/ ನಿವೇಶನರಹಿತರು/ ಕಚ್ಚಾಮನೆ/ಬಾಡಿಗೆ ಮನೆಯಲ್ಲಿ ವಾಸಿಸುತ್ತಿರುವವರನ್ನು ಒಳಗೊಂಡಂತೆ ಕೊಪ್ಪಳ ಜಿಲ್ಲೆಯ ಗ್ರಾಮೀಣ ಪ್ರದೇಶದಲ್ಲಿ ಹಾಗೂ ನಗರ ಪ್ರದೇಶದಲ್ಲಿ ಒಟ್ಟಾರೆಯಾಗಿ 158648 ವಸತಿ ಮತ್ತು ನಿವೇಶನ ರಹಿತರು ಇರುವುದು ಕಂಡುಬಂದಿರುತ್ತಾರೆ(ವಿವರವನ್ನು ಅನುಬಂಧ-1 ರಲ್ಲಿ ಒದಗಿಸಲಾಗಿದೆ.)
3	ನಿವೇಶನ ರಹಿತರಿಗೆ ಭೂಮಿ ಒದಗಿಸುವ ಹಾಗೂ ವಸತಿ ರಹಿತರಿಗೆ ಮನೆ ಒದಗಿಸುವ ಉದ್ದೇಶ ಸರ್ಕಾರಕ್ಕಿದೆಯೇ;	ಹೌದು.
4	ಹಾಗಿದ್ದಲ್ಲಿ, ಈ ಬಗ್ಗೆ ಯಾವ ಕ್ರಮ ಕೈಗೊಳ್ಳಲಾಗಿದೆ ? (ಯಾವಾಗ ಮಂಜೂರು ಮಾಡಲಾಗುವುದು)	ವಸತಿರಹಿತರಿಗೆ ಹಾಗೂ ನಿವೇಶನರಹಿತರಿಗೆ ವಸತಿ ಸೌಕರ್ಯವನ್ನು ಒದಗಿಸಲು ಈ ಕೆಳಕಂಡ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ವಸತಿ ಯೋಜನೆಗಳು : • ಬಸವ ವಸತಿ ಯೋಜನೆ • ಪ್ರಧಾನಮಂತ್ರಿ ಆವಾಸ್ ಯೋಜನೆ(ಗ್ರಾಮೀಣ) • ದೇವರಾಜ್ ಅರಸು ವಸತಿ ಯೋಜನೆ • ಡಾ॥ ಬಿ.ಆರ್.ಅಂಬೇಡ್ಕರ್ ನಿವಾಸ್ ಯೋಜನೆ(ಗ್ರಾಮೀಣ) • ವಾಜಪೇಯಿ ನಗರ ವಸತಿ ಯೋಜನೆ(ನಗರ) • ಡಾ॥ ಬಿ.ಆರ್.ಅಂಬೇಡ್ಕರ್ ನಿವಾಸ್ ಯೋಜನೆ (ನಗರ) ಮೇಲ್ಕಂಡ ವಿವಿಧ ವಸತಿ ಯೋಜನೆಗಳಡಿ ಕಳೆದ 5 ವರ್ಷದಲ್ಲಿ ರಾಜ್ಯ ಸರ್ಕಾರವು ಒಟ್ಟು 15,00,000 ಮನೆಗಳನ್ನು ನಿರ್ಮಿಸುವ ಗುರಿಯನ್ನು ಹೊಂದಲಾಗಿದ್ದು, ಸದರಿ ಗುರಿಗೆ ಎದುರಾಗಿ ಒಟ್ಟು 11,35,252 ಮನೆಗಳನ್ನು ನಿರ್ಮಿಸಲಾಗಿದೆ. ಪ್ರಸಕ್ತ ವರ್ಷ 4 ಲಕ್ಷ ಮನೆಗಳನ್ನು ನಿರ್ಮಿಸುವ ಗುರಿ ಹೊಂದಿದ್ದು, ಇಲ್ಲಿಯವರೆಗೆ 61631 ಮನೆಗಳನ್ನು ನಿರ್ಮಿಸಲಾಗಿದೆ. ಸರ್ಕಾರವು ಪ್ರತಿ ವರ್ಷ ಆಯವ್ಯಯದಲ್ಲಿ ಒದಗಿಸುವ ಅನುದಾನಕ್ಕೆ ಅನುಗುಣವಾಗಿ ಮನೆಗಳ ಗುರಿಯನ್ನು ನಿಗದಿಪಡಿಸಿ ಹಂತ ಹಂತವಾಗಿ ವಸತಿರಹಿತರಿಗೆ ವಸತಿ ಸೌಕರ್ಯವನ್ನು ಒದಗಿಸಲು ಕ್ರಮವಹಿಸಲಾಗುತ್ತಿದೆ.

ಕ್ರ ಸಂ.	ಪ್ರಶ್ನೆ	ಉತ್ತರ
		ನಿವೇಶನರಹಿತರಿಗೆ ನಿವೇಶನ ಹಂಚಿಕೆ ಮಾಡಲು ಗ್ರಾಮೀಣ ಪ್ರದೇಶದಲ್ಲಿ **ಇಂದಿರಾ ಗ್ರಾಮೀಣ ವಸತಿ ನಿವೇಶನ ಯೋಜನೆ** ಮತ್ತು ನಗರ ಪ್ರದೇಶಗಳಲ್ಲಿ **ವಾಜಪೇಯಿ ನಗರ ನಿವೇಶನ ಯೋಜನೆಗಳು** ಜಾರಿಯಲ್ಲಿದ್ದು ಈ ಯೋಜನೆಗಳಡಿ ನಿವೇಶನ ಹಂಚಿಕೆ ಮಾಡಲು ಸರ್ಕಾರಿ ಜಮೀನಿಗೆ ಪ್ರಥಮ ಆದ್ಯತೆ ನೀಡಲಾಗಿದೆ. ಸರಕಾರಿ ಜಮೀನು ಲಭ್ಯವಿಲ್ಲದ ಕಡೆಗಳಲ್ಲಿ ಖಾಸಗಿ ಜಮೀನನ್ನು ಭೂ ಮಾಲೀಕರ ಸಹಮತದೊಂದಿಗೆ ಖರೀದಿಸಲು ಕ್ರಮವಹಿಸಲಾಗುತ್ತಿದೆ.

ಸರ್ಕಾರದ ಆದೇಶ ಸಂಖ್ಯೆ: ವಇ 33 ಹೆಚ್‌ಎಹೆಚ್ 2016 (ಭಾ-2) ದಿನಾಂಕ: 12.07.2016 ರಲ್ಲಿ ಜಮೀನು ಖರೀದಿಯ ದರವನ್ನು ಈ ಕೆಳಕಂಡಂತೆ ನಿಗದಿಪಡಿಸಲಾಗಿದೆ.

ಕ್ರ.ಸಂ.	ಪ್ರದೇಶ	ನಿಗದಿಪಡಿಸಲಾಗಿರುವ ಗರಿಷ್ಟ ದರ (ರೂ.ಲಕ್ಷಗಳಲ್ಲಿ)
1	ಗ್ರಾಮೀಣ ಪ್ರದೇಶ	9.00
2	ಪಟ್ಟಣ ಪಂಚಾಯಿತಿ	12.00
3	ಪುರಸಭೆ	15.00
4	ನಗರಸಭೆ	22.50
5	ಮಹಾನಗರ ಪಾಲಿಕೆ	37.50
6	ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ	75.00

ಖಾಸಗಿ ಜಮೀನು ಖರೀದಿಸಲು ಗ್ರಾಮೀಣ ಪ್ರದೇಶಗಳಲ್ಲಿ ಮಾರ್ಗಸೂಚಿ ದರದ ನಾಲ್ಕು ಪಟ್ಟು ಅಥವಾ ಪರಿಷ್ಕೃತ ಗರಿಷ್ಟ ಮಿತಿ ರೂ.9.00 ಲಕ್ಷಗಳು ಇದರಲ್ಲಿ ಯಾವುದು ಕಡಿಮೆಯೋ ಅದನ್ನು ಅನ್ವಯಿಸುವಂತೆ ಹಾಗೂ ನಗರ ಪ್ರದೇಶಗಳಲ್ಲಿ ಮಾರ್ಗಸೂಚಿ ಬೆಲೆಯ ಮೂರು ಪಟ್ಟು ಅಥವಾ ಆಯಾ ಸ್ಥಳೀಯ ಸಂಸ್ಥೆಗಳಿಗೆ ನಿಗದಿಪಡಿಸಲಾದ ಪರಿಷ್ಕೃತ ಗರಿಷ್ಟ ದರ ಇದರಲ್ಲಿ ಯಾವುದು ಕಡಿಮೆಯೋ ಅದನ್ನು ಅನ್ವಯಿಸುವಂತೆ ಆದೇಶಿಸಲಾಗಿದೆ.

ಸರ್ಕಾರವು ಪ್ರತಿ ವರ್ಷ ಆಯವ್ಯಯದಲ್ಲಿ ಒದಗಿಸುವ ಅನುದಾನಕ್ಕೆ ಅನುಗುಣವಾಗಿ ಖಾಸಗೀ ಜಮೀನು ಖರೀದಿಸಿ ಹಂತ ಹಂತವಾಗಿ ನಿವೇಶನ ರಹಿತರಿಗೆ ನಿವೇಶನಸಹಿತ ವಸತಿ ಸೌಕರ್ಯ ಒದಗಿಸಲು ಕ್ರಮವಹಿಸಲಾಗುತ್ತಿದೆ.

ಸಂಖ್ಯೆ: ವಇ 161 ಹೆಚ್‌ಎಎಂ 2018

(ಯು.ಟಿ.ಅಬ್ದುಲ್ ಖಾದರ್)
ವಸತಿ ಸಚಿವರು.

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	516
ವಿಧಾನ ಸಭೆಯ ಸದಸ್ಯರ ಹೆಸರು	ಶ್ರೀ ದತ್ತಾತ್ರೇಯ ಸಿ. ಪಾಟೀಲ ರೇವೂರ (ಅಪ್ಪು ಗೌಡ) (ಗುಲ್ಬರ್ಗಾ ದಕ್ಷಿಣ)
ಉತ್ತರಿಸಬೇಕಾದ ದಿನಾಂಕ	11/07/2018
ಉತ್ತರಿಸುವ ಸಚಿವರು	ವಸತಿ ಸಚಿವರು

ಕ್ರ.ಸ.	ಪ್ರಶ್ನೆ	ಉತ್ತರ
ಅ)	ಕಲಬುರಗಿ ದಕ್ಷಿಣ ಮತಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ತಾರ್ ಫೈಲ್‌ನಲ್ಲಿ ಪ್ರಧಾನ ಮಂತ್ರಿ ಆವಾಸ್ ಯೋಜನೆಯಡಿಯಲ್ಲಿ ಮನೆಗಳನ್ನು ಕಟ್ಟಲು ಉದ್ದೇಶಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ.
ಆ)	ಈ ಮನೆಗಳನ್ನು ನಿರ್ಮಿಸಲು ಯಾವ ಸಂಸ್ಥೆಗೆ ಗುತ್ತಿಗೆ ನೀಡಲಾಗಿದೆ;	ಪ್ರಧಾನ ಮಂತ್ರಿ ಆವಾಸ್ ಯೋಜನೆಯಡಿ ಕಲಬುರಗಿ ದಕ್ಷಿಣ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ತಾರ್ ಫೈಲ್‌ನಲ್ಲಿ ಮನೆಗಳನ್ನು ನಿರ್ಮಿಸಲು ಟೆಂಡರ್ ಮುಖಾಂತರ ಶ್ರೀ. ಸೈಯಾದ ಮನ್ನಾನ್, ಪ್ರಥಮ ದರ್ಜೆ ಗುತ್ತಿಗೆದಾರರು, ನಂ:5-4-201 ಎಂ.ಜಿ. ರೋಡ್, ಟಿ.ಎಸ್ ಸಿಕೆಂದ್ರಾಬಾದ್ ಇವರಿಗೆ ವಹಿಸಲಾಗಿದೆ.
ಇ)	ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರು ಮತ್ತು ಸಾಮಾನ್ಯ ವರ್ಗಕ್ಕೆ ಸೇರಿದ ಫಲಾನುಭವಿಗಳಿಗೆ ಎಷ್ಟು ಮೊತ್ತವನ್ನು ಪಾವತಿ ಮಾಡಬೇಕಾಗಿದೆ.	<u>ಪ್ರತಿ ಮನೆಯ ಅಂದಾಜು ಮೊತ್ತ ರೂ.4,98,000.00</u> ಅ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಫಲಾನುಭವಿಗಳಿಗೆ ರಾಜ್ಯ ಸರ್ಕಾರದಿಂದ ರೂ.2.00 ಲಕ್ಷ ಮತ್ತು ಕೇಂದ್ರ ಸರ್ಕಾರದಿಂದ ರೂ.1.50 ಲಕ್ಷ ಅನುದಾನವನ್ನು ಒದಗಿಸಲಾಗುವುದು. ಸದರಿ ಫಲಾನುಭವಿಯು ಕಡ್ಡಾಯವಾಗಿ ತನ್ನ ಪಾಲಿನ ಅನುದಾನವಾಗಿ ರೂ. 49800/-(ಶೇ.10%) ಪಾವತಿಸಬೇಕಾಗಿದ್ದು, ಬಾಕಿ ಮೊತ್ತ ರೂ. 98,200/- ಗಳನ್ನು ಫಲಾನುಭವಿಯು ತಾನೇ ಭರಿಸಬಹುದು ಅಥವಾ ಬ್ಯಾಂಕ್‌ನಿಂದ ಸಾಲದ ರೂಪದಲ್ಲಿ ಪಡೆದು ಭರಿಸಬಹುದಾಗಿದೆ. ಆ) ಇತರೇ ಸಾಮಾನ್ಯ ವರ್ಗದ ಫಲಾನುಭವಿಗಳಿಗೆ ರಾಜ್ಯ ಸರ್ಕಾರದಿಂದ ರೂ.1.20 ಲಕ್ಷ ಮತ್ತು ಕೇಂದ್ರ ಸರ್ಕಾರದಿಂದ ರೂ.1.50 ಲಕ್ಷ ಒದಗಿಸಲಾಗುವುದು. ಫಲಾನುಭವಿಯು ಕಡ್ಡಾಯವಾಗಿ ತನ್ನ ಪಾಲಿನ ಅನುದಾನವಾಗಿ ರೂ. 74700/-(ಶೇ.15%) ಪಾವತಿಸಬೇಕಾಗಿದ್ದು, ಬಾಕಿ ಮೊತ್ತ ರೂ.1,53,300/- ಗಳನ್ನು ಫಲಾನುಭವಿಯು ತಾನೇ ಭರಿಸಬಹುದು ಅಥವಾ ಬ್ಯಾಂಕ್‌ನಿಂದ ಸಾಲದ ರೂಪದಲ್ಲಿ ಪಡೆದು ಭರಿಸಬಹುದಾಗಿದೆ.

ಕ್ರ.ಸ.	ಪ್ರಶ್ನೆ	ಉತ್ತರ
ಈ)	ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಉಚಿತವಾಗಿ ಮನೆಗಳನ್ನು ಕಟ್ಟಿಕೊಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಅಥವಾ ಎಸ್‌ಸಿಪಿ / ಟಿಎಸ್‌ಪಿ ಯೋಜನೆಯ ಅಡಿಯಲ್ಲಿ ಹಣವನ್ನು ಭರಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; (ಸಂಪೂರ್ಣ ವಿವರ ನೀಡುವುದು)	ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ರಾಜ್ಯ ಸರ್ಕಾರದಿಂದ ಪ್ರತಿ ಮನೆಗೆ ರೂ.2.00 ಲಕ್ಷಗಳನ್ನು ಹಾಗೂ ಕೇಂದ್ರ ಸರ್ಕಾರದಿಂದ ರೂ. 1.50 ಲಕ್ಷಗಳ ಸಹಾಯಧನ ಒದಗಿಸಲಾಗುತ್ತಿದ್ದು, ಸದರಿ ಫಲಾನುಭವಿಗಳಿಗೆ ಎಸ್.ಸಿ.ಪಿ/ ಟಿ.ಎಸ್.ಪಿ ಯೋಜನೆಯ ಅಡಿಯಲ್ಲಿ ನಗರ ಸ್ಥಳೀಯ ಸಂಸ್ಥೆಗಳು ಶೇ. 24.10 ಅನುದಾನದ ಪೈಕಿ ಅನುದಾನ ಲಭ್ಯತೆಯ ಮೇರೆಗೆ ಪ್ರತಿ ಫಲಾನುಭವಿಗೆ ಗರಿಷ್ಠ ರೂ. 1.00 ಲಕ್ಷಗಳ ವರೆಗೆ (ಸರ್ಕಾರದ ಆದೇಶ ಸಂಖ್ಯೆ : ನಅಇ 32 ಪಿಎನ್‌ಜಿ 2015, ದಿನಾಂಕ 30.07.2015 ರಂತೆ) ಅನುದಾನ ಒದಗಿಸಲು ಅವಕಾಶ ಕಲ್ಪಿಸಲಾಗಿದೆ.

ವಇ 104 ಹೆಚ್‌ಎಫ್‌ಎ 2018

(ಯು.ಟಿ. ಅಬ್ದುಲ್ ಖಾದರ್)
ವಸತಿ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ – 461
ಉತ್ತರಿಸಬೇಕಾದ ದಿನಾಂಕ – 11.07.2018
ಸದಸ್ಯರ ಹೆಸರು – ಶ್ರೀ ಟಿ.ಡಿ. ರಾಜೇಗೌಡ(ಶೃಂಗೇರಿ)

ಕ್ರ ಸಂ.	ಪ್ರಶ್ನೆ	ಉತ್ತರ
ಅ)	ಕಳೆದ 3 ವರ್ಷಗಳಲ್ಲಿ ಶೃಂಗೇರಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಶೃಂಗೇರಿ–ಕೊಪ್ಪ ಎನ್.ಆರ್.ಪುರ ತಾಲ್ಲೂಕುಗಳಲ್ಲಿ ಶ್ರೀ ದೇವರಾಜ ಅರಸು ಹಿಂದುಳಿದ ವರ್ಗಗಳ ಯೋಜನೆ ಅಡಿಯಲ್ಲಿ ವಸತಿ ರಹಿತ ಫಲಾನುಭವಿಗಳಿಗೆ ಹಂಚಿಕೆಯಾಗಿರುವ ಮನೆಗಳ ಸಂಖ್ಯೆ ಎಷ್ಟು; (ವಿವರ ಒದಗಿಸುವುದು)	ಕಳೆದ 3 ವರ್ಷಗಳಲ್ಲಿ ಶೃಂಗೇರಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಶೃಂಗೇರಿ–ಕೊಪ್ಪ ಎನ್.ಆರ್.ಪುರ ತಾಲ್ಲೂಕುಗಳಲ್ಲಿ ವಿಶೇಷ ವರ್ಗದ ಯೋಜನೆ (ದೇವರಾಜ ಅರಸು ವಸತಿ ಯೋಜನೆ)ಯಡಿ ಒಟ್ಟು 191 ಮನೆಗಳನ್ನು ಮಂಜೂರು ಮಾಡಲಾಗಿದೆ. ಈ ಪೈಕಿ 33 ಫಲಾನುಭವಿಗಳನ್ನು ಆಯ್ಕೆ ಮಾಡಲಾಗಿದ್ದು, 14 ಮನೆಗಳು ಪೂರ್ಣಗೊಂಡಿದ್ದು, 16 ಮನೆಗಳು ವಿವಿಧ ಹಂತದಲ್ಲಿ ಪ್ರಗತಿಯಲ್ಲಿದೆ. ಇನ್ನುಳಿದ 3 ಮನೆಗಳು ಪ್ರಾರಂಭಗೊಂಡಿರುವುದಿಲ್ಲ. ವಿವರ ಇಂತಿದೆ: (ಕೆಳಗಿನ ಕೋಷ್ಟಕ)
ಆ)	ಅದರಲ್ಲಿ ಪೂರ್ಣಗೊಂಡಿರುವ ಮತ್ತು ಪೂರ್ಣಗೊಳ್ಳದೆ ಇರುವ ಮನೆಗಳ ಸಂಖ್ಯೆ ಎಷ್ಟು; (ವಿವರ ಒದಗಿಸುವುದು)	

ತಾಲ್ಲೂಕು	ಶ್ರೇಣಿ	ಗುರಿ	ಆಯ್ಕೆ	ಪೂರ್ಣ	ವಿವಿಧ ಹಂತದ ಪ್ರಗತಿಯಲ್ಲಿರುವ ಒಟ್ಟು ಮನೆಗಳು	ಪ್ರಾರಂಭವಾದ ಮನೆ
ಕೊಪ್ಪ	2016-17	7	7	4	3	0
ಕೊಪ್ಪ	2017-18	2	2	0	2	0
ಎನ್.ಆರ್.ಪುರ	2015-16	2	2	2	0	0
ಎನ್.ಆರ್.ಪುರ	2016-17	20	20	8	10	2
ಎನ್.ಆರ್.ಪುರ	2017-18	2	2	0	1	1
ಕೊಪ್ಪ/ ಎನ್.ಆರ್.ಪುರ/ ಶೃಂಗೇರಿ	2017-18	158	0	0	0	0
ಒಟ್ಟು		191	33	14	16	3

ಕ್ರ ಸಂ.	ಪ್ರಶ್ನೆ	ಉತ್ತರ
ಇ)	ಮಂಜೂರಾಗಿ ಪೂರ್ಣಗೊಳ್ಳದೆ ಇರುವ ಮನೆಗಳನ್ನು ಪೂರ್ಣಗೊಳಿಸಲು ಸರ್ಕಾರ ತೆಗೆದುಕೊಂಡ ಕ್ರಮವೇನು? (ವಿವರ ಒದಗಿಸುವುದು)	ವಸತಿ ಯೋಜನೆಯಡಿ ಆಯ್ಕೆಯಾದ ಫಲಾನುಭವಿಗಳು ತಮ್ಮ ಮನೆಯನ್ನು ತಾವೇ ನಿರ್ಮಾಣ ಮಾಡಿಕೊಳ್ಳಬೇಕಾಗಿದ್ದು, ಫಲಾನುಭವಿಗಳು ತಮ್ಮ ಅನೇಕ ವೈಯಕ್ತಿಕ ಕಾರಣಗಳಿಂದಾಗಿ ಹಾಗೂ ಮಳೆಗಾಲ, ಆರ್ಥಿಕ ಸಮಸ್ಯೆಗಳು, ಬಡತನ ಮುಂತಾದವುಗಳಿಂದ ಮನೆಗಳನ್ನು ನಿಗಧಿತ ಸಮಯದಲ್ಲಿ ಪೂರ್ಣಗೊಳಿಸಲಾಗುತ್ತಿಲ್ಲ. ಆದಾಗ್ಯೂ ಮನೆಗಳನ್ನು ಪೂರ್ಣಗೊಳಿಸಲು ಫಲಾನುಭವಿಗೆ ತಿಳುವಳಿಕೆ ಪತ್ರಗಳನ್ನು ಜಾರಿ ಮಾಡುವ ಮೂಲಕ ಅವರ ಮನವೊಲಿಸಿ ಮನೆ ನಿರ್ಮಾಣಕ್ಕೆ ಒತ್ತು ನೀಡಲಾಗಿದೆ. ಇದಲ್ಲದೇ ಅನೇಕ ವಿಡಿಯೋ ಕಾನ್ಫರೆನ್ಸ್ ಮತ್ತು ಪ್ರಗತಿ ಪರಿಶೀಲನಾ ಸಭೆಗಳಲ್ಲಿ ಪ್ರಾರಂಭವಾಗದ ಮನೆಗಳನ್ನು ಕೂಡಲೇ ಪ್ರಾರಂಭಿಸಲು ಹಾಗೂ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳಲು ತಿಳಿಸಲಾಗಿದೆ.

ಸಂಖ್ಯೆ: ವಇ 169 ಹೆಚ್‌ಎಂ 2018

(ಯು.ಟಿ.ಅಬ್ದುಲ್ ಖಾದರ್)
ವಸತಿ ಸಚಿವರು.

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 363
ಉತ್ತರಿಸಬೇಕಾದ ದಿನಾಂಕ : 11.7.2018
ಸದಸ್ಯರ ಹೆಸರು : ಶ್ರೀ ಕೆ.ಮಾಡಾಳ್ ವಿರೂಪಾಕ್ಷಪ್ಪ

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	2016-17ನೇ ಸಾಲಿನ ಬಸವ ವಸತಿ ಯೋಜನೆಯಡಿ ಆಯ್ಕೆಯಾದ ಚನ್ನಗಿರಿ ವಿಧಾನಸಭಾ ಕ್ಷೇತ್ರದ ಸುಮಾರು 647 ಅರ್ಹ ಫಲಾನುಭವಿಗಳ ಮನೆಗಳು ಭೌತಿಕವಾಗಿ ತಳಪಾಯ ಮತ್ತು ಜಿ.ಪಿ.ಎಸ್. ಆಗಿ ನಿಗಮದಿಂದ ಆಡಿಟ್ ಆಗಿದ್ದರೂ ಅನುದಾನ ಬಿಡುಗಡೆ ಮಾಡದೇ ಬ್ಲಾಕ್ ಮಾಡಲು ಕಾರಣವೇನು?	ವಸತಿ ಯೋಜನೆಯ ಮಾರ್ಗಸೂಚಿಗಳ ಪ್ರಕಾರ ವಸತಿ ಯೋಜನೆಗಳಡಿ ಆಯ್ಕೆಯಾದ ಫಲಾನುಭವಿಗಳು ನಿಗಮದ ಅನುಮೋದನೆಯಾದ ದಿನಾಂಕದ ನಂತರ 90 ದಿನಗಳೊಳಗೆ ತನ್ನ ಮನೆಯ ಕಾಮಗಾರಿಯನ್ನು ಪ್ರಾರಂಭಿಸಿಕೊಳ್ಳಬೇಕಿರುತ್ತದೆ. ಒಂದು ವೇಳೆ ಈ ಅವಧಿಯೊಳಗೆ ಫಲಾನುಭವಿಯು ಮನೆಯನ್ನು ಪ್ರಾರಂಭ ಮಾಡಿಕೊಳ್ಳದಿದ್ದಲ್ಲಿ ಮನೆಯನ್ನು ರದ್ದುಪಡಿಸಲು ಅವಕಾಶ ಕಲ್ಪಿಸಲಾಗಿದೆ. ಆದಾಗ್ಯೂ ಸಹ ಮನೆ ನಿರ್ಮಾಣದಲ್ಲಿ ಫಲಾನುಭವಿಗೆ ಇರುವ ವೈಯುಕ್ತಿಕ ಸಮಸ್ಯೆಗಳು, ಮಳೆಗಾಲ, ಆರ್ಥಿಕ ಸಮಸ್ಯೆಗಳು, ಬಡತನ ಮುಂತಾದ ಹಿನ್ನೆಲೆಯನ್ನು ಗಮನದಲ್ಲಿಟ್ಟುಕೊಂಡು ಫಲಾನುಭವಿಗೆ ತಿಳುವಳಿಕೆ ಪತ್ರಗಳನ್ನು ಜಾರಿ ಮಾಡುವ ಮೂಲಕ ಅವರ ಮನವೊಲಿಸಿ ಮನೆ ನಿರ್ಮಾಣಕ್ಕೆ ಒತ್ತು ನೀಡಲಾಗಿದೆ ಹಾಗೂ ಅನೇಕ ವಿಡಿಯೋ ಕಾನ್ಫರೆನ್ಸ್ ಮತ್ತು ಪ್ರಗತಿ ಪರಿಶೀಲನಾ ಸಭೆಗಳಲ್ಲಿ ಪ್ರಾರಂಭವಾಗದ ಮನೆಗಳನ್ನು ಕೂಡಲೇ ಪ್ರಾರಂಭಿಸಲು ಬೇಕಾದ ಕ್ರಮಗಳನ್ನು ತೆಗೆದುಕೊಳ್ಳಲು ತಿಳಿಸಲಾಗಿದೆ. ಅಲ್ಲದೇ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ಮೂಲಕ ಸಾಕಷ್ಟು ತಿಳುವಳಿಕೆ ಪತ್ರಗಳನ್ನು ನೀಡಿದ್ದಾಗ್ಯೂ ಸುಮಾರು ಮನೆಗಳು ಪ್ರಾರಂಭವಾಗಿರುವುದಿಲ್ಲ. ಇಂತಹ ಪ್ರಾರಂಭವಾಗದ ಮನೆಗಳನ್ನು ರದ್ದುಪಡಿಸಿ, ಅವಶ್ಯಕತೆ ಇರುವ ಕ್ಷೇತ್ರಗಳಿಗೆ 2017-18ನೇ ಶ್ರೇಣಿಯಡಿಯಲ್ಲಿ ಹೊಸದಾಗಿ ಅರ್ಹ ಫಲಾನುಭವಿಗಳನ್ನು ಆಯ್ಕೆ ಮಾಡಲು ಹೆಚ್ಚುವರಿಯಾಗಿ ಗುರಿ ನಿಗದಿಪಡಿಸಿ ಆಯ್ಕೆ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ. ಅದರಂತೆ, 2016-17ನೇ ಸಾಲಿನ ಬಸವ ವಸತಿ ಯೋಜನೆಯಡಿ ಚೆನ್ನಗಿರಿ ವಿಧಾನಸಭಾ ಕ್ಷೇತ್ರದಲ್ಲಿ 717 ಮನೆಗಳನ್ನು ರದ್ದುಪಡಿಸಲಾಗಿರುತ್ತದೆ. ಈ ಮನೆಗಳು ನಿಗದಿತ ಕಾಲಾವಧಿಯಲ್ಲಿ ಭೌತಿಕವಾಗಿ ಪ್ರಾರಂಭವಾಗದಿರುವ ಬಗ್ಗೆ ಹಾಗೂ ತಳಪಾಯ ಜಿ.ಪಿ.ಎಸ್. ಮಾಡದಿರುವ ಹಿನ್ನೆಲೆಯಲ್ಲಿ ಈ ಮನೆಗಳನ್ನು ರದ್ದುಪಡಿಸಲಾಗಿದೆ.

ಸಂಖ್ಯೆ: ವಇ 169 ಹೆಚ್ಎಂ 2018

(ಯು.ಟಿ.ಅಬ್ದುಲ್ ಖಾದರ್)
ವಸತಿ ಸಚಿವರು.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ – 195
ಉತ್ತರಿಸಬೇಕಾದ ದಿನಾಂಕ – 11.07.2018
ಸದಸ್ಯರ ಹೆಸರು – ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ(ಭಾಲ್ಕಿ)

ಕ್ರ. ಸಂ.	ಪ್ರಶ್ನೆ	ಉತ್ತರ
(ಅ)	ರಾಜ್ಯದಲ್ಲಿ ವಿವಿಧ ವಸತಿ ಯೋಜನೆಗಳಡಿ ಮನೆಗಳನ್ನು ಮಂಜೂರು ಮಾಡಲು ಅನುಸರಿಸುತ್ತಿರುವ ಮಾನದಂಡಗಳೇನು;	ಅರ್ಜಿದಾರರು ವಸತಿ ಯೋಜನೆಗಳಡಿಯಲ್ಲಿ ಸೌಲಭ್ಯವನ್ನು ಪಡೆಯಲು ಈ ಕೆಳಕಂಡ ಅರ್ಹತೆಗಳನ್ನು ಕಡ್ಡಾಯವಾಗಿ ಹೊಂದಿರಬೇಕಾಗಿರುತ್ತದೆ. • ಅರ್ಜಿದಾರರು ಕಡ್ಡಾಯವಾಗಿ ಮಹಿಳೆಯಾಗಿರಬೇಕು(ವಿವಾಹಿತ ಅಥವಾ ಏಕ ಮಹಿಳಾ ಒಡೆತನದ ಗೃಹಿಣಿ). ಮಾಜಿ ಯೋಧರು, ವಿಧುರರು, ಅಂಗವಿಕಲರು ಮತ್ತು ಹಿರಿಯ ನಾಗರೀಕರಾಗಿದ್ದಲ್ಲಿ ಪುರುಷರು ಸಹ ಅರ್ಹರಾಗಿರುತ್ತಾರೆ. • ಅರ್ಜಿದಾರರ ಕುಟುಂಬವು ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಹಿಂದುಳಿದಿದ್ದು, ವಾರ್ಷಿಕ ಆದಾಯವು ಗ್ರಾಮೀಣ ಪ್ರದೇಶದವರಾಗಿದ್ದಲ್ಲಿ ರೂ.32,000/- ಕ್ಕಿಂತ ಕಡಿಮೆ ಇರಬೇಕು ಹಾಗೂ ನಗರ ಪ್ರದೇಶದವರಾಗಿದ್ದಲ್ಲಿ ರೂ.87,600/-ಕ್ಕಿಂತ ಕಡಿಮೆ ಇರಬೇಕು. • ಅರ್ಜಿದಾರರ ಕುಟುಂಬವು ವಸತಿ ರಹಿತರಾಗಿದ್ದು, ಅರ್ಜಿದಾರರು ಅಥವಾ ಕುಟುಂಬದ ಯಾವುದೇ ಸದಸ್ಯರ ಹೆಸರಿನಲ್ಲಿ ಕರ್ನಾಟಕದ ಯಾವುದೇ ಭಾಗದಲ್ಲಿ ಸ್ವಂತ ಮನೆಯನ್ನು ಹೊಂದಿರಬಾರದು. ಶಿಥಿಲಗೊಂಡ ಮನೆ ಅಥವಾ ಗುಡಿಸಲಿನಲ್ಲಿ ವಾಸಿಸುತ್ತಿರುವವರು ಅರ್ಹರಾಗಿರುತ್ತಾರೆ. • ಅರ್ಜಿದಾರರು ಸ್ವಂತ ನಿವೇಶನ ಹೊಂದಿದ್ದು, ನಿವೇಶನಕ್ಕೆ ಸಂಬಂಧಿಸಿದಂತೆ ಖಾತೆ ಹೊಂದಿರಬೇಕು (ಪಾರಂಪರಿಕ ಅರಣ್ಯ ಹಕ್ಕುಗಳ ಕಾಯ್ದೆಯನ್ವಯ ಜಿಲ್ಲಾ ಸಮಿತಿಯಿಂದ ನೀಡಲಾದ ಹಕ್ಕು ಪತ್ರ ಪಡೆದಿದ್ದಲ್ಲಿ ವಸತಿ ಸೌಕರ್ಯ ಪಡೆಯಲು ಪರಿಗಣಿಸಬಹುದಾಗಿದೆ.) • ಬೇರೆ ಯಾವುದೇ ಯೋಜನೆ/ಇಲಾಖೆಯಿಂದ ಈಗಾಗಲೇ ವಸತಿ ಸೌಲಭ್ಯ ಪಡೆದಿರಬಾರದು. • ಪ್ರಧಾನಮಂತ್ರಿ ಆವಾಸ್ ಯೋಜನೆ(ಗ್ರಾ)ಯಡಿ ಕೇಂದ್ರ ಸರ್ಕಾರವು ನೀಡಲಾದ ಶಾಶ್ವತ ಕಾಯ್ದಿರಿಸಿದ ಪಟ್ಟಿ(Permanent Wait List)ಯಿಂದ ಆಯ್ಕೆ ಮಾಡಲಾಗುತ್ತದೆ.
(ಆ)	ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ವಿವಿಧ ವಸತಿ ಯೋಜನೆಗಳಡಿ ಎಷ್ಟು ಮನೆಗಳನ್ನು ಮಂಜೂರು ಮಾಡಲಾಗಿದೆ. (ತಾಲ್ಲೂಕುವಾರು ಮತ್ತು ಯೋಜನೆವಾರು ವಿವರ ಒದಗಿಸುವುದು)	ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ವಿವಿಧ ವಸತಿ ಯೋಜನೆಗಳಡಿ ಗ್ರಾಮೀಣ ಪ್ರದೇಶದಲ್ಲಿ ಒಟ್ಟು **1524184** ಮನೆಗಳು ನಗರ ಪ್ರದೇಶದಲ್ಲಿ 174147 ಮನೆಗಳನ್ನು ಮಂಜೂರು ಮಾಡಲಾಗಿದೆ. ತಾಲ್ಲೂಕುವಾರು ಮತ್ತು ಯೋಜನೆವಾರು ವಿವರವನ್ನು **ಅನುಬಂಧ-1 ಮತ್ತು 2** ರಲ್ಲಿ ಒದಗಿಸಿದೆ.
(ಇ)	ಮಂಜೂರು ಮಾಡಲಾದ ಮನೆಗಳಲ್ಲಿ ಈವರೆಗೆ ಎಷ್ಟು ಮನೆಗಳ ನಿರ್ಮಾಣ ಪೂರ್ಣಗೊಂಡಿದೆ; ಉಳಿದ ಮನೆಗಳ ನಿರ್ಮಾಣ ಕಾರ್ಯ ಯಾವ ಹಂತದಲ್ಲಿದೆ;	ಕಳೆದ ಮೂರು ವರ್ಷಗಳಿಂದ ಈ ಗ್ರಾಮೀಣ ವಸತಿ ವಸತಿ ಯೋಜನೆಗಳಡಿ **1256404** ಫಲಾನುಭವಿಗಳು ಆಯ್ಕೆಯಾಗಿದ್ದು, ಈವರೆಗೆ ಒಟ್ಟು **488639** ಮನೆಗಳು ಪೂರ್ಣಗೊಂಡಿದೆ **388792** ಮನೆಗಳು ವಿವಿಧ ಹಂತದ ಪ್ರಗತಿಯಲ್ಲಿವೆ. **285211** ಮನೆಗಳು ಪ್ರಾರಂಭವಾಗಬೇಕಾಗಿದೆ. **93762** ಮನೆಗಳು ರದ್ದಾಗಿರುತ್ತವೆ. ಅದೇ ರೀತಿ ನಗರ ವಸತಿ -ಯೋಜನೆಗಳಡಿ 111674 ಫಲಾನುಭವಿಗಳು ಆಯ್ಕೆಯಾಗಿದ್ದು, ಈವರೆಗೆ ಒಟ್ಟು 34293 ಮನೆಗಳು ಪೂರ್ಣಗೊಂಡಿದೆ. 30256 ಮನೆಗಳು ವಿವಿಧ ಹಂತದ ಪ್ರಗತಿಯಲ್ಲಿವೆ. 43628 ಮನೆಗಳು ಪ್ರಾರಂಭವಾಗಬೇಕಾಗಿದೆ. 3497 ಮನೆಗಳು ರದ್ದಾಗಿರುತ್ತವೆ. **ಅನುಬಂಧ-2** ರಲ್ಲಿ ಒದಗಿಸಲಾಗಿದೆ.
(ಈ)	ಮನೆ ಮಂಜೂರಾದರೂ ನಿರ್ಮಾಣಕ್ಕೆ ಅನುವಾಗುವಂತೆ ಹಣ ಜಮಾ ಮಾಡದಿರಲು ಕಾರಣಗಳೇನು;	ಫಲಾನುಭವಿಗಳು ತಮ್ಮ ಮನೆ ನಿರ್ಮಾಣ ಕಾರ್ಯ ಪ್ರಾರಂಭಿಸಿ, ಹಂತವಾರು ಜಿಪಿಎಸ್ ಛಾಯಾಚಿತ್ರ ಪ್ರಗತಿ ಅಳವಡಿಸಲಾದ ಮನೆಗಳನ್ನು ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತದ ಆಡಿಟ್ ವಿಭಾಗದಿಂದ ಪರಿಶೀಲಿಸಿ, ಅರ್ಹ ಫಲಾನುಭವಿಗಳಿಗೆ ನೇರವಾಗಿ ಅವರ ಖಾತೆಗಳಿಗೆ ಪ್ರಗತಿಗನುಗುಣವಾಗಿ ಅನುದಾನವನ್ನು ಬಿಡುಗಡೆ ಮಾಡಲಾಗುತ್ತಿದೆ. ಆದರೆ, ನಿಗದಿತ ಮಾನದಂಡಗಳನ್ನು ಅನುಸರಿಸಿ ನಿರ್ಮಿಸಿದ ಮನೆಗಳಿಗೆ ತಾತ್ಕಾಲಿಕವಾಗಿ ಅನುದಾನವನ್ನು ತಡೆಹಿಡಿಯಲಾಗುತ್ತದೆ.
(ಉ)	ಫಲಾನುಭವಿಗಳ ವಾರ್ಷಿಕ ಆದಾಯ ಮಿತಿ ಹೆಚ್ಚಿಸಲು ಸರ್ಕಾರ ಉದ್ದೇಶಿದೆಯೇ; ಹಾಗಿದ್ದಲ್ಲಿ ಯಾವಾಗ ಈ ಸಂಬಂಧ ಕ್ರಮ ಕೈಗೊಳ್ಳಲಾಗುವುದು?	ವಾರ್ಷಿಕ ಆದಾಯ ಮಿತಿ ಹೆಚ್ಚಿಸುವ ಸಂಬಂಧ ಪ್ರಸ್ತಾವನೆಯಿಲ್ಲ.

ಸಂಖ್ಯೆ: ವಇ 152 ಹೆಚ್‌ಎಎಂ 2018

(ಯು.ಟಿ.ಅಬ್ದುಲ್ ಖಾದರ್)
ವಸತಿ ಸಚಿವರು.

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 299
ಉತ್ತರಿಸಬೇಕಾದ ದಿನಾಂಕ : 11.7.2018
ಸದಸ್ಯರ ಹೆಸರು : ಶ್ರೀ ಉಮಾನಾಥ ಎ. ಕೋಟ್ಯಾನ್
ಉತ್ತರಿಸುವ ಸಚಿವರು : ವಸತಿ ಸಚಿವರು.

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>(ಅ)</td><td>ಕಳೆದ ಮೂರು ವರ್ಷಗಳಲ್ಲಿ ರಾಜ್ಯದಲ್ಲಿನ ಗ್ರಾಮೀಣ ಪ್ರದೇಶಗಳಲ್ಲಿ ವಿವಿಧ ವಸತಿ ಯೋಜನೆಗಳ ಮೂಲಕ ಒದಗಿಸಿಕೊಡಲಾದ ಮನೆ/ ನಿವೇಶನಗಳ ಪ್ರಮಾಣ ಎಷ್ಟು ?</td><td>ಕಳೆದ ಮೂರು ವರ್ಷಗಳಲ್ಲಿ ಅಂದರೆ 2015-16 ರಿಂದ 2017-18 ರವರೆಗೆ ಗ್ರಾಮೀಣ ಪ್ರದೇಶಗಳಲ್ಲಿ ವಿವಿಧ ವಸತಿ ಯೋಜನೆಯಡಿಯಲ್ಲಿ 6,75,629 ಮನೆಗಳನ್ನು ನಿರ್ಮಿಸಲಾಗಿದ್ದು ಹಾಗೂ 23,270 ನಿವೇಶನಗಳನ್ನು ಹಂಚಿಕೆ ಮಾಡಲಾಗಿದ್ದು, ವಿವರ ಈ ಕೆಳಗಿನಂತೆ ಇದೆ.

<table>
<tr><th>ಆರ್ಥಿಕ ವರ್ಷ</th><th>ನಿರ್ಮಿಸಲಾದ ಮನೆಗಳು</th><th>ಹಂಚಿಕೆ ಮಾಡಲಾದ ನಿವೇಶನಗಳು</th></tr>
<tr><td>2015-2016</td><td>2,21,347</td><td>8,021</td></tr>
<tr><td>2016-2017</td><td>2,46,319</td><td>6,202</td></tr>
<tr><td>2017-2018</td><td>2,07,963</td><td>9,047</td></tr>
<tr><td>ಒಟ್ಟು</td><td>6,75,629</td><td>23,270</td></tr>
</table></td></tr>
<tr><td>(ಆ)</td><td>ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳ ಗ್ರಾಮೀಣ ಪ್ರದೇಶಗಳಿಗೆ ಒದಗಿಸಿಕೊಡಲಾದ ವಸತಿ ಯೋಜನೆಗಳಾವುವು ?</td><td>ರಾಜ್ಯದಲ್ಲಿ ವಸತಿ ರಹಿತರಿಗೆ ವಸತಿ ಸೌಕರ್ಯವನ್ನು ಕಲ್ಪಿಸಲು ಈ ಕೆಳಕಂಡ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

• ಬಸವ ವಸತಿ ಯೋಜನೆ
• ಪ್ರಧಾನ ಮಂತ್ರಿ ಆವಾಸ್ ಯೋಜನೆ – ಗ್ರಾಮೀಣ
• ಡಾ|| ಬಿ.ಆರ್. ಅಂಬೇಡ್ಕರ್ ನಿವಾಸ್ – ಗ್ರಾಮೀಣ
